ದತ್ತಾತ್ರೇಯ ಕೃಷ್ಣ ಭಾರದ್ವಾಜ

ಂಕರ ಕರ್ನಾಟಕ ಪುಸ್ತಕ ಭಾಂಡಾರ,
ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು.
ನಾಳಮಡ್ಡಿ ಧಾರವಾಡ.

ದೇಶೋನ್ನತಿ ಗ್ರಂಥಮಾಲಾ ಸಂ. ೨.

ಕರ್ಮವೀರ



ಮಹಾತ್ಮಾ ಮೋಹನದಾಸ್ ಕರಮಚಾಂದ್
ಗಾಂಧೀಯವರು.

ದೇಶೋನ್ನತಿ ಗ್ರಂಥಮಾಲೆ ಸಂ. ೨.

ದೀನಬಂಧು 'ರೆವರೆಂಡ್' ಆಂಡ್ರೂಜ್‌ರ

ಅಸಹಕಾರದ ಪತ್ರಗಳು

'ಹಿಂದೀ ಸ್ವರಾಜ್ಯ'
'ತಿಲಕ ಮಹಾರಾಜರು' 'ಅಮೃತಸರ ಪಟ್ಟಣ'
ಇತ್ಯಾದಿ ಗ್ರಂಥಕರ್ತರಾದ

ದತ್ತಾತ್ರೇಯ ಕೃಷ್ಣ ಭಾರದ್ವಾಜ ವಿದ್ಯಾಭೂಷಣ,
ಸಂಪಾದಕ, ತಿಲಕಸಂದೇಶ; ಉಪಾಧ್ಯಕ್ಷ, ತಿಲಕ ಮಹಾವಿದ್ಯಾಲಯ,
ಮಂಗಳೂರು, ಇವರಿಂದ ರಚಿತವಾದುದು.

ಪ್ರಕಾಶಕರು:
ಕೆ. ಎಮ್. ದಾಸಪ್ರಭು ಎಂಡ್ ಸನ್ಸ್,
ರಥಬೀದಿ, ಮಂಗಳೂರು.

೧೯೨೧
ಮಂಗಳೂರು
ಶ್ರೀ ಶಾರದಾ ಛಾಪಖಾನೆಯಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಬೆಲೆ: ೦-೬-೦.

TO

DEENABANDHU

SRIYUT C. F. ANDREWS,

The Exemplary Christian.

ಈ ಪುಸ್ತಕವು

ಕ್ರೈಸ್ತಧರ್ಮದ ಪ್ರತಿ ಮೂರ್ತಿಯಂತಿರುವ

ದೀನಬಂಧು

ಶ್ರೀಯುತ ಸಿ. ಎಫ್. ಆಂಡ್ರೂಜ್‌ರವರಿಗೆ

ಅತ್ಯಂತ ವಿನಯಪೂರ್ವಕವಾಗಿ

ಸಮರ್ಪಿಸಲ್ಪಟ್ಟಿದೆ.

ದೇಶೋನ್ನತಿ ಗ್ರಂಥಮಾಲಾ ಸಂ. ೨.

ದೀನಬಂಧು



ರೆವರೆಂಡ್ ಸಿ. ಎಫ್. ಆಂಡ್ರ್ಯೂಜ್‌ರವರು,

"ಶಾಂತಿನಿಕೇತನ," ಬೋಲ್ಪುರ (ಕಲಕತ್ತ).

ಪ್ರಕಾಶಕರ ವಿನಂತಿ.

ಈ ಗ್ರಂಥಕರ್ತರಾದ ಶ್ರೀಯುತ ಡಿ. ಕೆ. ಭಾರದ್ವಾಜರು ಈ ಪುಸ್ತಕಕ್ಕೆ ಸುಮಾರು ೧೨ ಪುಟದಷ್ಟು ಮುನ್ನುಡಿಯನ್ನು ಬರೆದು ಕೊಟ್ಟಿದ್ದರು. ಅದರಲ್ಲಿ ಈಗಣ ನೂತನ ಜಾಗೃತಿ ವಿಚಾರವೂ, ಅದಕ್ಕೆ ಮಹಾತ್ಮಾ ಕ್ರಿಸ್ತನ ಸಹಾನುಭೂತಿಯೂ ಬೈಬಲ್ ಗ್ರಂಥದಿಂದ ಉದ್ಧೃತವಾಗಿ ಬರೆಯಲ್ಪಟ್ಟಿದ್ದಿತು. ಅದೆಲ್ಲವೂ ಈಗಿನ ಕಾನೂನಿಗೆ ವಿರೋಧವಾದ್ದೆಂದು ಈ ಪುಸ್ತಕದ ಮುದ್ರಣಕಾರರಿಗೆ ತೋರಿದ್ದರಿಂದ ಅವರು ಮುನ್ನುಡಿಯನ್ನು ಮುದ್ರಿಸಲಿಲ್ಲ. ಆದ್ದರಿಂದ ಮುನ್ನುಡಿಯಿಲ್ಲದೆ ಈ ಪುಸ್ತಕವನ್ನು ವಾಚಕರ ಮುಂದಿರಿಸಿರುವುದಕ್ಕಾಗಿ ವಾಚಕರಲ್ಲಿ ಕ್ಷಮೆ ಬೇಡುವೆವು.

ಇತಿ

ಪ್ರಕಾಶಕರು.

D. P. P. M.

ಶಬ್ದದಿಂದ ಕಂಡುಬರಬಹುದು. ಈಗ ಈ ಪ್ರಪಂಚದಲ್ಲಿ ಭ್ರಾತೃಭಾವ
ಹೆಚ್ಚಬೇಕೆಂದು ನೀವು ಹೇಳುವುದೂ ಸರಿಯಾಗಿದೆ. ಕಳೆದ ಘೋರವಾ
ಯುದ್ಧದಿಂದಾದ ಗಾಯವನ್ನು ಗುಣಪಡಿಸುವುದರಲ್ಲಿ ಎಲ್ಲರೂ ಸ
ಕರಿಸಬೇಕೆಂದು ಮಾನವ ಜಾತಿಯವರ ಗೋಳಾಟವು ಕೇಳಿಬರುತ್ತಿ
ಈ ವಿಧವಾದ ತರ್ಕವಿತರ್ಕಗಳ ಶಕ್ತಿಯ ವಿಚಾರವಾಗಿ ನಾನು ಬಹ
ಚೆನ್ನಾಗಿ ಯೋಚನೆ ಮಾಡಿದೆನು. ಆದರೂ ಅದರಿಂದ ನನಗೆ ತೃಪ್ತಿಕ
ವಾದ ಉತ್ತರವು ದೊರೆಯಲಿಲ್ಲ. ಈ ವಿಚಾರವಾಗಿ ಯೋಚನೆಮಾಡು
ಅನೇಕ ರಾತ್ರಿಗಳಲ್ಲಿ ನಿದ್ರೆಯಿಲ್ಲದೆ ಹಾಸಿಗೆಯ ಮೇಲೆ ಹೊರಳಾಡಿದೆನ
ಅದರ ಪರಿಣಾಮದಿಂದ ಈಗ ನಾನು ನಿಜವಾಗಿ ಅಸಹಕಾರ ತತ್ವ
ಮಹಾ ಭಕ್ತನಾಗಿರುವೆನು. ಕ್ರೈಸ್ತಧರ್ಮಿಯರಾದ ನನ್ನ ಪ್ರಿ
ಬಂಧುವೆ, ನಾನೂ ಕೂಡ ನಿಮ್ಮಂತೆಯೆ, ಈ ಪ್ರಪಂಚದಲ್ಲಿರುವ ಎ
ವಿಧವಾದ ಪಾಪಕ್ಕೂ ಪ್ರೇಮವೇ ನಿಜವಾದ ಔಷಧವೆಂದು ನಂಬಿರು
ಕ್ರೈಸ್ತಧರ್ಮಿಯನೆಂದು ಮತ್ತೆ ಒತ್ತಿಹೇಳುವೆನು. ಕ್ರೈಸ್ತನು ನಮ್ಮ
ರಿಗೂ "ನಮ್ಮ ಶತ್ರುಗಳನ್ನೂ ಪ್ರೀತಿಸಬೇಕೆ"ಂದು ಹೇಳಿರುವನು. "ದೇ
ರಲ್ಲಿ ನಿಜವಾದ ಭಕ್ತಿಯನ್ನಿಡು; ನಿನ್ನ ನೆರೆಯವನನ್ನು ನಿನ್ನವನಂತೆಯೆ
ಭಾವಿಸು" ಎಂಬೀ ಎರಡು ವಾಕ್ಯರೂಪದಲ್ಲಿ ಇಡೀ ಜೀವನದ ಮಮ
ವನ್ನು ನಾವಿಬ್ಬರೂ ತಿಳಿದಿರುವೆವು.—"ನಿನ್ನ ವಿಚಾರವಾಗಿ ಇತರರು ಹೇ
ಆಚರಿಸಬೇಕೆಂದು ಹೇಳುವಿಯೊ, ಅದೇ ರೀತಿಯಾಗಿ ನೀನೂ ಇತ
ರೊಂದಿಗೆ ಆಚರಿಸು; ಏಕೆಂದರೆ ಇದು ಪರೋಕ್ಷಜ್ಞರ ನಿಯಮವಾಗಿರ
ವುದು." ಎಂಬ ಕ್ರಿಸ್ತನ ಸುವರ್ಣ ವಾಕ್ಯವನ್ನು ನಾವಿಬ್ಬರೂ ಕಲಿತ
ರಾಗಿರುವೆವು.

ಮಹಾ ತಿರಸ್ಕಾರ.

ಇನ್ನಾದರೂ—ನಾನು ಈ ಅಸಹಕಾರ ತತ್ವದ ಪರವಾಗಿಯೆ ಬ
ವಾಗಿ ವಾದಿಸಲು ನಿರ್ಧರಿಸಿರುವೆನು. ಇನ್ನೂ ಒಂದು ಮಾತನ್ನು ಹೇಳ
ವೆನು: ಅದೇನಂದರೆ, ಈ ಅಸಹಕಾರ ತತ್ವಾಚರಣೆಗೆ ಕ್ರಿಸ್ತನೇ ಯಾವ

ಗಲೂ ಉದಾಹರಣಾಸ್ವರೂಪನಾಗಿರುವನೆಂಬುದು. ಏಕೆಂದರೆ ಪಾಪ ದೊಂದಿಗೆ ಒಪ್ಪಂದಮಾಡಿಕೊಳ್ಳಲು ಆತನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿರುವನು. "ಮನುಷ್ಯನು ತನ್ನ ಆತ್ಮಸ್ವರೂಪವನ್ನು ಕಳೆದುಕೊಂಡು, ಇಡೀ ಜಗತ್ತನ್ನೆ ಜಯಿಸಿದರೂ, ಅದರಿಂದ ಅವನಿಗೇನೂ ಪ್ರಯೋಜನವಾಗುವುದಿಲ್ಲ"ವೆಂದು ಆತನು ಹೇಳಿರುವನು. ನಿಜವಾದ ವಿಶ್ವಾಸದಿಂದ ಈ ಚಳವಳಕ್ಕೆ ಬಂದು ಸೇರಿದವರನೇಕರನ್ನು ನಾನು ನೋಡಿದ್ದೇನೆ. ಅದರಿಂದಲೆ ಅವರ ಭಾರತೀಯ ವ್ಯಕ್ತಿತ್ವವನ್ನು ಅವರು ರಕ್ಷಿಸಿಕೊಂಡಿರುವರೆಂದು ಅವರೇ ಸ್ವಂತವಾಗಿ ನನ್ನೆದುರಿನಲ್ಲಿ ಹೇಳಿದರು. ಅದಕ್ಕಾಗಿ ಅವರು ತಮ್ಮ ಜೀವನಸರ್ವಸ್ವವನ್ನು ತ್ಯಾಗಮಾಡಬೇಕಾಯಿತು. ಆದರೆ ಅದರಿಂದ ಅವರು ಆತ್ಮವನ್ನು ಜಯಿಸಿರುವರು. ಇಷ್ಟುಮಾತ್ರವೇ ಅಲ್ಲ! ಇದರಿಂದ ಮತ್ತೂ ಶ್ರೇಷ್ಟವಾದ ಪರಿಣಾಮವೊಂದಾಗಿರುವುದು. ಅದಾವುದೆಂದರೆ, ಕೊನೆಗೆ ಈ ಚಳವಳದಿಂದ ಹಿಂದುಸ್ಥಾನವು ತನ್ನ ಆತ್ಮವನ್ನು ಜಯಿಸಿಕೊಂಡಿದೆ! ಪಾಶ್ಚಾತ್ಯ ಮತ್ತು ಪೌರ್ವಾತ್ಯ ದೇಶಗಳನ್ನೆಲ್ಲ ಆಕ್ರಮಿಸಿಕೊಂಡಿರುವ ಈಗಣ ಪ್ರಪಂಚದ ಯಾಂತ್ರಿಕ ನಾಗರಿಕತೆಯಲ್ಲಿ ಸಿಲುಕಿ ಹಿಂದುಸ್ಥಾನದ ಆತ್ಮವೇ ನಷ್ಟವಾಗುತ್ತಿದ್ದಿತು. ಈಗಲಾದರೊ ತನ್ನ ಆತ್ಮಶುದ್ಧಿ ಮಾರ್ಗವನ್ನನುಸರಿಸಲು ಭಾರತಮಾತೆಯ ಸತ್ಪುತ್ರನಾದೊಬ್ಬ ದಿವ್ಯದರ್ಶಿಯ ವಾಣಿಯನ್ನು ಕೇಳಿ ಅದು (ಹಿಂದುಸ್ಥಾನವು) ಎಚ್ಚೆತ್ತುಕೊಂಡಿದೆ. ಹಿಂದುಸ್ಥಾನದ ವ್ಯಕ್ತಿತ್ವವೇ ಬಹು ವೇಗವಾಗಿ ನಾಶವಾಗುತ್ತಿತ್ತು. ಕಳೆದ ಸಾವಿರಾರು ವರ್ಷಗಳಿಂದ, ಭಗವಂತನ ಶಿಲ್ಪಕಲಾಕೌಶಲ್ಯದ ಆದರ್ಶಸ್ವರೂಪವಾಗಿ ತನ್ನಲ್ಲಿ ನೆಲೆಗೊಂಡಿದ್ದ ಬಹು ಶ್ರೇಷ್ಠವೂ, ಸೂಕ್ಷ್ಮವೂ, ಸುಂದರವೂ ಆದ ತನ್ನ ಸ್ವಭಾವ ಗುಣಗಳನ್ನು ಅದು (ಹಿಂದುಸ್ಥಾನವು) ಕಳೆದುಕೊಳ್ಳುತ್ತಿದ್ದಿತು. ಮತ್ತೆ ಆ ಗುಣಗಳಿಗೆ ಬದುಲಾಗಿ ತಾನು ಜೀರ್ಣಿಸಿಕೊಳ್ಳಲಾರದ ಪಾಶ್ಚಾತ್ಯ ಪಾಂಡಿತ್ಯವನ್ನು ಅದು ಬಹು ತೀವ್ರವಾಗಿ ಸ್ವೀಕರಿಸುತ್ತಿದ್ದಿತು. ಆ ಮಾರ್ಗದಲ್ಲಿ ಬಹು ದೂರ ಹೋಗುವುದರಿಂದ ಸಂಪೂರ್ಣವಾಗಿ ತನ್ನ ನಾಶವಾಗುವುದೆಂದು ಈಗ ಅದು ತಿಳಿದುಕೊಳ್ಳಲಾರಂಭಿಸಿದೆ. ಆದ್ದರಿಂದಲೆ ಅದು ಈಗ

ಅಸಹಕಾರವೆಂಬ ಮಹಾ ತಿರಸ್ಕಾರ ಭಾವವನ್ನು ಸೂಚಿಸುತ್ತಿರುವುದು. ಬಹು ವಿಶಾಲವಾದ ಬ್ರಿಟಿಷ ಸಾಮ್ರಾಜ್ಯದಲ್ಲಿ, ತನ್ನ ಎಲ್ಲ ಸಂಪತ್ತು, ವೈಭವ, ಶಾಂತಿ, ರಕ್ಷಣೆಗಳನ್ನು ಕೊಟ್ಟು ಕಾಪಾಡುವೆನೆಂದು ಇಂಗ್ಲೆಂಡ್ ದೇಶವು ಅದರ ಅಂತಃಕರಣದೊಂದಿಗೆ ಒಪ್ಪಂದಮಾಡಿಕೊಳ್ಳಲೆತ್ನಿಸಿದರೂ ಹಿಂದುಸ್ಥಾನವು ಆ ಒಪ್ಪಂದವನ್ನು ಈಗ ತಿರಸ್ಕರಿಸುವುದು. ಆ ವಿಧವಾದ ನೆಲೆಗಟ್ಟಿನ ಮೇಲೆ ಸಹಕರಿಸಲು ಅದು ತಿರಸ್ಕರಿಸುವುದು. ಒಪ್ಪಂದ ಮಾಡಿಕೊಳ್ಳುವುದರಲ್ಲಿಯೆ ತಾನು ಬಹುಕಾಲ ಕಳೆದೆನೆಂದು ಅದಕ್ಕೆ ಗೊತ್ತಾಗಿದೆ. ಈಗ ಅದಕ್ಕೆ ಐಕ್ಯಭಾವವನ್ನೂ, ಆಧ್ಯಾತ್ಮಿಕ ಶಕ್ತಿಯನ್ನೂ ಕೊಡಲು ಒಬ್ಬ ಈಶ್ವರಪ್ರೇರಿತ ವ್ಯಕ್ತಿಯು ದೊರೆತಿರುವುದರಿಂದ, ಅದು ಇನ್ನು ಮುಂದೆ ಒಪ್ಪಂದ ವಿಚಾರದಲ್ಲಿ ಕಾಲಹರಣ ಮಾಡುವುದಿಲ್ಲವೆಂದು ನಿರ್ಧರಿಸಿಕೊಂಡಿದೆ.

ಸ್ವಾತಂತ್ರ್ಯ.

ನಮ್ಮ ಆಶ್ರಯಕ್ಕೊಳಗಾಗುವ ಪ್ರತಿಯೊಂದು ದೇಶವನ್ನೂ ನಮ್ಮ ಲಾಭಕ್ಕಾಗಿಯೆ ಉಪಯೋಗಿಸಿಕೊಳ್ಳುವುದೂ, ಮತ್ತೆ ಆ ದೇಶದವರನ್ನು ಸುಖವಾಗಿರುವಂತೆ ಆಳುವುದೂ ಏಕ ಕಾಲದಲ್ಲಿಯೆ ಸಾಧ್ಯವಾಗುವುದೆಂಬ ನಂಬಿಕೆಯು ಇಂಗ್ಲಿಷರಾದ ನಮ್ಮಲ್ಲಿ ಕಾಲಕ್ರಮದಿಂದ ನೆಲೆಗೊಂಡಿದೆ. ನನ್ನ ಪ್ರವಾಸ ಕಾಲದಲ್ಲಿ ನಾನು ಹಲವು ಬಗೆಯ ಸ್ಥಳಗಳಿಗೆ ಹೋಗಬೇಕಾದ ಸಂದರ್ಭವೊದಗಿತು. ಬ್ರಿಟಿಷ ಸರಕಾರದವರ ಈ ಆಶ್ರಯದಿಂದ ನವೀನ ರೂಪಾಕೃತಿಗಳನ್ನು ಹೊಂದುತ್ತಿರುವ ಆಯಾ ದೇಶೀಯರಲ್ಲಿ ಅತೃಪ್ತಿಭಾವವೊಂದು ವಿನಾ ಮತ್ತಾವ ವಿಚಾರವೂ ನನ್ನ ಮನಸ್ಸಿನಲ್ಲಿ ಬೇರೂರಲಿಲ್ಲ. ಇಂಥಾ ಆಶ್ರಯಕ್ಕೊಳಗಾಗಿರುವ ಎಲ್ಲ ದೇಶದವರೂ ಸುಖವಾಗಿಯೂ, ತೃಪ್ತಿ ಭಾವದಿಂದಲೂ ಇರುವರೆಂಬ ಕಥೆಯನ್ನು ಇಂಗ್ಲೆಂಡಿನ ಮನೆಗಳಲ್ಲಿ ಮಾತ್ರ ಹೇಳಿಕೊಳ್ಳಬೇಕು. ಈ ಕಥೆಯು ಸತ್ಯವಾದುದಲ್ಲ. ನಾನು ಬರ್ಮಾ,

ದಕ್ಷಿಣ ಆಫ್ರಿಕಾ, ಉಗಂದಾ, ಫಿಜೀ ಮೊದಲಾದ ಬ್ರಿಟಿಷರ ಆಶ್ರಯು ಕ್ಕೊಳಗಾದ ಹಲವು ದೇಶಗಳಲ್ಲಿ ಅನೇಕ ಯುವಕ ಧುರೀಣರೊಂದಿಗೆ ಬಹು ಸ್ನೇಹಭಾವದಿಂದ ವಾಸಮಾಡಿರುವೆನು, ಮಾತನಾಡಿರುವೆನು. ಅದರಿಂದ ಅವರ ಅಗಾಧವಾದ ಅತೃಪ್ತಿ ಭಾವವು ನನಗೆ ಗೋಚರ ವಾಗಿರುವುದು. ನಾನು ಈಜಿಪ್ಟಿಗಾಗಲಿ, ಮೆಸಪೊಟೇಮಿಯಕ್ಕಾಗಲಿ, ಪಾಲಿಸ್ಟೈನಿಗಾಗಲಿ ಹೋಗಿದ್ದರೆ ಇದೇ ಹಾಡು ಕೇಳಿಬರುತ್ತಿತ್ತು. ನನ್ನ ಪ್ರಿಯ ಬಂಧುಗಳೆ, ಕ್ರೈಸ್ತರಾದ ನಮಗೆ ನಾವೇ ಒಂದು ಸಾಧಾರಣ ಸರಳ ಪ್ರಶ್ನೆಯನ್ನು ಕೇಳಿಕೊಳ್ಳುವಾ. ಹೆಸರಿಗೆ ಮಾತ್ರ ವಾದ ನಮ್ಮ ಸುಖಕ್ಕಾಗಿ ನಾವು ಬಹುಕಾಲ ಪರಕೀಯರ ಆಳಿಕೆ ಯಲ್ಲಿರಲು ಒಪ್ಪುವೆವೊ? ಪರದೇಶಿಗಳ ಆಳಿಕೆಯಿಂದ ನಾವು ಪೂರ್ಣ ದುಃಖಿಗಳಾಗುವೆವೆಂದು ನಿಮಗೆ ತಿಳಿಯದೊ? ಹಾಗಾದರೆ ನಾವು ಏಸುಕ್ರಿಸ್ತನ ನಿಯಮವನ್ನು ಆಚರಣೆಗೆ ತಂದು, ಭಾರ ತೀಯರನ್ನೂ ಬರ್ಮೀಯರನ್ನೂ, ಉಗಂದಾದವರನ್ನೂ, ಈಜಿಪ್ಟಿನವ ರನ್ನೂ ಐರ್ಲೆಂಡಿನವರನ್ನೂ ನಮ್ಮವರೆಂದು ಭಾವಿಸಿ, ಪ್ರೀತಿಸಬಾರ ದೇಕೆ? ಅವರು ನಮ್ಮೊಂದಿಗೆ ಹೇಗೆ ಆಚರಿಸಬೇಕೆಂದು ನಾವು ಹೇಳುವೆವೊ, ಅದೇ ರೀತಿಯಾಗಿಯೆ ನಾವೂ ಅವರೊಂದಿಗೆ ಆಚರಿಸ ದಿರುವುದೇಕೆ? ನಾವು ಪರದೇಶಿಯರ ಆಳಿಕೆಯಲ್ಲಿರಲು ಅಪೇಕ್ಷಿಸ ದಿರುವಾಗ, ಇತರರ ಮೇಲೆ ಅದರ ಹೊರೆಯನ್ನು ಹೊರಿಸಲಪೇಕ್ಷಿಸು ವುದೇಕೆ? ನಾವು ಸ್ವತಂತ್ರರಾಗಿರಲಪೇಕ್ಷಿಸುವಾಗ, ಇತರರೂ ಸ್ವತಂತ್ರ ರಾಗಿರಲು ನಾವು ತಿರಸ್ಕರಿಸುವುದೇಕೆ? ಕ್ರೈಸ್ತ ಧರ್ಮಾವಲಂಬಿಯಾದ ನನಗೆ ಈ ಪ್ರಶ್ನೆಗಳಿಗೆಲ್ಲ ಒಂದೇ ಉತ್ತರವು ಕಂಡು ಬರುವುದು. ಅದಾವುದೆಂದರೆ, ಬ್ರಿಟಿಷ ಸಾಮ್ರಾಜ್ಯವೆಂದು ಹೇಳುವ, ಆ ಆಳಿಕೆ ಯಲ್ಲಿರುವ ಪ್ರತಿಯೊಂದು ದೇಶವೂ ಸ್ವತಂತ್ರವಾಗುವಂತೆ ನಾವು ಸರ್ವ ಪ್ರಯತ್ನವನ್ನೂ ಮಾಡಬೇಕಲ್ಲದೇ ಪ್ರಾರ್ಥನೆಯನ್ನೂ ಮಾಡ ಬೇಕು !!

ಪೌರ್ವಾತ್ಯರೂ ಪಾಶ್ಚಿಮಾತ್ಯರೂ.

ಈಗ ಈ ಪ್ರಪಂಚದಲ್ಲಿ ಪೌರ್ವಾತ್ಯ ಮತ್ತು ಪಾಶ್ಚಾತ್ಯರಲ್ಲಿ ಪರಸ್ಪರಾನುರಾಗವುಂಟಾಗುವುದು ಅತ್ಯಾವಶ್ಯಕವೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಮಾನವ ಜಾತಿಯ ಭವಿಷ್ಯತ್ಸುಖವು ಆ ಪರಸ್ಪರಾನುರಾಗವನ್ನವಲಂಬಿಸಿಕೊಂಡಿರುವುದು. ಆದರೆ ಆ ಪರಸ್ಪರಾನುರಾಗಕ್ಕೆ ಪರಸ್ಪರ ಗೌರವವು ಮೂಲವಾಗಿದೆ. ಈಸಾಫನ ಕತೆಯಲ್ಲಿ ಹೇಳಿರುವ "ಕುರಿಮರಿಗೆ ತೋಳವು ತೋರಿಸಿದಂಥ ಗೌರವವು" ಈ ಇಪ್ಪತ್ತನೆಯ ಶತಮಾನದಲ್ಲಿ ಆಚರಿಸಲ್ಪಡಲು ಮನುಷ್ಯರಿಗೆ ಮಾದರಿಯಾದುದಲ್ಲ. ಆದಾಗ್ಯೂ ಏಷಿಯಾ ಮತ್ತು ಆಫ್ರಿಕಾ ಖಂಡಗಳ ವಿಚಾರದಲ್ಲಿ ಯುರೋಪು ದೇಶದ ಆಚರಣೆಯು ಸುಲಿಗೆಯ ಸ್ವಭಾವದ್ದಾಗಿತ್ತೆಂಬುದು ನಮಗೆ ಗೊತ್ತಿದೆ. ಈ ಸುಲಿಗೆಯ ಸ್ವಭಾವವನ್ನು ಒಂದು ದಿನದಲ್ಲಿಯೆ ಬಿಟ್ಟು ಬಿಡಲಾಗುವುದಿಲ್ಲ. ಆಫ್ರಿಕದ ಸುಲಿಗೆಗೆ ಪ್ರಾರಂಭವಾಗುವುದಕ್ಕೆ ಮುಂಚೆ ಎಂದರೆ ಸನ್ ೧೮೮೦ನೆಯ ಸಾಲಿನ ಆಫ್ರಿಕದ ನಕ್ಷೆ (ನಕಾಶೆ)ಯನ್ನು ನಾನು ನೋಡಿದ್ದೇನೆ. ಅನಂತರದ ಕೆಲವು ವರ್ಷ ಆಫ್ರಿಕದ ಇಡೀ ನಕ್ಷೆಯೆ ತುಂಡುತುಂಡಾಗಿ ವಿಭಾಗಿಸಲ್ಪಟ್ಟು, ಆಯಾ ವಿಭಾಗದಿಂದ ಸುಲಿಗೆಯ ಭಾಗವು ತಿಳಿಯುವಂತಾಯಿತು. ಅದಾದ ತರುವಾಯ ಕಾಲಕ್ರಮೇಣ ಏಷಿಯಾ ಖಂಡವೂ ಅದೇ ರೀತಿಯಲ್ಲಿ ವಿಭಾಗಿಸಲ್ಪಟ್ಟಿತು. ಘೋರವಾದ ಯುದ್ಧಕ್ಕೆ ಮೊದಲು ಚೀನಾ ಮತ್ತು ಪರ್ಶಿಯಾ ದೇಶಗಳು ಆಫ್ರಿಕಾ ಖಂಡದಲ್ಲಾದಂಥಾ ಸುಲಿಗೆಯಿಂದ ಬಹು ಸೂಕ್ಷ್ಮರೀತಿಯಿಂದ ತಪ್ಪಿಸಿಕೊಂಡವೆಂಬುದು ನಿಮಗೆ ಗೊತ್ತಿದೆ. ಬೆಲ್ಜಿಯಮಿನ ಸುಲಿಗೆಯಾಗುವುದನ್ನು ತಪ್ಪಿಸುವ ಉದ್ದೇಶದಿಂದ ಘೋರವಾದ ಯುದ್ಧದಲ್ಲಿ ಸ್ವಯಂಸೇವಕರಾಗಿ ಪ್ರವೇಶಮಾಡಿದ ನೀವು "ಪೌರ್ವಾತ್ಯ ದೇಶಗಳನ್ನು ಸುಲಿಗೆಮಾಡುವುದು ನ್ಯಾಯವೆಂ"ದು ಹೇಳುವವರಲ್ಲೊಬ್ಬರಾಗಿಲ್ಲವೆಂದು ನಾನು ನಂಬಿರುವೆನು. ನೀತಿ ಸಮರ್ಥನೋದ್ದೇಶದಿಂದಲಾದರೂ

ಪರಾಧೀನವಾದ ದೇಶಗಳ ಪಕ್ಷವನ್ನು ವಹಿಸಿ, "ಅವುಗಳು ಸ್ವತಂತ್ರ ವಾಗಲೇಬೇಕು" ಎಂದು ನೀವು ಹೇಳಲಾರಿರೊ? ಹಿಂದುಸ್ಥಾನಕ್ಕಾಗಲಿ, ಈಜಿಪ್ಟಿಗಾಗಲಿ, ಕೋರಿಯಾ ದೇಶಕ್ಕಾಗಲಿ, ಚೀನಾ ದೇಶಕ್ಕಾಗಲಿ ಸ್ವಾತಂತ್ರ್ಯವನ್ನು ಕೊಡಬೇಕೆಂಬ ವಿಚಾರದಲ್ಲಿ ಬೆಲ್ಜಿಯಮಿನ ಸ್ವಾತಂತ್ರ ವಿಚಾರದಲ್ಲಾದಂತೆ, ನಿಮ್ಮ ಹೃದಯವು ಉತ್ಸಾಹವನ್ನು ತಳೆಯುವು ದಿಲ್ಲವೊ? ಬೆಲ್ಜಿಯಮಿನ ಸ್ವಾತಂತ್ರ್ಯಕ್ಕಾಗಿ ಯುದ್ಧಮಾಡಿದ ನೀವು, ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ನಿಮ್ಮ ನೀತಿ ಮತ್ತು ಆತ್ಮಶಕ್ತಿಯ ಬಲದಿಂದ ಹೋರಾಡಲಾರಿರೊ? ಅಹಿಂಸಾತ್ಮಕವೂ ರಕ್ತಪೂರಿತವೂ ಆದ ಯುದ್ಧವನ್ನು ನಾವು ಅಪೇಕ್ಷಿಸುವುದಿಲ್ಲ. ನಮ್ಮ ಸ್ವಂತ ದೇಹಕ್ಕೆ ಮಾತ್ರ ಕಷ್ಟವಾಗುವ, ನಮ್ಮ ಸಹನ ಗುಣವನ್ನು ವ್ಯಕ್ತಪಡಿಸುವ ಶಿಲುಬೆಯ (Cross ಕ್ರಾಸ್) ಯುದ್ಧವನ್ನು ನಾವು ಅಪೇಕ್ಷಿಸುವೆವು.

ಶಿಲುಬೆಯ ಯುದ್ಧ.

ಕ್ರೈಸ್ತರಾದ ನಿಮಗೆ ಈ ಆಲೋಚನೆಯಿಂದ ಮನಸ್ಸು ಕರಗುವ ದಿಲ್ಲವೊ? ನನ್ನ ಸ್ವಂತ ಕಣ್ಣಿನಿಂದ ನೋಡಿದ ಒಂದು ಸಂಗತಿಯನ್ನು ಹೇಳುವೆನು. ಕೇಳಿರಿ! ದಕ್ಷಿಣ ಆಫ್ರಿಕಾದಲ್ಲಿ ಜೈಲಿನಿಂದ ಬಿಡುಗಡೆಯಾಗಿ ಬರುತ್ತಿದ್ದ ಹನ್ನೆರಡು ಮಂದಿ ಕೃಶರಾಗಿದ್ದ ಹಿಂದೂ ಮಹಿಳೆಯರನ್ನು ನೋಡಿದೆನು. ಅಲ್ಲಿ ಅವರು ಅನುಭವಿಸಿದ ಕಷ್ಟವನ್ನು ನಾನು ಶಬ್ದ ಗಳಿಂದ ವರ್ಣಿಸಲಾರೆನು. ಆದರೂ ಅವರ ಮುಖವು ಆನಂದ ಪೂರ್ಣ ವಾಗಿದ್ದಿತು. ಅವರ ಹಿಂಸಕರ ವಿಚಾರವಾಗಿ ಅವರು ಬಹು ಸಭ್ಯಭಾವ ದಿಂದ ಮಾತನಾಡಿದರು. ಜೈಲು ಅಧಿಕಾರಿಗಳ ವಿಚಾರವಾಗಿ ಒಂದಾದರೂ ಕೆಟ್ಟ ಶಬ್ದವು ಅವರ ಬಾಯಿಯಿಂದ ಹೊರಡಲಿಲ್ಲ. ಅವರು ಅವರ ಯಾವುದಾದರೊಂದು ತಪ್ಪಿಗಾಗಿ ಜೈಲಿಗೆ ಹೋದವರಲ್ಲ. ಆದರೆ ಕೇವಲ ತಮ್ಮ ದೇಶದ ಗೌರವವನ್ನೂ ಸ್ವಾತಂತ್ರ್ಯವನ್ನೂ ಕಾಪಾಡು ವುದಕ್ಕಾಗಿ ಕಾರಾಗೃಹವಾಸಕ್ಕೆ ತೆರಳಿದ್ದರು. ದಕ್ಷಿಣ ಆಫ್ರಿಕಾದಲ್ಲಿ

ವಿಶೇಷ ತೊಂದರೆಗೊಳಗಾಗದೆ ಸತ್ಯಾಗ್ರಹದ (Passive resistance) ಯಾವ ಯುದ್ಧದಲ್ಲಿ ಸತ್ಯಾಗ್ರಹಿಗಳಿಗೆ ಜಯವಾಗಿದೆ? ಅವರ ಧೈರ್ಯ ಸ್ಥೈರ್ಯ ಸಹನಾದಿ ಗುಣಗಳು ಕೇವಲ ಕ್ರೈಸ್ತಧರ್ಮಮಯವಾಗಿದ್ದವು. ಅಂಥಾ ನೋಟವನ್ನು ನಾನು ಮತ್ತೆಲ್ಲಿಯೂ ನೋಡಲಿಲ್ಲ! ಅದನ್ನು ನಾನೆಂದಿಗೂ ಮರೆಯಲಾರೆನು !!

ದಕ್ಷಿಣ ಆಫ್ರಿಕಾದಲ್ಲಿ ನನ್ನ ಸಮಕ್ಷಮ ಆಚರಿಸಲ್ಪಟ್ಟ ಸೂತ್ರಗಳ ಆಧಾರದ ಮೇಲೆ ಮಹಾತ್ಮಾ ಗಾಂಧಿಯವರು ಈಗ ಹಿಂದುಸ್ಥಾನದಲ್ಲಿ ಅಸಹಕಾರ ಚಳವಳವನ್ನು ಹಬ್ಬಿಸಿರುವರು. ಇದರ ಹೆಸರು ಮಾತ್ರ ಬೇರೆಯಾಗಿದೆ. ಸಾರಾಂಶತಃ, ಈ ಚಳವಳವು ಪಾಪವನ್ನು ಆತ್ಮನಿಗ್ರಹ ಸೂಚಕವಾದ ತಾಳ್ಮೆ, ಪಶುಬಲ ರಹಿತವಾದ ಸಹನಶೀಲತೆ, ನಿರುಪದ್ರವ ಕಾರಿಯಾದ ಆತ್ಮತ್ಯಾಗ—ಈ ಆಯುಧಗಳಿಂದ ಎದುರಿಸಲು ಸಿದ್ಧವಾಗಿದೆ ಎಂಬರ್ಥವನ್ನು ಸೂಚಿಸುವುದು. ಹಿಂದುದೇಶವು ಇಂಗ್ಲೆಂಡಿನಂಥ ಪರ ದೇಶದ ಉಗ್ರಶಾಸನದಲ್ಲಿಯೂ ಅಧೀನದಲ್ಲಿಯೂ ಇರುವುದು ಅಸಹ ನೀಯವು ಮತ್ತು ಪಾಪಕರವೆಂದು ಈ ಚಳವಳದವರ ಅಭಿಪ್ರಾಯ. ಈ "ಪಾಪ"ದೊಂದಿಗೆ ಸಹಕರಿಸಿ ಅದನ್ನು ಚಿರಸ್ಥಾಯಿಯಾಗಿರುವಂತೆ ಮಾಡಕೂಡದೆಂದು ಈ ಚಳವಳದವರು ನಿರ್ಧರಿಸಿರುವರು!

ಬೇಕಾದುದು ಸ್ವಾತಂತ್ರ್ಯವು; ದಾನವಲ್ಲ!

ಇದಕ್ಕೆ ಉತ್ತರವಾಗಿ ನೀವು,—"ಇಂಗ್ಲಿಷರಾದ ನಾವು ಹಿಂದು ಸ್ಥಾನವನ್ನು ಬಲಾತ್ಕಾರದಿಂದ ನಮ್ಮ ಉಗ್ರಶಾಸನ ಮತ್ತು ಅಧೀನತೆ ಗೊಳಪಡಿಸಿಲ್ಲ. ಸಾಧ್ಯವಿದ್ದ ಮಟ್ಟಿಗೆ ಶೀಘ್ರವಾಗಿ ಅದಕ್ಕೆ ನಮ್ಮ ಬ್ರಿಟಿಷ್ ಸಾಮ್ರಾಜ್ಯಾಂತರ್ಗತ ಸ್ವಾತಂತ್ರ್ಯವನ್ನು ನಿಜವಾಗಿ ಕೊಡು ತ್ತಿರುವೆವು." ಎಂದು ನನಗೆ ಹೇಳಬಹುದು. ಒಳ್ಳೆಯದು, ಕೊನೆಗೆ ಹೇಳಿದ "ಬ್ರಿಟಿಷ್ ಸಾಮ್ರಾಜ್ಯಾಂತರ್ಗತ" ಎಂಬ ಪದಗಳನ್ನು ಮುಂದೆ ಚರ್ಚಿಸುವೆನು. ಈಗ ನೀವು ಒತ್ತಿ ಹೇಳುವ "ನಾವು- ನಿಜವಾಗಿ

ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡುತ್ತಿರುವೆವು" ಎಂಬ ವಾಕ್ಯಕ್ಕೆ, "ಸ್ವಾತಂತ್ರ್ಯವೆಂದರೆ ಭಿಕ್ಷುಕನ ಭಿಕ್ಷಾ ಪಾತ್ರೆಯೊಳಗೆ ಇಕ್ಕುವ ಮುಷ್ಟಿ ಪ್ರಮಾಣದ ದಾನವಲ್ಲ"ವೆಂಬುದೆ ನನ್ನ ಉತ್ತರವಾಗಿರುವುದು.

ಸ್ವಾತಂತ್ರ್ಯವೆಂದರೆ ಆತ್ಮನ ವರದಾನವು. ಅದು ಆತ್ಮಶುದ್ಧಿಯಿಂದಲೂ, ಸ್ವಾರ್ಥತ್ಯಾಗದಿಂದಲೂ ಲಭಿಸುವುದಾಗಿರುವುದು. ಹಿಂದುಸ್ಥಾನವು ನಿಜವಾಗಿಯೂ ಸ್ವತಂತ್ರವಾಗಬೇಕೆಂದು ಇಂಗ್ಲೆಂಡಿನ ಅಭಿಪ್ರಾಯವಿದ್ದ ಪಕ್ಷದಲ್ಲಿ ಅದು (ಇಂಗ್ಲೆಂಡು) ಒಂದು ಪಕ್ಕಕ್ಕೆ ಸರಿದು, ತಾನು ಪೋಷಕಭಾವನೆಯಿಂದ ಕೊಡಲಿಕ್ಕಿರುವ ನಿರರ್ಥಕವಾದ ಸ್ವಾತಂತ್ರ್ಯದ ತುಂಡನ್ನು ಹಿಂದುಸ್ಥಾನವು ಸ್ವೀಕರಿಸಲೇಬೇಕೆಂದು ಹೇಳದಿರಲಿ! ಇದು ಕೇವಲ ಹಿಂದುಸ್ಥಾನದ ಸ್ವಾತಂತ್ರ್ಯ ಹೋರಾಟದ ಸಂಕಟವಾಗಿಲ್ಲ. ಈಜಿಪ್ಟಿನ ಗತಿಯೂ ಐರ್ಲೆಂಡಿನ ಗತಿಯೂ ಇದೇ ರೀತಿಯಾಗಿರುವುದು!! ನಾನು ಹಿಂದೆ ಹೇಳಿದಂತೆ "ನಿನ್ನ ನೆರೆಯುವವನನ್ನು ನಿನ್ನವನಂತೆ ಪ್ರೀತಿಸು; ನಿನ್ನ ವಿಚಾರದಲ್ಲಿ ಇತರರು ಹೇಗೆ ಆಚರಿಸಬೇಕೆಂದು ಹೇಳುವಿಯೊ ಹಾಗೆಯೇ ನೀನೂ ಆಚರಿಸು." ಎಂಬೀ ಕ್ರಿಸ್ತನ ವಾಕ್ಯಗಳು ನಮಗೆ ಬೋಧಿಸಲ್ಪಟ್ಟಿರುವವು. ನಮಗೆ "ಸ್ವಾತಂತ್ರ್ಯವು ಕೊಡಲ್ಪಡುವಾಗ ಕಂಠಾರುಗಳಿಂದ ನಮ್ಮ ಕೈಕಾಲುಗಳು ಬಂಧಿಸಲ್ಪಡಬೇಕೆಂದು ಇಂಗ್ಲೀಷರಾದ **ನಾವು** ಅಪೇಕ್ಷಿಸುವೆವೊ? ಆ ಸ್ವಾತಂತ್ರ್ಯವನ್ನು ಉಪಯೋಗಿಸಬೇಕಾದರೆ ಇಷ್ಟೆ ಪರಿಮಾಣದಲ್ಲಿ, ಇಂಥಾ ನಿಯಮವನ್ನನುಸರಿಸಿ, ಇಂಥಾ ಕರಾರಿನ ಮೇಲೆ, ಇಂತಿಷ್ಟು ಜಾಕರೂಕಭಾವದಿಂದ ಉಪಯೋಗಿಸಬೇಕೆಂದು ಹೇಳಿದುದಾದರೆ ಅದು ನಮಗೆ ತೃಪ್ತಿಕರವಾಗಿರುವುದೊ? ಅಮೇರಿಕಾದಲ್ಲಿ ನಮ್ಮ ಪೂರ್ವಜರು ಮಾಡಿದಂತೆ, ನಾವೂ **ಸ್ವಾತಂತ್ರ್ಯ ಪ್ರಕಟನೆ**ಯನ್ನೇಕೆ ಮಾಡಬಾರದು? ನಾನು ಮತ್ತೆ ನಿಮಗೊಂದು ಪ್ರಶ್ನೆಯನ್ನು ಕೇಳುವೆನು. ಇಂಗ್ಲೀಷರಾದ ನಾವು, ಕೇವಲ ದಾನರೂಪವಾಗಿಯೂ ಅನುಗ್ರಹರೂಪವಾಗಿಯೂ ಕೊಡಲ್ಪಡುವ "ಸ್ವಾತಂತ್ರ್ಯ"ವನ್ನು ತುಣುಕು ತುಣುಕಾಗಿ ಸ್ವೀಕರಿಸಿ

ತೃಪ್ತಭಾವದಿಂದಿರಬಲ್ಲೆವೊ? "ವರ್ಡ್ಸ್‌ವರ್ಥ್" ಕವಿಯ ಪದಗಳನ್ನು ಓದಿರಿ; ಮಹಾಕವಿಯಾದ "ಮಿಲ್ಟನ"ನ "ಏರಿಯೊ ಪಾಜಿಟಿಕಾ" ಎಂಬ ಗ್ರಂಥವನ್ನು ಓದಿರಿ; ಕವೀಶ್ವರನಾದ "ಷೇಕ್ಸ್‌ಪಿಯರ"ನು "ನಾಲ್ಕನೆಯ ಹೆನ್ರೀ"ಕಾಲದ ಇಂಗ್ಲೆಂಡಿನ ಸ್ಥಿತಿಯನ್ನು ಬಣ್ಣಿಸಿರುವುದನ್ನು ಓದಿರಿ; "ಅಮೇರಿಕದ ಸ್ವಾತಂತ್ರ್ಯ"ದ ವಿಚಾರದಲ್ಲಿ "ಬರ್ಕ್" ಸಾಹೇಬನ ಭಾಷಣವನ್ನು ಓದಿರಿ. ನನ್ನ ಪ್ರಿಯ ಬಂಧುಗಳೆ, ಇಡೀ ಇಂಗ್ಲಿಷ್ ಸಾಹಿತ್ಯ ಸಾಗರವನ್ನು ಮಥಿಸಿ ನೋಡಿದರೆ ನನ್ನ ಮೇಲಿನ ಪ್ರಶ್ನೆಗಳಿಗೆ ವಿರುದ್ಧವಾದ ಉತ್ತರಗಳೇ ದೊರೆಯುವವು. ಹಾಗಾದರೆ ನಾವು **ಏಸುಕ್ರಿಸ್ತನ** ನಿಯಮವನ್ನನುಸರಿಸಿ, ಇತರರ ವಿಚಾರದಲ್ಲಿ ಮನುಷ್ಯ ರಂತೇಕೆ ವರ್ತಿಸಬಾರದು? ಏಕೆಂದರೆ ಈಗಿನ **ಕಾಲದ** ಇಂಗ್ಲೀಷ ರಾಜನೀತಿಜ್ಞರು ಹೇಳುವಂಥಾ "ಸ್ವಾತಂತ್ರ್ಯ"ವನ್ನು—ಆ ಇಂಗ್ಲೀಷ ರಾಜನೀತಿಜ್ಞರ ಮನಸ್ಸಿಗೆ ತೋರಿದ ರೀತಿಯಲ್ಲಿ, ಆ ನೀತಿಜ್ಞರ ಮನಸ್ಸಿಗೆ ಬಂದ ಕಾಲದಲ್ಲಿ, ಆ ರಾಜನೀತಿಜ್ಞರು ಇಂತಿಷ್ಟೆಂದು ಅಳೆಯುವ ಭಾವನೆ ಯಿಂದ ಆ ಪವಿತ್ರವಾದ ಸ್ವಾತಂತ್ರ್ಯವನ್ನು—ಇಂಗ್ಲೆಂಡು ದೇಶವು ಹಿಂದು ಸ್ಥಾನಕ್ಕೆ ಕೊಡುವುದೆಂದರೆ ಆ "ಸ್ವಾತಂತ್ರ್ಯ"ವು **ಸ್ವಾತಂತ್ರ್ಯವೇ ಅಲ್ಲ**ವೆಂದು ನಾನು ಸಾರಿ ಹೇಳುವೆನು.



ಸುಧಾರಣೆಯ ಸುಳ್ಳು.

ಎರಡನೆಯ ಪತ್ರ

ಪಶುಬಲ ಶಾಸನ

"ಪ್ರಿಯ ಬಂಧು,—

ಈಗ ಈ ಸಂಕಷ್ಟದ ಕಾರಣವನ್ನು ತಿಳಿಸುವೆನು. ಎಲ್ಲ ತರದ ರಾಜ, ಮಹಾರಾಜರುಗಳಿಂದಲೂ ೩೨ ಕೋಟಿ ಜನಗಳಿಂದಲೂ ನಿವಾಸಿಸಲ್ಪಟ್ಟಿರುವ ಹಿಂದುಸ್ಥಾನದಂಥಾ ಬಹು ದೊಡ್ಡ ದೇಶವು ಬ್ರಿಟಿಷರಿಗೆ ಸೇರಿದುದೆಂದು ನಕಾಶೆ (Map ನಕ್ಷೆ) ಯ ಮೇಲೆ, ಕೆಂಪು ಬಣ್ಣದಲ್ಲಿ ತೋರಿಸಬಹುದು; ಮತ್ತೆ ಇತಿಹಾಸ ಮತ್ತು ಭೂಗೋಳ ಶಾಸ್ತ್ರಗಳನ್ನು ಬ್ರಿಟಿಷರ ಮಕ್ಕಳಿಗೆ ಬೋಧಿಸುವಾಗ ಪೂರ್ವ ದೇಶಗಳನ್ನಾಳುವುದರಲ್ಲಿ ಬ್ರಿಟಿಷ ಸಾಮ್ರಾಜ್ಯವು ಎಷ್ಟರ ಮಟ್ಟಿಗೆ ಜಯಶಾಲಿಯಾಗಿದೆ ಎಂದು ಆ ಕೆಂಪು ಬಣ್ಣದಿಂದಲೇ ತಿಳಿದುಕೊಳ್ಳಬಹುದು ಎಂಬಿ ಸುಖಕರವಾದ ಆಲೋಚನೆಯ ಒಂದು ಮೂರ್ಖ ತೃಪ್ತಿಭಾವವು ವಿಲಾಯತಿಯಲ್ಲಿರುವ ನಮ್ಮ ಬ್ರಿಟಿಷರನ್ನಾವರಿಸಿಕೊಂಡಿರುವುದು! ಬ್ರಿಟಿಷರು ಸಾಧಾರಣ ಸಂದರ್ಭಗಳಲ್ಲಿ ದಯಾ ಭಾವದಿಂದಿರುವರು. ವಿಶೇಷ ಮಹತ್ವವುಳ್ಳ ಹಿಂದುಸ್ಥಾನವು "ಬ್ರಿಟಿಷರ ಆಧೀನ"ವೆಂಬ ವಿಚಾರವು ಅವರ ಕೈಜಾರಿ ಹೋಗದ ವರೆಗೆ ಸದ್ಭಾವನೆಗಳನ್ನು ತೋರಿಸುವ ಅನುಗ್ರಹ ಸೂಚಕ ಕಾಯಿದೆಗಳನ್ನು ಪಾಸುಮಾಡುವುದರಲ್ಲಿ ಮಾತ್ರ ಅವರು ಬಹಳ ಮುಂದರಿದು ಹೋಗುವರು. ಆದರೆ ಈ ವಿಚಾರವಾಗಿ ನೀವು ಚೆನ್ನಾಗಿ ಆಲೋಚಿಸಿ ನೋಡಿದರೆ, ಹಿಂದುಸ್ಥಾನದವರು 'ನಮ್ಮ ಆಧೀನ'ರೆಂಬ ಭಾವನೆಯು ನಿಜವೂ, ಸರಳವೂ, ವಿಶ್ವಾಸಪೂರ್ಣವೂ ಆದ ಸ್ನೇಹ ಭಾವಕ್ಕೆ ವಿರೋಧವಾದುದೆಂದು ತಿಳಿದುಬರುವುದು. ನಿಮ್ಮನ್ನು ಅರ್ಧ ಕೇಳು

ಭಾವನೆಯಿಂದ ನೋಡುವವರೊಂದಿಗೆ ನೀವು ಹೇಗೆ ಸ್ನೇಹಭಾವದಿಂದಿರ ಬಲ್ಲಿರಿ? ನೀವು ಅಂಥವನನ್ನು ಮುಖಸ್ತುತಿಯಿಂದ ಸಂತೋಷ ಪಡಿಸ ಬಹುದು; ಅಂಥವನಲ್ಲಿ ವಿಶೇಷ ವಿಶ್ವಾಸವನ್ನಿಟ್ಟಿರುವಂತೆ ನಟಿಸಲೂ ಬಹುದು; ಬಿರುದು ಬಾವಲಿಗಳಿಗಾಗಿ ಅಂಥವನ ಪಾದಸೇವೆಯನ್ನು ಮಾಡಲೂ ಬಹುದು; ಆದರೆ ನೀವೆಂದಿಗೂ ಅಂಥವನ ಸ್ನೇಹಿತರಾ ಗಿರಲಾರಿರಿ!

ನೀವು ತಕ್ಷಣವೇ ಇದಕ್ಕೆ ಯಾವ ಉತ್ತರವನ್ನು ಕೊಡುವಿರೆಂದು ನನಗೆ ಗೊತ್ತಿದೆ. "ಹೌದು, ನೀವು ಹೇಳುವುದೆಲ್ಲ ಸತ್ಯವೆಂದು ನಾನು ನಂಬುತ್ತೇನೆ. ಆದರೆ ಈಗ ಕಾಲಸ್ಥಿತಿಗಳು ಬದಲಾಯಿಸಿರುವವು. ಸನ್ ೧೯೧೯ನೆಯ ಇಸವಿ ಡಿಶಂಬರದಲ್ಲಿ "**ಸುಧಾರಣೆಯ ಮಸೂದೆ**" ಯು ಪ್ರಕಟವಾಗಿದೆ. ಈಗ ವಿದ್ಯಾಖಾತೆ, ಪ್ರಜಾರೋಗ್ಯವೃದ್ಧಿ (Sanitary) ಖಾತೆ, ಇವೇ ಮೊದಲಾದುವು ಹಿಂದೀಯರ ಅಧೀನ ದಲ್ಲಿರುವವು. ಈ ವಿಚಾರವಾಗಿ "ಹೌಸ್ ಆಫ್ ಕಾಮನ್ಸ್"*ನಲ್ಲಿ ಚರ್ಚೆ ಯಾದ ಸಂಗತಿಗಳನ್ನು ಓದಿರುವೆವು. ರೆವಿನ್ಯೂ (ತೆರಿಗೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ವಿಚಾರಗಳು), ಪೋಲೀಸ್, ಮತ್ತು ಸೇನಾ (ಮಿಲಿಟರಿ) ಖಾತೆ ಇವೇ ಮೊದಲಾದ ಕೆಲವು ಅತ್ಯಾವಶ್ಯಕ ಸಾರ್ವ ಜನಿಕ ವಿಷಯಗಳನ್ನು ಮಾತ್ರ ಅವರ ಕಡೆಗೆ ವಹಿಸಿಲ್ಲ" ಎಂದು ನೀವು ಹೇಳಬಹುದು.

"ಸುಧಾರಣೆ"ಯ ಪರಿಹಾಸಕೃತಿಯು.

ಮೇಲೆ ಹೇಳಿದುದೇ ನಿಮ್ಮ ಉತ್ತರವಾಗಿದ್ದರೆ ಅದು ನಿರ್ಬಲ ವಾದುದೆಂದು ನಾನು ಹೇಳುವೆನು. "ಪ್ರತಿನಿಧಿಯ ಹಕ್ಕಿಲ್ಲದೆ ತೆರಿಗೆ ಯನ್ನು ವಿಧಿಸುವ ಹಕ್ಕಿಲ್ಲ"ವೆಂಬೀ ಸೂತ್ರವು ಪಾಶ್ಚಾತ್ಯ ದೇಶಗಳಲ್ಲಿ ನಿಜವಾದ ಸರಕಾರವೆನ್ನಿಸಿಕೊಂಡಿರುವವರಿಗೆ ಆಧಾರವಾಗಿರುವುದು.

*ಇದು ವಿಲಾಯತಿಯ ಪಾರ್ಲಿಮೆಂಟಿನಲ್ಲಿರುವ ಪ್ರಜಾಪಕ್ಷದವರ ಸಭೆ. ದ. ಕ. ಭಾ.

ಸಂಗೀತಗಾರನಿಗೆ ಹಣಕೊಟ್ಟು ತನಗೆ ಬೇಕಾದ ರಾಗಗಳನ್ನು ಹಾಡಿಸಲು ಹಣಕೊಡುವವನಿಗೆ ಹಕ್ಕಿರುವುದು. ಆದರೆ ಇಲ್ಲಿ ಈ ಪೌರ್ವಾತ್ಯ ದೇಶದಲ್ಲಿ ಅದರ ವಿರುದ್ಧವಾದ ಕ್ರಮವು ಅಚರಣೆಯಲ್ಲಿರುವುದು.

ಹಿಂದೀಯರ ವಶಕ್ಕೊಪ್ಪಿಸಿರುವ ವಿದ್ಯಾಖಾತೆಯು ಅಥವಾ ಪ್ರಜಾಕ್ಷೇಮಾಭಿವೃದ್ಧಿ ಖಾತೆಯು ಹಿಂದೀ ಮಂತ್ರಿಗಳು ತಮ್ಮ ಖಾತೆಯಲ್ಲಿ ಯಾವುದಾದರೊಂದು ಹೊಸ ಮಾರ್ಪಾಟನ್ನು ಮಾಡಬೇಕೆಂದಪೇಕ್ಷಿಸಿದರೆ ಸರಕಾರದಲ್ಲಿ ಹಣವಿರುವುದಿಲ್ಲ! ಜನಾಂಗದ ಹಣವು ಪ್ರಜೆಗಳ ಅಧೀನವಾಗದ ನಿಮ್ಮ "ಮಿಲಿಟರಿ" ಮೊದಲಾದ ವಿಷಯಗಳಿಗೆ ಮೊದಲು ಖರ್ಚಾಗಬೇಕು!! ಆ ಮೇಲೆ ಇತರ ವಿಚಾರಗಳು! ಈ ದೇಶದ ಉತ್ಪತ್ತಿಯಲ್ಲಿ ಅರ್ಧಭಾಗವು "ಮಿಲಿಟರಿಗೆ (ಸೈನ್ಯಕ್ಕೆ)" ಖರ್ಚಾಗುವುದು! ಆ ಮೇಲೆ ಯಾವಾಗಲೂ ಅಧಿಕಾರಿಗಳ ಸಂಬಳವನ್ನು ಹೆಚ್ಚಿಸುತ್ತಿರುವ "ಸಿವಿಲ್ (ರಾಜ್ಯವ್ಯವಸ್ಥೆಯ)" ಖರ್ಚಿನ ವಿಚಾರವು ಬರುವುದು. ಈ ಎಲ್ಲ ವಿಚಾರಗಳು ಯಾವಾಗಲೂ ಅಂದಾಜುಪಟ್ಟಿಯನ್ನು ಮೀರಿಯೆ ಹೋಗುತ್ತಿರುವವು!! ಇಂಥಾ ವಿಚಾರಗಳಿಗೆಲ್ಲ ಹಣವು ಸಾಕಾಗಿ ಉಳಿದರೆ ಮಾತ್ರ ಆಗ ಪ್ರಜಾಧೀನವಾಗಿರುವ ವಿದ್ಯಾಭ್ಯಾಸ, ಪ್ರಜಾಕ್ಷೇಮಾಭಿವೃದ್ಧಿ ಮೊದಲಾದ ವಿಚಾರಗಳಿಗೆ ಹಣವನ್ನು ಕೊಡಲಾಗುವುದು!!!

ಈಗ ಪ್ರಾಂತಿಕ ಸರಕಾರಗಳಲ್ಲಿಯೂ ಕೂಡ ಸುಧಾರಣೆಯಿಂದ ವಿಶೇಷವಾಗಿ ಯಾವ ಬದಲಾವಣೆಯನ್ನೂ ಹೊಂದದ ಒಂದು ಉದಾಹರಣೆಯೊಂದನ್ನು ನಾನು ಕೊಡಲೆತ್ನಿಸುವೆನು. ಈಗತಾನೆ ನಾನು ಪೂರ್ವ ಬಂಗಾಳ ಪ್ರಾಂತದಲ್ಲಿರುವ ಚಾಂದಪುರದಲ್ಲಿ ಬಹು ದುಃಖಕರವಾದ ನೋಟವನ್ನು ನೋಡಿ ಬಂದಿರುವೆನು. ಅಸ್ಸಾಮಿನ ಟೀ ತೋಟದಲ್ಲಿ ಕೆಲಸ ಮಾಡುತ್ತಿದ್ದ—ಹೊಟ್ಟೆಗಿಲ್ಲದೆ ಸಾಯುತ್ತಿದ್ದ—ಸಾವಿರಾರು ಬಡ ಶ್ರಮ ಜೀವಿಗಳು (ಕೂಲಿಕಾರರು) ತೋಟವನ್ನು ಬಿಟ್ಟು ಓಡಿ ಬಂದು ರೈಲುಗಾಡಿಯೂ ಸ್ಟೀಮರೂ ಸಂಧಿಸುವ ನದಿಯ ತೀರದಲ್ಲಿ

ರಕ್ತಾವರೋಧನವನ್ನುಂಟುಮಾಡುವಂತಿದ್ದ ಒಂದು ಪ್ರದೇಶದಲ್ಲಿ ಗುಂಪು ಕೂಡಿದ್ದರು. ಆಗ ಅವರ ಮಧ್ಯದಲ್ಲಿ ಬಹು ಉಗ್ರವಾದ "ಕಾಲೆರಾ (ವಾಂತಿಭೇದಿ)" ರೋಗವು ಪ್ರವೇಶಿಸಿತು. ಆಗ ಸರಕಾರದವರು ಜನರ ಸಿಟ್ಟನ್ನು ಹೆಚ್ಚಿಸುವಂಥ ಎರಡು ಕೆಲಸಗಳನ್ನು ಮಾಡಿದರು. ಅವುಗಳಲ್ಲಿ ಮೊದಲನೆಯದಾವುದೆಂದರೆ—ರೈಲ್ವೆ ಸ್ಟೇಶನದಲ್ಲಿ ಮೂರನೆಯ ತರಗತಿಯ ಪ್ರಯಾಣಿಕರ ಕೋಣೆಯ ಆಶ್ರಯವನ್ನು ಹೊಂದಿದ್ದ ದುಃಖಿಗಳಾಗಿದ್ದಾ ಮನುಷ್ಯರನ್ನು ಅಲ್ಲಿಂದ ಓಡಿಸುವುದಕ್ಕಾಗಿ ಮಧ್ಯರಾತ್ರಿಯಲ್ಲಿ ಸರಕಾರದವರು ತಮ್ಮ ಘೋರ 'ಘೂರ್ಕ' ಸಿಪಾಯಿಗಳನ್ನು ಅವರ ಮೇಲೆ ಬಿಟ್ಟರು. ನಿರ್ಬಲರಾಗಿ ಕೂಳಿಲ್ಲದೆ ಸಾಯುತ್ತಿದ್ದಾ ಬಡಪಾಯಿಗಳನ್ನು ಶಿಪಾಯಿಗಳು ತಮ್ಮ ಕೋವಿಗಳ ತೋರಭಾಗದಿಂದ ಹೊಡೆದೋಡಿಸಿದರು. ಆಗ ಜೋರಾಗಿ ಮಳೆ ಬರುತ್ತಿದ್ದರೂ ಆ ಬಡಪಾಯಿಗಳು ಓಡಿಹೋಗಿ ಚೆಂಡಾಟವನ್ನಾಡುವ—ಆಕಾಶವೇ ಮೇಲ್ಛಾವಣಿಯಾಗಿದ್ದ—ಒಂದು ಮೈದಾನ ಪ್ರದೇಶದಲ್ಲಿ ಆಶ್ರಯವನ್ನು ಹೊಂದಬೇಕಾಯಿತು. ಇವರಲ್ಲಿ ಅನೇಕರು ಕಾಹಿಲೆಯಿಂದ ದುರ್ಬಲರಾಗಿದ್ದ ಹೆಂಗಸರೂ ಮಕ್ಕಳೂ ಇದ್ದುದರಿಂದ ಅವರು ಘೂರ್ಕರ ಪೆಟ್ಟಿಗೆ ಗುರಿಯಾಗಿ ಗಾಯಪಡೆದಿದ್ದರು. ಈ ಸಂಗತಿಯು ನಡೆದ ಸ್ವಲ್ಪ ಸಮಯದೊಳಗಾಗಿ ನಾನು ಆ ಸ್ಥಳಕ್ಕೆ ಹೋಗಿ ಆ ಗಾಯವಡೆದಿದ್ದ ಜನರನ್ನು ನೋಡಿದೆನು. ಆ ನೋಟವನ್ನು ನೀವು ನೋಡಿದ್ದರೆ, ನನಗಾದಂತೆ ನಿಮ್ಮ ರಕ್ತವೂ ಕುದಿಯಲಾರಂಭಿಸುತ್ತಿತ್ತು! ಆದರೂ ಸರಕಾರದವರ ನಾಚಿಕೆಗೇಡಿನ ಕೃತ್ಯದ ಸತ್ಯಾಂಶವು ಎಂದಿನಂತೆ ಅಧಿಕಾರ ವರ್ಗದವರ ವರದಿಗಳ ಬಣ್ಣದಿಂದ ಮರೆಮಾಡಲ್ಪಟ್ಟಿತು. ಸರಕಾರದವರು ಪ್ರಜೆಗಳ ಕ್ಷಮಾಪಣೆಯನ್ನು ಕೇಳಲಿಲ್ಲ; ದುಃಖವನ್ನೂ ಸೂಚಿಸಲಿಲ್ಲ. ಮಿ| ಮೊಂಟೆಗು ಸಾಹೇಬರೂ "ಹೌಸ್ ಆಫ್ ಕಾಮನ್ಸ್" ಸಭೆಯಲ್ಲಿ ಎದ್ದು ನಿಂತು "ಬಂಗಾಳಾ ಸರಕಾರದವರು ಈ ವಿಚಾರದಲ್ಲಿ ಸಾಧ್ಯವಿದ್ದಷ್ಟು ದಯಾಭಾವದಿಂದ ವರ್ತಿಸಿರುವರೆ"ಂದು ಒದರಿ ತಮ್ಮ ಜವಾಬ್ದಾರಿಯನ್ನು ಜಾರಿಸಿಕೊಂಡು ಬಿಟ್ಟರು.

ಈ ಕಥೆಯ ಎರಡನೆಯ ಭಾಗವು ಮತ್ತೂ ಮಹತ್ವದ್ದಾಗಿರುವುದು. ಈ ವಿಚಾರದಲ್ಲಿ, ಕೊಲೆರಾ ರೋಗಪೀಡಿತವಾದ ಚಾಂದಪುರದಿಂದ ಬೇರೆ ಊರಿಗೆ ಹೋಗಲು ಈ ಬಡಪಾಯಿಗಳಿಗೆ ಸಹಾಯ ಮಾಡಿದುದಾದರೆ, ಅದರಿಂದ ತೋಟದ ಬೇರೆ ಕೆಲಸಗಾರರೂ ಹೊರಟು ಹೋಗಬಹುದೆಂದು ತಿಳಿದು "ಟೀ" ಪ್ಲಾಂಟರ ಸಂಘ"ದವರಿಂದ ಪ್ರೇರಿತರಾದ ಬಂಗಾಳ ಸರಕಾರದವರು ಆ ಬಡಪಾಯಿಗಳಿಗೆ ಯಾವ ಸಹಾಯವನ್ನೂ ಮಾಡಕೂಡದೆಂದು ನಿರ್ಧರಿಸಿದ್ದರು. ಆದ್ದರಿಂದ ಅಸಂಖ್ಯಾತರಾದ ಆ ಜನರು ಬೇರೆ ಸ್ಥಳಕ್ಕೆ ಹೋಗದಂತೆ ತಡೆಗಟ್ಟಲ್ಪಟ್ಟಿದ್ದರು. ಜನರು ಕೋಪಾಕುಲರಾಗಿದ್ದರು. ಆ ಸಂದರ್ಭದಲ್ಲಿ ನಾನು ಅಲ್ಲಿಗೆ ಹೋಗಿ, ಸಾಧ್ಯವಿದ್ದ ಮಟ್ಟಿಗೆ ಮಧ್ಯಸ್ಥಿಕೆಯನ್ನು ವಹಿಸಬೇಕೆಂದು ನನ್ನನ್ನು ಕೆಲವರು ಕೇಳಿಕೊಂಡರು. ಆಗ ನಾನು ಸರಕಾರದವರಿಗೆ ಒಂದು ಸುಲಭವಾದ ಸೂಚನೆಯನ್ನು ಕೊಟ್ಟೆನು. ಸರಕಾರದವರು ದಯಾಭಾವದಿಂದ ಐದು ಸಾವಿರ ರೂಪಾಯಿಗಳನ್ನು ಆ ಬಡಜೀವಿಗಳ ಉದ್ಧಾರಕ್ಕಾಗಿ ಅನುಗ್ರಹಿಸುವುದಾದರೆ, ಉಳಿದ ಭಾಗವನ್ನು ಧಾರ್ಮಿಕರಾದ ಜನರಿಂದ ವಸೂಲ್ಮಾಡಬಹುದೆಂದು ಹೇಳಿದೆನು. ಆದರೆ "ಟೀ" ತೋಟಗಾರರ ಬಲವಾದ ಕೋಟೆಯಂತಿರುವ ದಾರ್ಜಿಲಿಂಗದಲ್ಲಿ ಟೀ ತೋಟದವರ ಪ್ರಬಲವಾದ ಪ್ರೇರಣೆಗೊಳಗಾಗಿದ್ದ ಸರಕಾರದವರು ಆ ನಿರಾಶ್ರಿತರಿಗೆ ಯಾವ ಸಹಾಯವನ್ನೂ ಕೊಡುವುದಿಲ್ಲವೆಂದು ತಿರಸ್ಕರಿಸಿದರು! ಆಗ ಸ್ವತಃ ನಾನೇ ಹೋಗಿ ಸರಕಾರದ ಅಧಿಕಾರಿಗಳೊಂದಿಗೆ ಮಾತನಾಡಬೇಕೆಂದು ದಾರ್ಜಿಲಿಂಗಿಗೆ ಹೋದೆನು. ಅಲ್ಲಿ ನಾನು ಯಾರನ್ನು ನೋಡಬೇಕೆಂದು ಅಪ್ಪಣೆಯಾಯಿತೆಂದು ಗೊತ್ತುಂಟೊ? "ಮಿನಿಸ್ಟರ್ (ಮಂತ್ರಿಯ)"ನ್ನು ಅಲ್ಲ; ಚೀಫ್ ಸೆಕ್ರಿಟರಿ (ಆಂಗ್ಲೇಯಾಧಿಕಾರಿ)ಯನ್ನು ನೋಡಿದೆನು. ಈ ವಿಷಯವಾಗಿ ನಾವು ಬಹಳ ಹೊತ್ತು ಚರ್ಚಿಸಿದೆವು; ನಾನು ಮೇಲೆ ಹೇಳಿರುವ ದುಷ್ಕೃತ್ಯವು ನಡೆದ ಸ್ಥಳದಿಂದ ಆಗತಾನೆ ಬಂದಿದ್ದೆನಾದ್ದರಿಂದ ಕೋಪದಿಂದ ಕಠಿಣವಾದ ಮಾತುಗಳನ್ನಾ

ಡಿದೆನು!! ಆದರೆ ಅಲ್ಲಿನ ಅಧಿಕಾರಿಗಳ ಹೃದಯವು ಮಂಜಿ (ಬರ್ಫ್)ನಷ್ಟು
ತಣ್ಣಗಿದ್ದಿತು. ಸುಧಾರಣೆಯ ಕೌನ್ಸಿಲುಗಳಾಗಿದ್ದರೂ ಸ್ವೇಚ್ಛಾವಿಹಾರಿಗ
ಳಾದ ಅಧಿಕಾರಿವರ್ಗದವರು ಮುಂಚಿನಂತೆಯೆ ಕಠಿಣ ಹೃದಯರಾ
ಗಿಯೂ, ಅವೇದ್ಯರಾಗಿಯೂ, ದುರಾಗ್ರಹಿಗಳಾಗಿಯೂ ಇರುವರು. ನನ
ಮಿತ್ರರೆ, ನನ್ನ ಈ ಮಾತುಗಳನ್ನು ಖಂಡಿತವಾಗಿಯೂ ನಂಬಿರಿ! ಅ
ವರ್ಗದ ಸ್ವಭಾವವನ್ನು ಬದಲಾಯಿಸುವುದಕ್ಕೆ ಆಗುವುದಿಲ್ಲ!!

ದಾರ್ಜಿಲಿಂಗ್‌ದಲ್ಲಿ ಆ ದಿನವೇ ನಾನು ಕೆಲವು ಹಿಂದೀಯ
ಕೌನ್ಸಿಲು ಮೆಂಬರರನ್ನು ನೋಡಿ ಮಾತನಾಡಿದೆನು. ಘೂರ್ಕರ ಕ್ರೂರ
ಕೃತ್ಯದ ವಿಚಾರವಾಗಿ ನಾನೆಷ್ಟು ಪ್ರಕೋಪಗೊಂಡಿದ್ದೆನೋ ಅಷ್ಟೇ
ಕೋಪಭಾವದಿಂದ ಅವರು ಆ ಕ್ರೂರ ಕೃತ್ಯವನ್ನು ಧಿಕ್ಕರಿಸಿದರು. ಆದರ
ನಿರುಪಾಯರಾದ ಅವರು ನ್ಯಾಯವಿಧಾಯಕ ಸಭೆಯಲ್ಲಿ ಕ್ರಮಪ್ರಕಾರ
ವಾಗಿ ಕೆಲವು ಪ್ರಶ್ನೆಗಳನ್ನು ಕೇಳಿ, ಅದಕ್ಕೆ ಅಧಿಕಾರಿಗಳು ಕೊಡುವ
ಉತ್ತರಗಳಿಂದ ತೃಪ್ತರಾಗಿ, ಅವರ ಹೇಡಿತನವನ್ನು ಸೂಚಿಸುವ ಕೆಲವ
ಠರಾವುಗಳನ್ನು ಪಾಸುಮಾಡುವಷ್ಟು ಅಧಿಕಾರ ಮಾತ್ರ ಅವರಿಗಿರುವುದು
ಆದ್ದರಿಂದಲೇ ಮಿ। ಮೊಂಟೇಗ ಸಾಹೇಬರು "ಹೌಸ್ ಒಫ್ ಕಾಮನ್ಸ್'
ಸಭೆಯಲ್ಲಿ ಹೇಳಿದ "ಬಂಗಾಳಾ ಸರಕಾರದವರು ಈ ವಿಚಾರವಾಗಿ
ಬಹು ದಯಾಭಾವದಿಂದ ವರ್ತಿಸಿರುವರು" ಎಂಬ ಹೂಂಕಾರಕ್ಕೆ
ಇನ್ನೂ ಪ್ರತ್ಯುತ್ತರವಿಲ್ಲದಂತಾಗಿದೆ.

ಈಗ ಈ ವಿಚಾರವಾಗಿ ಚೆನ್ನಾಗಿ ಯೋಚನೆ ಮಾಡಿ ನೋಡಿರಿ
ಅದರ ಸ್ವರೂಪದ ಚಿತ್ರವನ್ನು ಕಲ್ಪಿಸಿಕೊಂಡು ನೋಡಿರಿ! ಕಲ್ಪನೆ ಮಾತ್ರ
ಸಾಕು! ಬಹು ದುಃಖಿಗಳೂ, ಆಹಾರವಿಲ್ಲದೆ ಬತ್ತಿದವರೂ, ಬಡವರೂ
ನಿರಾಶ್ರಿತರೂ ಆದ ಹೆಂಗಸರು, ಗಂಡಸರು, ಮತ್ತು ಮಕ್ಕಳ ಮೇಲೆ
ಅರ್ಧ ರಾತ್ರಿಯಲ್ಲಿ ಘೂರ್ಕ ಸಿಪಾಯಿಗಳನ್ನು ಬಿಡುವ ಚಿತ್ರದ ಕಲ್ಪನೆ
ಮಾತ್ರ ಸಾಕು!! ಆ ಸಿಪಾಯಿಗಳು ತಮ್ಮ ಕೋವಿಗಳ ತುದಿಯಿಂದ
ಹೆಂಗಸರು ಮಕ್ಕಳ ತಲೆಯ ಮೇಲೆ ಹೊಡೆಯುತ್ತ "ಮಾರಿಕ

(ಕಾಲರಾ) ಉಪದ್ರವಶರಾಗಿದ್ದ ಆ ಬಡ ಜನರನ್ನು, ಮಳೆಯಲ್ಲಿ ಸಿಕ್ಕಿ ನರಳುವಂತೆ, ಚಂಡಾಟವನ್ನಾಡುವ ಮೈದಾನಪ್ರದೇಶಕ್ಕೆ ಓಡಿಸುವ ಚಿತ್ರದ ಕಲ್ಪನೆ ಮಾತ್ರ ಸಾಕು! ಪ್ರಿಯ ಬಂಧುವೆ, ಕಲ್ಪನೆ ಮಾಡಿರಿ! ನಿಜವಾಗಿಯೂ ಈ ಚಿತ್ರವನ್ನು ಕಲ್ಪಿಸಿಕೊಂಡು ನೋಡಿರಿ! ವಿಲಾಯತಿಯಲ್ಲಿ ನಾವು ಪಶುಗಳ ವಿಚಾರವಾಗಿಯೂ ಕೂಡ ಈ ರೀತಿಯಾಗಿ ವರ್ತಿಸುವುದಿಲ್ಲ! ಅಲ್ಲವೊ? ನಾನು ಅಲ್ಲಿಗೆ ಹೋಗಿದ್ದಾಗ ಒಬ್ಬ ಚಿಕ್ಕ ಹುಡುಗಿಯು ಕೆನ್ನೆಯು (ಗಲ್ಲವು) ಕ್ರೂರವಾದ ಪೆಟ್ಟಿಗೆ ಗುರಿಯಾಗಿ ಹರಿದು ಜಜ್ಜಿ ಹೋಗಿದ್ದುದನ್ನು ನಾನು ಸ್ವತಃ ನೋಡಿದೆನು!! ಅವಳ ಕಣ್ಣುಗುಡ್ಡೆಯು ಏನೋ ಅಕಸ್ಮಾತ್ತಾಗಿ ಅಪಾಯಕ್ಕೆ ಗುರಿಯಾಗಿರಲಿಲ್ಲ! ಆದರೂ—ಸಂಗತಿಗಳು ಹೀಗಿದ್ದರೂ—ಮಿ| ಮೊಂಟೆಗ್ ಸಾಹೇಬರು "ಕಾಮನ್ಸ್" ಸಭೆಯಲ್ಲಿ ಬಂಗಾಳ ಸರಕಾರದವರ "ಉದಾರ ಹೃದಯವನ್ನು" ಕುರಿತು ಬಣ್ಣಿಸುವಂತೆ ಅಧಿಕಾರಿಗಳು ತಮ್ಮ ವರದಿಗಳಿಗೆ ಬಣ್ಣ ಬಳಿದು ವಿಲಾಯತಿಗೆ ಕಳಿಸಿರುವರು.

ಪಶುಬಲವೂ ಜಾತಿಯತ್ವವೂ.

ನಾನು ಈಗ ನಿಷ್ಠುರ ಹೃದಯನೂ, ಅಧಿಕಾರಿವರ್ಗ ದ್ವೇಷಿಯೂ ಆಗಿದ್ದರೆ ಕ್ಷಮಿಸಿರಿ! ಡ್ಯೂಕ್ ಆಫ್ ಕೆನ್ನಾಟರು ಅಷ್ಟು ದೂರವಾದ ವಿಲಾಯತಿಯಿಂದ ಬಂದು—"ಅಮೃತಸರದ ವಿಚಾರವನ್ನು ಮರೆತು, ಕ್ಷಮೆಯನ್ನೀಡಬೇಕೆಂದು" ನಮಗೆ ಹೇಳಿದರು. ಆದರೆ ಹಿಂದುಸ್ಥಾನದ ಕಡೆಗೆ ಅವರ ಬೆನ್ನು ತಿರುಗಿದ ಕೂಡಲೆ, ನಿರಾಶ್ರಿತರಾದ ಬಡ ಜನರ ಮೇಲೆ ಸರಕಾರದವರು ತಮ್ಮ ನಿರ್ಲಜ್ಜವೂ ಕ್ರೂರವೂ ಆದ ಪಶುಬಲವನ್ನು ಮತ್ತೊಮ್ಮೆ ಪ್ರಯೋಗಿಸಿದರು! ಜನಗಳ ಅಭಿಪ್ರಾಯ ವಿರುದ್ಧವಾದ ಕೃತ್ಯವು ಮತ್ತೊಮ್ಮೆ ಆಚರಿಸಲ್ಪಟ್ಟಿತು. ಇಡೀ ಹಿಂದುಸ್ಥಾನದ ಜನರು ಈ ಹೇಡಿತನದ ಕೃತ್ಯವನ್ನು ಧಿಕ್ಕರಿಸುತ್ತಿರುವರು. ಆದರೆ ಗುಡ್ಡದ ತುದಿಯಲ್ಲಿಯ ದಾರ್ಜಿಲಿಂಗಿನಲ್ಲಿರುವ ಸರಕಾರವು ಇದನ್ನು ಲಕ್ಷಿಸುವುದಿಲ್ಲ! ಪಂಜಾಬ ಮತ್ತು ಅಮೃತಸರಗಳ ವಿಚಾರದಲ್ಲಿ ಮಾಡಿದಂತೆ ಈ ವಿಚಾರದಲ್ಲಿಯೂ ಅದು ಜನಗಳೊಂದಿಗೆ ಅಸಹಕಾರ

ವನ್ನು ಹೂಡಿ, "ನಾವು ಜನಗಳ ಅಭಿಪ್ರಾಯವನ್ನು ಲಕ್ಷಿಸುವುದಿಲ್ಲ" ಎಂದು ಹೇಳುತ್ತಿದೆ. ಹಾಗಾದರೆ ಈ ಹೂಂಕಾರಕ್ಕೆ ಪ್ರತಿಯಾಗಿ "ನೀವು ನಮ್ಮೊಂದಿಗೆ ಸಹಕರಿಸಲು ಸಂಪೂರ್ಣವಾಗಿ ತಿರಸ್ಕರಿಸುವಿರಿ ನಮ್ಮ ಅಭಿಪ್ರಾಯವನ್ನು ಸ್ವಲ್ಪವೂ ಲಕ್ಷಿಸುವುದಿಲ್ಲ. ಕ್ರೂರಭಾವ ದಿಂದ ನೀವು ನಮ್ಮಿಂದ ದೂರರಾಗಿರುವಿರಿ. ಈಗ ನಿಮ್ಮೊಂದಿಗೆ ನಮ್ಮ ಸಹಕಾರವನ್ನು ನಿಲ್ಲಿಸುವುದೊಂದೇ ಉಪಾಯವು. ನಾವು ನಮ್ಮ ಮನಸ್ಸಿಗೆ ತೋರಿದಂತೆ ವರ್ತಿಸುತ್ತೇವೆ. ನೀವು ನಿಮ್ಮ ಮನಸ್ಸಿಗೆ ತೋರಿದಂತೆ ವರ್ತಿಸಬಹುದು. ನಾವು ನಿಮ್ಮ ಸಹಾಯವನ್ನಾಗಲಿ, ನಿಮ್ಮ ಹಣವನ್ನಾಗಲಿ, ನಿಮ್ಮ ಅನುಗ್ರಹವನ್ನಾಗಲಿ ಅಪೇಕ್ಷಿಸುವುದಿಲ್ಲ" ಎಂದು ಜನಗಳು ಗರ್ಜಿಸಿದರೆ ನಿಮಗೆ ಆಶ್ಚರ್ಯವಾಗುವುದೊ? ಈಗಿನ ಅಸಹಕಾರ ಚಳವಳಿಕ್ಕೆ ಸರಕಾರದವರು ಜನಗಳಿಂದ ಸಂಪೂರ್ಣ ದೂರರಾಗಿರುವುದೇ ಮೂಲಕಾರಣವಾಗಿರುವುದು. ಇದು ನಿಮಗೆ ಗೊತ್ತಾಯಿತೊ?

ಸ್ವಲ್ಪ ಕಾಲಕ್ಕೆ ಹಿಂದೆ, ರೈಲಿನವರ ಸಂಪೂರ್ಣ ಅವಿವೇಕದ ಆಡಳಿತೆಯಿಂದ ಕರಾಚಿಯಲ್ಲಿ ಸೈನ್ಯದವರ ಗಾಡಿಗಳಲ್ಲಿನ ಕೆಲವು ಬ್ರಿಟಿಷ್ ಸೈನಿಕರು ಬಿಸಿಲಿನ ಬೇನೆಯನ್ನು ಸೈರಿಸಲಾರದೆ,—ಕ್ಷಿಪ್ರಸನ್ನಿಯಿಂದ ಮೃತಪಟ್ಟಾಗ ವಿಲಾಯತಿಯಲ್ಲಿ ಆ ವಿಚಾರವಾಗಿ ಎಂಥಾ ಬೊಬ್ಬೆಯು ಕೇಳಿಬರುತ್ತಿತ್ತೆಂಬುದು ನಿಮಗೆ ಜ್ಞಾಪಕವಿರುವುದೊ? ಮೆಸಪೊಟೆಮಿಯದ ಕಳಂಕ ವಿಚಾರವೂ ನಿಮಗೆ ಜ್ಞಾಪಕವಿರುವುದೊ? ಈ ವಿಚಾರಗಳಿಂದ ಇಂಗ್ಲೆಂಡಿನಲ್ಲಿ ಗಲಭೆಯೆದ್ದಿತು; ಏಕೆಂದರೆ ಅದರಲ್ಲಿ ಇಂಗ್ಲಿಷ ಜನರು ತೊಡಕಿಕೊಂಡಿದ್ದರು! ಆದರೆ ಅದೇ ವಿಧವಾದ ಅವಿವೇಕ ಆಡಳಿತವು ಹಿಂದುಸ್ಥಾನದಲ್ಲಿ ಪ್ರತಿಯೊಂದೆಡೆಯಲ್ಲಿ ಕಂಡುಬರುತ್ತಿರುವುದು; ಏಕೆಂದರೆ ಸರಕಾರವು ಜನರನ್ನು ಬಹಿಷ್ಕರಿಸಿ, ದೂರವಾಗಿ ಹಗಲಿರುಳೂ ತನ್ನ ವರದಿ, ಕಾಗದ, ಪತ್ರ ಸಂಗ್ರಹಗಳಲ್ಲಿ ಮಗ್ನವಾಗಿರುವುದು ಮತ್ತೆ ಸರಕಾರವು ಈ ರೀತಿಯಾಗಿ ದೂರವಾಗಿರುವುದನ್ನು ನೋಡಿ ಅದರ ಕೆಳಗಿನ ಅಧಿಕಾರಿಗಳು ತಮಗೆ ಲಾಭಕರವಾದ ರೀತಿಯಲ್ಲಿ ಸ್ವೇಚ್ಛೆಯಿಂದ ವರ್ತಿಸುತ್ತಿರುವರು. **ಸರಕಾರವು ನಿಜವಾಗಿಯೂ ಜನಗಳ ಪಕ್ಷವಾದ ಸರಕಾರವಾಗಿಲ್ಲವೆಂಬುದು ಸತ್ಯವಾದುದು!**

ಬರೀ ಮಾತಿನಲ್ಲಿಯೆ ಕೊನೆಗಾಣುವ, ಬಹುಕಾಲದಿಂದಲೂ ಬಣ್ಣ ತುಂಬಿದ ಶಬ್ದಗಳಿಂದ ಬಣ್ಣಿಸಲ್ಪಟ್ಟಿರುವ "ಸುಧಾರಣೆ"ಗಳ ವಿಚಾರವಾಗಿ ಬಹುಬುದ್ಧಿಶಾಲಿಗಳೂ, ಮಿತಶೀಲರೂ ಆದ ಭಾರತೀಯರು ನಿಜವಾಗಿಯೂ ಎಷ್ಟು ಬೇಸರಗೊಂಡಿರುವರೆಂಬುದನ್ನು ನೀವು ಗೊತ್ತು ಮಾಡಿಕೊಳ್ಳಬೇಕು. ಸನ್ ೧೮೫೮ನೆಯ ಇಸವಿಯಲ್ಲಿ ಮಹಾರಾಜ್ಞಿಯವರ, "ಹಿಂದುಸ್ಥಾನದ ಎಲ್ಲಾ ಜಾತಿಯವರನ್ನೂ ನಾವು ಸಮಾನ ಭಾವದಿಂದ ನೋಡಿಕೊಳ್ಳುವೆವು" ಎಂಬ ತಹನಾಮೆಯಾಗಿ ಈಗ್ಗೆ ಅರವತ್ತುಮೂರು ವರ್ಷಗಳಾಗಿರುವವು. ಆದಾಗ್ಯೂ ಜಾತೀಯ ಅಸಮಾನಭಾವವು ಇನ್ನೂ ನಮ್ಮ ಆಚರಣೆಯಲ್ಲಿರುವುದೆಂಬುದು (ನಮ್ಮ ಹೊಸ ವಾಯಸರಾಯರೊಬ್ಬರ ವಿನಾ) ನಮಗೆಲ್ಲರಿಗೂ ಗೊತ್ತಿರುವುದು. ಈ ವಿಚಾರವಾಗಿ ನನ್ನ ಸ್ವಂತ ಅನುಭವದಿಂದಲೆ ಹತ್ತು ಹನ್ನೆರಡು ಉಗ್ರವಾದ ಉದಾಹರಣೆಗಳನ್ನು ಕೊಡುವುದು ನನಗೆ ಬಹು ಸುಲಭವೂ ಸಾಧ್ಯವೂ ಆಗಿದೆ; ಇನ್ನು "ತಮ್ಮ ಜೋಡು (ಪಾದರಕ್ಷೆಯು) ತಮಗೆಲ್ಲಿ ಕಚ್ಚುವುದೆಂದು" ಚೆನ್ನಾಗಿ ತಿಳಿದಿರುವ ಹಿಂದೀಯರಾದರೊ ನೂರಾರು ಉದಾಹರಣೆಗಳನ್ನು ಕೊಡಬಲ್ಲರು.

ಸನ್ ೧೯೦೮–೦೯ನೆಯ ಸಾಲಿನ ಲಾರ್ಡ್ ಮಾರ್ಲೆ ಸಾಹೇಬರ ಸುಧಾರಣೆಗಳ ವಿಚಾರವೂ ನನಗಿನ್ನೂ ಜ್ಞಾಪಕವಿದೆ. ಕೊನೆಗೆ ಭಾರತೀಯರು ತಮ್ಮ ಆಡಳಿತವನ್ನು ತಾವೇ ಪೂರ್ಣವಾಗಿ ವಹಿಸಿಕೊಳ್ಳುವರಾಗಿದ್ದರೆಂದು ಆಗ ನಮಗೆ ಹೇಳುತ್ತಿದ್ದರು! ಅದರಿಂದ ಸರಕಾರದವರ ಸ್ವೇಚ್ಛಾಪ್ರಭುತ್ವವು ಸ್ವಲ್ಪವೂ ಅಲ್ಲಾಡಲಿಲ್ಲ!! ಮತ್ತೊಮ್ಮೆ ಪೂರ್ಣ ಅತೃಪ್ತಿಯೂ, ನಿರಾಶೆಯೂ ತಲೆದೋರಿತು!

ಸತ್ಯವಾಕ್ಯಗಳ ಸಾಮ್ಯ.

ಇನ್ನೂ ಈಗ "ಸುಧಾರಣೆ"ಗಳು ನಮ್ಮೆದುರಿಗಿಡಲ್ಪಟ್ಟಿರುವವು. ಯಾರ ವಿಶ್ವಾಸಕ್ಕೂ ಪಾತ್ರವಾಗದ "ಡೈಯಾರ್ಕಿ" ಎಂಬ ದ್ವಿಮುಖಾಡಳಿತವು ನಮಗೆ ಸಿಕ್ಕಿದೆ. ಅದು ಆಚರಣೆಗೆ ತರಲಾಗದಷ್ಟು ಕೆಟ್ಟ

ದ್ದಾಗಿರುವುದರಿಂದ ಅದು ಬದಲಾವಣೆಗೆ ಯೋಗ್ಯವಾಗಿದೆ ಎಂದು ನಿಜವಾಗಿ ಹೇಳಬಹುದು. "ಈಗ ನಾವು ಹಿಂದಕ್ಕೆ ಹೋಗುವುದು ಅಸಾಧ್ಯ.ಆದುದರಿಂದ ನಾವು ಮುಂದು ಮುಂದಕ್ಕೆ ಸರಿಯಬೇಕು" ಎಂಬೀ ಡೈಯಾರ್ಕಿಯ ಶಿಪಾರಸನ್ನು ಒಬ್ಬ ಅಧಿಕಾರಿಯು ನನ್ನಿದಿರಿನಲ್ಲಿ ಹೇಳಿದನು. ನಾನು ಇದುವರೆಗೆ ನಿಮಗೆ ತಿಳಿಸಿರುವ ಸಂಗತಿಗಳಿಂದ, "ಹಿಂದುಸ್ಥಾನದ ಪಾರ್ಲಿಮೆಂಟಿನ ಸರಕಾರದ ಸಂಬಂಧವಾಗಿ" ವಿಲಾಯತಿಯ ಪತ್ರಿಕೆಗಳಲ್ಲಿ ಕಂಡು ಬರುವ ಹೊಗಳಿಕೆಯೆಲ್ಲವೂ "ಉಪ್ಪಿಲ್ಲದ ಅಡುಗೆ"ಯಂತಿರುವುದೆಂದು ತಿಳಿದು ಬರುವುದು. ಈಗಲೂ ನೌಕರ ಶಾಹಿಗಳ (ಅಧಿಕಾರಿ ವರ್ಗದವರ) ಕೈಯಿಂದ ಯಾವ ನಿಜವಾದ ಸ್ಥಿರ ವಾದ ಅಧಿಕಾರವೂ ಹೋಗಿಲ್ಲವೆಂದು ನಾನು ನಂಬಿರುವೆನು. ಯಾವ ಅಧಿಕಾರವಾದರೂ ಅವರ ಕೈಬಿಟ್ಟು ಹೋಗಿದ್ದರೆ, ಬೇರೆ ರೀತಿಯಿಂದ ಅಂಥ ಅಧಿಕಾರಗಳು ಅವರ ವಶಕ್ಕೊಪ್ಪಿಸಲ್ಪಟ್ಟಿವೆ.

ಏಸುಕ್ರಿಸ್ತನ ಕಾಲದಲ್ಲಿ ಸ್ಕ್ರಾಯಬರೂ ಫಾರಿಶಾಯರೂ ಅವರ ಅಂತಃಕರಣಕ್ಕೆ ನೋವು ಉಂಟಾಗದ ವರೆಗೆ ಅವರ ಸ್ವಂತ ಆಡಳಿತದ ಬಾಹ್ಯಾಂಗಗಳನ್ನೂ ಬದಲಾಯಿಸುವುದಕ್ಕೂ ಅಂದಗಾಣಿಸುವಂತೆ ಮಾಡುವುದಕ್ಕೂ ಎಷ್ಟರ ಮಟ್ಟಿಗೆ ಸಿದ್ಧರಾಗಿದ್ದರೆಂಬುದು ನಿಮಗೆ ಜ್ಞಾಪಕ ವಿದೆಯೊ? ಕ್ರಿಸ್ತನು ಹೇಳಿದ ಪ್ರಕಾರ, ಅವರು ತಮ್ಮ ಹರಿವಾಣಗಳನ್ನೂ ಟೋಪಿಗಳ ಹೊರಭಾಗಗಳನ್ನೂ ನಿರ್ಮಲವಾಗಿಟ್ಟಿದ್ದರು. ಉಚ್ಚವಾದ ಧ್ಯೇಯಗಳನ್ನು ಪುರಸ್ಕರಿಸುವಂತೆ ನಟಿಸುತ್ತಿದ್ದರು. ಜಡಭಾವಗಳ ವಿಚಾರವಾಗಿ ಸ್ನಿಗ್ಧಭಾವದಿಂದ ಮಾತುಗಳನ್ನಾಡಿ, ತಾವು ಸತ್ಯವಂತರ ಮತ್ತು ಮಹಾಪುರುಷರ ಪಕ್ಷವನ್ನು ವಹಿಸಿದವರಂತೆ ತೋರ್ಪಡಿಸುತ್ತಿದ್ದರು. ಇಷ್ಟಾದರೂ ಅವರು ತಮ್ಮ ಅಧಿಕಾರಭಾವದಲ್ಲಿ ಎಂದಿಗೂ ಯಾವ ಉದಾರತ್ವವನ್ನೂ ತೋರಿಸಲಿಲ್ಲ. ಅವರ ವಿಚಾರವಾಗಿ, ಭಯಂಕರವಾದ ವ್ಯಾಜೋಕ್ತಿ ಭಾವದಿಂದ ಕ್ರಿಸ್ತನು ಹೇಳಿರುವುದೇನಂದರೆ,— "ವೇದಪುರುಷರ ಗೋರಿಗಳನ್ನು ನೀವೇ ತಯಾರಿಸುವಿರಿ. ಧಾರ್ಮಿಕರ ಸಮಾಧಿಗಳನ್ನು ನೀವೇ ಅಲಂಕರಿಸುವಿರಿ!"

ಹಿಂದುಸ್ಥಾನದ ಈಗಿನ ಸರಕಾರವು ಮನಃಪೂರ್ವಕವಾಗಿಯೆ ಕಪಟಭಾವವನ್ನು ತಾಳಿರುವುದೆಂದು ನಾನು ಹೇಳುವುದಿಲ್ಲ. ಸ್ಕ್ರೈಯಬರೂ ಫಾರಿಶಾಯರೂ ಅವರ ಕಾಲಕ್ಕೆ ತಕ್ಕಷ್ಟು ಧಾರ್ಮಿಕಭಾವನೆಯಿಂದ ಆಚರಿಸುತ್ತಿದ್ದರು. ಹಿಂದುಸ್ಥಾನದ ಸರಕಾರವು ಮನಃಪೂರ್ವಕವಾಗಿ ವಿಶೇಷ ಶ್ರಮವನ್ನು ವಹಿಸಿ ಕೆಲಸ ಮಾಡುವುದರಲ್ಲಿ ಇಡೀ ಜಗತ್ತಿನಲ್ಲಿ ಶ್ರೇಷ್ಠವಾದ್ದೆನಿಸಿಕೊಂಡಿರಬಹುದು! ಆದರೆ ಸರಕಾರದ ಕ್ರಮವು, ಜನರ ಅಭಿಪ್ರಾಯ ಮತ್ತು ಧ್ಯೇಯಗಳಿಂದ ದೂರವಾಗಿರುವುದು. ಈಗಣ ಮುಖ್ಯವಾದ ಚಳವಳಗಳ ವಿಚಾರವಾಗಿಯೂ ಅದು ಬಹು ತಪ್ಪು ಗ್ರಹಿಕೆಯನ್ನುಳ್ಳದಾಗಿ, ಈ ಚಳವಳಗಳ ವಿಚಾರವಾದ ಪ್ರತಿಯೊಂದು ವಿಷಯದಲ್ಲಿಯೂ—ಈಗಿನ ಅಸಹಕಾರದ ವಿಚಾರವಾಗಿ ಭೀತಿಗೊಂಡು ಆಚರಿಸುತ್ತಿರುವಂತೆಯೆ—ವಿರೋಧ ಭಾವದಿಂದ ಆಚರಿಸುತ್ತಿರುವುದು.

ಏಸುಕ್ರಿಸ್ತನು ಮತ್ತೊಂದು ಉದಾಹರಣೆಯನ್ನು ಕೊಟ್ಟಿರುವನು. ಇಂಗ್ಲೆಂಡಿನಲ್ಲಿರುವ ನಿಮಗೆ ಅದರಿಂದ ನಾನು ಹೇಳುವ ವಿಷಯವು ಸರಿಯಾಗಿ ತಿಳಿಯಬಹುದು. ಆತನು ಸುಧಾರಣೆಯ ತೇಪೆಗಳ ಅನುಪಯುಕ್ತತೆಯನ್ನು ಕುರಿತು ಆಗಿನ ಕಾಲದಲ್ಲಿಯೆ ಕೆಲವು ಮಾತುಗಳನ್ನು ಹೇಳಿರುವನು. ಆತನು ಹೇಳಿರುವುದೇನಂದರೆ "ಮನುಷ್ಯರು ಹಳೆಯ ಶೀಸೆಗಳಲ್ಲಿ ಹೊಸ ಮದ್ಯವನ್ನು ತುಂಬಿಡುವುದಿಲ್ಲ ... ... ಅಂತೆಯೆ ಮನುಷ್ಯರು ಹಳೆಯ ಬಟ್ಟೆಗೆ ಹೊಸ ಬಟ್ಟೆಯ ತೇಪೆಯನ್ನು ಹಚ್ಚುವುದಿಲ್ಲ. ಏಕೆಂದರೆ ಹೊಸ ಬಟ್ಟೆಯು ಹಳೆಯ ಬಟ್ಟೆಯನ್ನು ಹರಿದು ಬಿಡುವುದರಿಂದ ಹಳೆಯ ರಂಧ್ರವು ದೊಡ್ಡದಾಗುವುದು. ಆದರೆ ಹೊಸ ಮದ್ಯವನ್ನು ಹೊಸ ಶೀಸೆಗಳಲ್ಲಿಯೆ ತುಂಬಿಡಬೇಕು!"

ಹಿಂದೂಸ್ಥಾನದ ಈಗಿನ ಹೊಸ ಧಾರ್ಮಿಕ, ಸಾಮಾಜಿಕ, ಮತ್ತು ರಾಜಕೀಯ ಚಳವಳವೇ ಈ ಹೊಸ ಮದ್ಯವಾಗಿದೆ. ಮಹಾತ್ಮಾ ಗಾಂಧಿಯವರೇ ಅದರ ಮೂಲ ಪುರುಷರಾಗಿರುವರು. ಈ ಚಳವಳವು

ಈಗ ಇಡೀ ದೇಶದಲ್ಲೆಲ್ಲಿಯೂ ಹಬ್ಬಿರುವುದು. ಅದು ರಾಜಕೀಯ ದೃಷ್ಟಿಯಿಂದ ವಿಕಾರವಾದ, ನೀವು—ಖಂಡಿಸುವ, "—ನಾನ್-ಕೋ-ಆಪರೇಶನ್"ವೆಂಬ ಹೆಸರಿನಿಂದ ಅದು ಇಂಗ್ಲೆಂಡಿನಲ್ಲಿ ಪ್ರಸಿದ್ಧವಾಗಿರುವುದು!

ಇಲ್ಲಿನ ವಿದ್ಯಮಾನಗಳನ್ನು ನಿತ್ಯವೂ ಕಣ್ಣಿನಿಂದ ನೋಡುತ್ತಿರುವ ನನಗೆ ಈ ಚಳವಳವೆಂಬ ಹೊಸ ಮದ್ಯವನ್ನು ಸುಧಾರಣೆಯ ಕೌನ್ಸಿಲುಗಳೆಂಬ ತೇಪೆಗಳುಳ್ಳ ಹಳೆಯ ಶೀಸೆಗಳಲ್ಲಿ ಹಾಕಿಡುವುದು ನನ್ನ ಮನಸ್ಸಿಗೆ ಅಸಾಧ್ಯವಾಗಿ ತೋರುವುದು. ಅದರಿಂದ ಅವುಗಳ ರಂಧ್ರಗಳು ಮತ್ತಷ್ಟು ದೊಡ್ಡದಾಗುವವೆ ವಿನಾ ಮತ್ತೇನೂ ಇಲ್ಲ. ಜನಗಳ ನಿರ್ಣಯವೇ—ಅವಿತಂಡವಾದಿಗಳಾದ ಜನಗಳ ನಿರ್ಣಯವೇ—ಕೊನೆಯ ನಿರ್ಣಯವಾಗುವುದು. ಮಹಾತ್ಮಾಗಾಂಧಿಯವರೇ ನಿಜವಾಗಿ ತಮ್ಮನ್ನು ದುಶ್ಶಾಸನದ ತುಳಿತದಿಂದ ಉದ್ಧರಿಸುವರೆಂದು ಜನರು ದೃಢವಾಗಿ ನಂಬಿರುವರು. ರಕ್ತಸ್ರಾವವಾಗುತ್ತಿರುವ ಹಿಂದುಸ್ಥಾನದ ಗಾಯುಗಳನ್ನು ಗುಣಪಡಿಸುವುದರಲ್ಲಿ ಅವರೆ ಸಮರ್ಥರೆಂದು ಜನರು ತಿಳಿದಿರುವರು. ಮತ್ತೆ ಈಗಿನ ಪ್ರಜಾವಿರುದ್ಧವಾದ ಸರಕಾರವನ್ನು ವಿರೋಧಿಸುವುದಕ್ಕೂ ತಮ್ಮ ಸ್ವಾತಂತ್ರವನ್ನು ಪಡೆವುದಕ್ಕೂ ತಾವು 'ನಿಶ್ಚಯಿಸಿರುವೆವೆ'ಂದು ಅವರು ಸಾರಿ ಸಾರಿ ಹೇಳುತ್ತಿರುವರು.

ಹಾಗಾದರೆ, ನನ್ನ ಈ ಎರಡನೆಯ ಪತ್ರದಿಂದ ಹಿಂದುಸ್ಥಾನದಲ್ಲಿ ಪ್ರಚಾರವಾಗಿರುವ **ನಾನ್-ಕೋ-ಆಪರೇಶನ್** ಎಂಬ ಪದದ ಅರ್ಥವನ್ನು ನೀವು ಸರಿಯಾಗಿ ತಿಳಿದುಕೊಳ್ಳಲಾರಿರೊ? ಸರಕಾರದವರು ಜನರೊಂದಿಗೆ ಸಹಕರಿಸಲು ಕೊನೆಯ ವರೆಗೂ ಒಪ್ಪದಿದ್ದರೆ, ಆಗ ಇಡೀ ಜನಾಂಗವು ಸರಕಾರದೊಂದಿಗೆ ಸಹಕರಿಸಲು ತಿರಸ್ಕರಿಸುವಂಥ ಕಾಲವೂ ಬರುವುದೆಂದು ನಿಮಗೆ ಗೊತ್ತಾಗುವುದಿಲ್ಲವೆ? ಹಾಗಾದರೆ ಈಗ ಹಿಂದುಸ್ಥಾನದಲ್ಲಿ ಸಂಭವಿಸಿರುವ ಸಂಗತಿಯೂ ಅದೇ ಆಗಿದೆಯೆಂದು ನನಗೆ ತೋರುವುದು.

ಇಂಗ್ಲೆಂಡಿನ ಹೆಮ್ಮೆ

ಮೂರನೆಯ ಪತ್ರವು.

ಪಾರುಪತ್ಯಗಾರಿಕೆಯ ಸೂತ್ರ.

"ಪ್ರಿಯ ಬಂಧು—

"ಆಂಗ್ಲೋಸ್ಯಾಕ್ಸನ್ ಕುಲದವರಾದ ನಾವು ಇಡೀ ಜಗತ್ತಿನ ರಕ್ಷಣೆಗಾಗಿ ಪೋಲಿಸಿನವರಾಗಿದ್ದೇವೆಂಬ ಒಂದು ವಿಧವಾದ ಮೂರ್ಖ ತಿಳಿವಳಿಕೆಯು ಕಾಲಕ್ರಮದಿಂದ ನಮ್ಮನ್ನು ಆವರಿಸಿಕೊಂಡಿರುವುದು. ಹಿಂದುಸ್ಥಾನವನ್ನು ಈಗ ಈ ತಪ್ಪು ತಿಳಿವಳಿಕೆಯಿಂದ ಆಳುತ್ತಿರುವೆವು. ಅದರ ಹೊರಗಣ ಮತ್ತು ಒಳಗಣ ಎಲ್ಲ ವಿಧವಾದ ಅಪಾಯದಿಂದಲೂ ಹಿಂದುಸ್ಥಾನವನ್ನು ನಾವು ರಕ್ಷಿಸಬಲ್ಲೆವು; ಹಾಗೆ ಮಾಡುವುದು ನಮ್ಮ ಕರ್ತವ್ಯವೆಂಬ ತಪ್ಪು ಗ್ರಹಿಕೆಗಳನ್ನಿಟ್ಟುಕೊಂಡಿರುವೆವು. ಇದರ ಪರಿಣಾಮ ಸ್ವರೂಪವಾಗಿ, ಈ ದೇಶಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿಯೂ ನಾವು ಕೈಹಾಕುತ್ತಿರುವೆವು; ಅಥವಾ ಸ್ವಾತಂತ್ರ್ಯದ ಯಾವ ವಿಧವಾದ ಹೊಸ ಚಳವಳವನ್ನೂ ನಾವು ಬೆಳೆಯಗೊಡುವದಿಲ್ಲ; ಅಂಥಾ ಚಳವಳಗಳು ನಮ್ಮ ಬ್ರಿಟಿಷ ರಾಜರ ಮಧ್ಯಸ್ತಿಕೆ ಮತ್ತು ಅಧಿಕಾರಕ್ಕೆ ವಿರೋಧವಾದುವೆಂದು ನಾವು ತಿಳಿದುಕೊಳ್ಳುವೆವು.

ಅಂಗಡಿಕಾರರ ಜನಾಂಗ.

ಆದರೆ ಮೇಲೆ ಹೇಳಿದ ಎಲ್ಲಾ ವಿಧವಾದ ಸಂರಕ್ಷಕ ಕರ್ತವ್ಯವನ್ನು ಪ್ರತಿಫಲವಿಲ್ಲದೆ ನಾವು ಸ್ವೀಕರಿಸಲಾರೆವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನೋಟಕ್ಕೆ ತಕ್ಕಂಥ ತೆರಿಗೆಗಳನ್ನು ನಾವು ಹಿಂದುಸ್ಥಾನದ ಮೇಲೆ ಹೊರಿಸದಿದ್ದರೂ ಹಿಂದುಸ್ಥಾನದ ವ್ಯಾಪಾರದಿಂದ

ಇಂಗ್ಲೆಂಡಿಗೆ ವಿಶೇಷ ಲಾಭವಾಗುತ್ತಿದೆ! "ರಾಜ್ಯದ ಹಿಂದೆಯೆ ವ್ಯಾಪಾರ" ಎಂಬ ಒಂದು ಬ್ರಿಟಿಷ ಗಾದೆಯಿರುವುದು. ಇದಕ್ಕನು ಸಾರವಾಗಿ, ರಾಜಕೀಯ ಬಲದಿಂದ ಜಯಿಸಲ್ಪಟ್ಟ ಹಿಂದುಸ್ಥಾನದ ಮತ್ತು ಇತರ ರಾಜ್ಯಗಳಲ್ಲಿ ವ್ಯಾಪಾರದಿಂದ ವಿಶೇಷ ಲಾಭವನ್ನು ಪಡೆವುದರಲ್ಲಿ ಇಂಗ್ಲೆಂಡು ದೇಶವು ಹಿಂದುಳಿಯಲಿಲ್ಲ. ಕೊನೆಗೆ ನೋಡಿದರೆ, ನೆಪೋಲಿಯನನು ಹೇಳಿದಂತೆ "ನಾವು ಅಂಗಡಿಕಾರರ ಜನಾಂಗವಾಗಿದ್ದೇವೆ!" ಎಂದು ತಿಳಿದುಬರುವುದು. ಆಂಗ್ಲೋಸ್ಯಾ ಕ್ಸನ್ ಜನಗಳಲ್ಲಿ ಒಂದು ಗುಣವಿದೆ. ನಾವು ಯಾವುದಾದರೊಂದು ನೀಚವಾದ, ಹೇಯವಾದ, ಶೋಚನೀಯವಾದ ಕೃತ್ಯವನ್ನು ಮಾಡು ತ್ತಿದ್ದರೆ ಇತರರು ಅದನ್ನು ನೀಚಕೃತ್ಯವೆಂದು ಹೇಳಿದರೆ ನಾವು ಅದಕ್ಕೊಪ್ಪುವುದಿಲ್ಲ. ಅಂಥಾ ಆರೋಪಣೆಯನ್ನು ಪ್ರತಿವಾದಿಸಲು ನಾವು ಯಾವಾಗಲೂ ಬಹು ಪ್ರಯತ್ನಮಾಡುವೆವು. ಆದರೆ ಎಲ್ಲಾ ಸಂದರ್ಭಗಳಲ್ಲಿಯೂ ನಮಗೆ ಜಯವಾಗುವುದಿಲ್ಲ.

ದೇವರು ಮತ್ತು ಧನದೇವತೆ.

ಮೇಲೆ ಹೇಳಿದ ನಮ್ಮ ಗುಣದಿಂದ, ಇಂಗ್ಲೀಷರಾದ ನಾವು ಇತರರೊಂದಿಗೆ ವ್ಯವಹರಿಸುವಾಗ ಎರಡು ಮನಸ್ಸಿರುವವರಂತೆ ಆಚರಿ ಸುವೆವೆಂದು ಗೊತ್ತಾಗುವುದು. ನಾವು ದೇವರು ಮತ್ತು ಧನದೇವತೆ ಯನ್ನು ಏಕಕಾಲದಲ್ಲಿ ಪೂಜಿಸಲೆತ್ನಿಸುತ್ತಿರುವೆವು. ಆದರೆ ಹಾಗೆ ಮಾಡುವುದು "ಸೀನಾಯ್ ಗುಡ್ಡೆಯ ಮೇಲಿನ ಬೋಧನೆ"ಗೆ ವಿರೋಧವಾದುದರಿಂದ, ನಮ್ಮ ಆಚರಣೆಯಲ್ಲಿ ನಮಗೆ ಒಂದು ಅಸುಖಕರವಾದ ಭಾವನೆಯು ತೋರಿ ಬರುವುದು. ಆದರೆ ಆ "ಸೀನಾಯ್ ಗುಡ್ಡದ ಮೇಲಿನ ಬೋಧನೆಯು (Sermon on the Mount) "ವ್ಯವಹಾರಕ್ಕೆ ಅಯೋಗ್ಯ"ವೆಂದು ಅದನ್ನು ತ್ಯಜಿಸಿಬಿಡು ವೆವು. ಆದರೂ, ಅದನ್ನು ತ್ಯಜಿಸಿದಾಗ್ಯೂ ನಮಗೆ ತೃಪ್ತಿಯುಂಟಾಗುವು ದಿಲ್ಲ. ಕೊನೆಗೆ ಏಸುಕ್ರಿಸ್ತನ ಬೋಧನೆಯು ನಿಜವಾಗಿರಬಹುದೆಂದು ಒಂದು

ವಿಧವಾದ ಸಂಶಯ ಭಾವವು ನಮ್ಮಲ್ಲಿರುವುದು. ಇತಿಹಾಸಕಾರನಾದ ಎಸ್. ಆರ್. ಗಾರ್ಡಿನರ್ ಸಾಹೇಬನು "ವ್ಯಾಪಾರಿಕ ಮತ್ತು ಭಾವನಾಮಯಗುಣ, ಕಾರ್ಯದಕ್ಷ ಮತ್ತು ಕಲ್ಪನಾಮಯ, ಧಾರ್ಮಿಕ ಮತ್ತು ಪ್ರಾಪಂಚಿಕ ಸ್ವಭಾವ—ಈ ವಿರೋಧ ಗುಣಗಳನ್ನು ಏಕಕಾಲದಲ್ಲಿ ಏಕದೇಹದಲ್ಲಿಯೆ ಉಂಟಾಗಿದ್ದ ಕ್ರಾಮ್‌ವೆಲ್‌ನೇ ನಿಜವಾದ ಇಂಗ್ಲೀಷ್ ಮಾದರಿ ಪುರುಷನು! ಕವಿ ಸಾರ್ವಭೌಮನೆನಿಸಿದ ಶೇಕ್ಸ್‌ಪಿಯರನಲ್ಲ!!" ಎಂದು ಹೇಳಿರುವನು. "ಸಿಪಾಯಿಗಳೇ, ದೇವರಲ್ಲಿ ನಂಬಿಕೆಯನ್ನಿಡಿರಿ, ಆದರೆ ನಿಮ್ಮ ಚರೆಯು (ಕೋವಿಯ ಮದ್ದ)ನ್ನು ಒದ್ದೆಯಾಗದಂತೆ ಎಚ್ಚರದಿಂದ ನೋಡಿಕೊಂಡಿರಿ!" ಎಂಬ ಇಂಗ್ಲೀಷ್ ಮಾದರಿಯ ವಾಕ್ಯವನ್ನು ನುಡಿದವನು ಕ್ರಾಮ್‌ವೆಲ್‌ನೊ ಅಥವಾ ಅವನ ತರುವಾಯ ಬಂದ ಮತ್ತೊಬ್ಬನೊ?

ಮುಖ್ಯವಾಗಿ ಸತ್ಯಾಂಶವೇನೆಂದರೆ **"ವ್ಯವಹಾರ ಯೋಗ್ಯ"** ವೆಂಬ ಪದವು ಬ್ರಿಟಿಷರಿಂದ ಪೂಜಿಸಲ್ಪಡುವ ನಿರಾಕಾರ ಮೂರ್ತಿಯಾಗಿರುವುದು! ಇಂಗ್ಲೀಷರಾದ ನಾವು ಮೊದಲು ಯಾವುದಾದರೊಂದು ವಿಷಯವು ಸತ್ಯವಾದುದೊ ಎಂದು ವಿಚಾರಿಸುವುದಿಲ್ಲ. ಮೊದಲು ಅದು "ಆಚರಣೆಗೆ ಸಾಧ್ಯವಾಗಿರುವುದೊ" ಎಂದು ಕೇಳುವೆವು. ಆದುದರಿಂದಲೇ ಯುದ್ಧದಿಂದ ಜಯಿಸಲ್ಪಟ್ಟ ಬ್ರಿಟಿಷ ಸಾಮ್ರಾಜ್ಯದ ಇತರ ರಾಜ್ಯಗಳೆಲ್ಲ ಅಂಥ ವಿಶೇಷ "ಧನ್ಯವಾಗಿರುವವೆಂಬ" ತರ್ಕಶಾಸ್ತ್ರಕ್ಕೆ ಪೂರ್ಣ ವಿರುದ್ಧವೂ ಆದರೆ ವ್ಯವಹಾರಕ್ಕೆ ಪೂರ್ಣ ಯೋಗ್ಯವೂ ಆದ, ಸಿದ್ಧಾಂತಗಳು ಕಲ್ಪಿಸಲ್ಪಟ್ಟಿವೆ. ಅಂಥ ದುರ್ಭಾಗ್ಯ ದೇಶಗಳು ಬ್ರಿಟನ್ನಿಗೆ ವ್ಯಾಪಾರ ಲಾಭವನ್ನು ಕೊಡುವದರಿಂದಲೂ ಬ್ರಿಟನಿನ ರಕ್ಷಣೆಗೆ ವಿಶೇಷ ಬೆಲೆಯನ್ನು ತೆರುವುದರಿಂದಲೂ "ಧನ್ಯವಾಗಿವೆ" ಎಂದು ಹೇಳುವೆವು. ನಾವು ಹುಡುಗರಾಗಿ ಶಾಲೆಗೆ ಹೋಗುತ್ತಿದ್ದ ಸಮಯದಲ್ಲಿಯೂ ಈ ಶಬ್ದಗಳೆಲ್ಲ ಹುರುಳಿಲ್ಲದವುಗಳಂತೆಯೊ, ಅಸಾಧ್ಯ ವ್ಯಾಪಾರವೆಂಬಂತೆಯೊ ನಮಗೆ ಬೋಧೆಯಾಗುತ್ತಿದ್ದಿತು. ಈಗ ನಾವು ವಯಸ್ಕರಾಗಿ

ಬೆಳೆದು, ಯುದ್ಧದಿಂದ ಚಕ್ರಾಧಿಪತ್ಯ ಸ್ಥಾಪನೆಯನ್ನು ಮಾಡುವುದು, ಮೂಲತಃ ಎಷ್ಟು ನೀಚವಾದುದೆಂಬುದೂ, ಅದನ್ನೆ ಒಂದು ಕ್ರಮವಾಗಿ ಸ್ಥಾಪಿಸುವುದು ಎಷ್ಟು ಅಸಹ್ಯವಾದುದೆಂಬುದೂ, ಎಷ್ಟು ನಿಕೃಷ್ಟವಾದು ದೆಂಬುದೂ ನಮಗೆ ತಿಳಿದಿರುವುದು. ಈ ಸಂಗತಿಯನ್ನು ತಿಳಿದುಕೊಳ್ಳದಂಥಾ ಸ್ಥಿತಿಯಲ್ಲಿ ನೀವಿರದಿದ್ದರೆ ನಾನು ಈ ಪತ್ರಗಳನ್ನು ನಿಮಗೆ ಬರೆಯು ತ್ತಿರಲಿಲ್ಲ! ಖಂಡಿತವಾಗಿಯೂ ಬರೆಯುತ್ತಿರಲಿಲ್ಲ!—ಏಕಕಾಲದಲ್ಲಿಯೆ ಕ್ರೈಸ್ತಧರ್ಮಾವಲಂಬಿಯೂ, ಚಕ್ರಾಧಿಪತ್ಯವಾದಿಯೂ ಆಗಿರುವುದು ಅಸಾಧ್ಯವಾಗಿರದಿದ್ದರೂ ಕಷ್ಟತರವಾದುದೆಂದು ನಾವಿಬ್ಬರು ಒಪ್ಪಿಕೊಳ್ಳು ವೆವು.—ಅಲ್ಲವೊ?—"ನೀವು ದೇವರನ್ನೂ ಧನಲಕ್ಷ್ಮಿಯನ್ನೂ ಏಕ ಕಾಲದಲ್ಲಿಯೆ ಪೂಜಿಸಲಾರಿರಿ" ಎಂಬೀ ಏಸುಕ್ರಿಸ್ತನ ವಾಕ್ಯಗಳನ್ನು ನಾವು ಎಷ್ಟು ಮರೆಯಲೆತ್ನಿಸಿದರೂ, ಅವುಗಳಲ್ಲಿ ಪೂರ್ಣ ಸತ್ಯಾಂಶ ವಿರುವುದು.

"ಮಾಬಾಪ್" ಸರಕಾರವು.

ನಾನು ಈಗ ಬರೆದಿರುವುದೆಲ್ಲ ನೇರವಾಗಿ ಹಿಂದುಸ್ಥಾನದ ಈಗಿನ ಸ್ಥಿತಿಗೆ ಸಂಬಂಧಿಸಿರುವುದು. "ಯುದ್ಧದಿಂದ ನೀವು ರಾಜ್ಯಸ್ಥಾಪನೆ ಯನ್ನು ಮಾಡಿದುದು ನೈತಿಕ ಪದ್ಧತಿಗೆ ವಿರೋಧವಾದುದೆಂಬ" ಮನ ಸ್ಸನ್ನು ಕದಡಿಸುವ ಭಾವನೆಯು ಆಗಾಗ್ಗೆ ನಮ್ಮ ಕಣ್ಣೆದಿರು ನಲ್ಲಿ ಬಂದು ನಿಲ್ಲುವುದು. ಸರ್. ಫ್ರಾಂಕ್ ಬೀಮನ್ ಸಾಹೇ ಬನು ನಿರ್ದಾಕ್ಷಿಣ್ಯವಾಗಿ ಹೇಳಿರುವಂತೆ "**ನಾವು ಹಿಂದುಸ್ಥಾನ ವನ್ನು ಕದ್ದುಕೊಂಡೆವು.**" ಇದು ನಿಜವೆಂದು ನಮ್ಮೆಲ್ಲರ ಹೃದ ಯಕ್ಕೆ ಚೆನ್ನಾಗಿ ಗೊತ್ತಿದೆ. ಅಂದಿನಿಂದ ನಾನು ಹೇಳಿರುವ "ನೈತಿ ಕಾತ್ಮ ಸುಖಕ್ಕೆ ವಿರೋಧವಾದ ಒಂದು ಭಾವನೆಯು" ನಮ್ಮ ಮನಸ್ಸ ನ್ನಾವರಿಸಿಕೊಂಡಿರುವುದು. ನಮ್ಮ ಬ್ರಿಟಿಷ್ ಆಡಳಿತೆಗಳೆಲ್ಲದರ ಮೇಲೂ ಇದರ ಗುರುತು ಚೆನ್ನಾಗಿ ಕಂಡುಬರುವುದು. ಮುಂಚೆ ತಾನು ಮಾಡಿದ ಕಳ್ಳತನವನ್ನು ಮುಚ್ಚಿಕೊಳ್ಳುವುದಕ್ಕೆ ಪ್ರಜೆಗಳಿಗೆ ಒಂದು

ವಿಧವಾದ "ಪೈತೃಕ (ತಂದೆಯ) ಪಾಲನಾ" ಭಾವವನ್ನು ತೋರಿಸುವುದು ಬ್ರಿಟನ್ನಿಗೆ ಅವಶ್ಯಕವಾಗಿದ್ದಿತು. ಬೇರೆ ಶಬ್ದವನ್ನು ಉಪಯೋಗಿಸಬಹುದಾದರೆ, ಆ ಭಾವನೆಯನ್ನು "ಮಹಾ ಪೈತೃಕ (Grand Paternal) ಪಾಲನಾ ಭಾವನೆ"ಯೆಂದು ನಾನು ಕರೆಯುವೆನು. ಏಕೆಂದರೆ, ಅಂಥಾ ಪಾಲನೆಯು ಈ ಭೂಮಂಡಲದಲ್ಲಿ ಮುಂಚೆ ಇರಲಿಲ್ಲ. ಇಂಥಾ "ಮಾತಾಮಹೀ" ಪ್ರೇಮ ಪೂರ್ಣವಾದ ಸರಕಾರದಲ್ಲಿ ಸಾಧಾರಣ ನಾಗರಿಕ (ಪಟ್ಟಣಿಗ)ನೂ ಕೂಡ ಹಿಂಸಾತ್ಮಕ ಆಯುಧವನ್ನು ಕೈಯಲ್ಲಿ ಮುಟ್ಟುವುದಕ್ಕೂ ಅಪ್ಪಣೆ ಇಲ್ಲ! ಅಪ್ಪಣೆ ಕೊಟ್ಟರೆ ಅದು ನಮ್ಮ ಮೇಲೆ ಉಪಯೋಗಿಸಲ್ಪಡುವದೆಂದು ಭಯವಿಲ್ಲ!—ಅಂಥಾ ಭಾವನೆಯೆ ನಮ್ಮಂಥಾ ಸಮರ್ಥರಿಗೆ ಹಾಸ್ಯಾಸ್ಪದವಾದುದು!! ಆದರೆ, ಅಪ್ಪಣೆ ಕೊಟ್ಟರೆ ಆ ಆಯುಧದಿಂದ ಅವರು ತಂತಮ್ಮೊಳಗೆ ಗಾಯಮಾಡಿಕೊಂಡಾರೆಂಬ ಪ್ರೀತಿ ಭಾವನೆಯಿಂದ ಅವರಿಗೆ ಅಪ್ಪಣೆಯನ್ನು ನಾವು ಕೊಡುವುದಿಲ್ಲ!!!—ಪ್ರತಿಯೊಂದು ಇಲಾಖೆಯ ಮುಖ್ಯಾಧಿಕಾರಿಯೂ ಯುರೋಪಿಯನಾಗಿರಬೇಕು! ಏಕೆಂದರೆ, ಬ್ರಿಟಿಷರ ಪಾಲನೆಯಲ್ಲಿ ಯಾವುದೂ ಕ್ರಮ ತಪ್ಪಿ ಹೋಗಬಾರದು! ಇಷ್ಟು ಜಾಗರೂಕವಾಗಿದ್ದರೂ ಏನಾದರೊಂದು ಅಕ್ರಮವು ಸಂಭವಿಸಿದರೆ, ಆಗ ಅದರ ಮಾರ್ಪಾಟಿಗಾಗಿ ಒಬ್ಬ ಇಂಗ್ಲೀಷ್ ಅಧಿಕಾರಿಯು ಬರಬೇಕು. ಮೂಲೋಪದೇಶಗಳೆಲ್ಲ ಇಂಗ್ಲೀಷರಿಂದಲೆ ಆಗಬೇಕು. ವಿದ್ಯಾಭ್ಯಾಸವೂ ಇಂಗ್ಲೀಷು ಪುಸ್ತಕಗಳ ಮುಖಾಂತರ, ಇಂಗ್ಲೀಷು ಭಾಷೆಯಲ್ಲಿಯೆ ಆಗಬೇಕು. ಇದೆಲ್ಲ ಇಲ್ಲವಾದರೆ ಅವರ ಉಪಕಾರಿಗಳಾದ ಇಂಗ್ಲೀಷು ಶಾಸಕರ ಮತ್ತು ತಮ್ಮ ದೇಶದವರ ಅಪೇಕ್ಷೆಗಳನ್ನು ಹಿಂದುಸ್ಥಾನದವರು ಹೇಗೆ ತಿಳಿದುಕೊಳ್ಳಬಲ್ಲರು!!

ನಾನು ಹೀಗೆ ವಾದಮಾಡುವಾಗ ನೀವು ಏನನ್ನು ಹೇಳುವುದಕ್ಕೆ ಆತುರಗೊಂಡಿರುವಿರೆಂಬುದು ನನಗೆ ಗೊತ್ತಿದೆ. ನಿಮಗಾಗಿ ನಾನೇ ಅದನ್ನು ಹೇಳುವೆನು. ನೀವು ಮತ್ತೆ ಹೇಳುವಿರಿ, "ಆದರೆ ಆ ಸ್ಥಿತಿ

ಯೆಲ್ಲವೂ **ಬದಲಾಯಿಸಿದೆ!"** ಎಂದು.–**"ಸ್ಥಿತಿಯು ಬದಲಾಯಿಸಿದೆಯೊ?"** ಈ ಎರಡು ಶಬ್ದಗಳು ನಮ್ಮಿಬ್ಬರಲ್ಲಿರುವ ಸಂಪೂರ್ಣ ವಿರೋಧಭಾವವನ್ನು ಸೂಚಿಸುವವು. ಈ ಬದಲಾವಣೆಯ ವಿಚಾರವಾಗಿ ಸ್ವತಃ ನಾನೇ ಎಷ್ಟು ನಿರಾಶನಾಗಿರುವೆನೆಂದು ಉದಾಹರಣೆಗಳ ಮೂಲಕ ನಿಮಗೆ ನಿದರ್ಶಿಸಿರುವೆನು. ಬಹಿರಂಗದ ಬದಲಾವಣೆಯು ನನಗೆ ಚೆನ್ನಾಗಿ ಕಂಡು ಬಂದಿದೆ; ಆದರೆ ಅಂತರಂಗದ ಬದಲಾವಣೆಯು ಇನ್ನೂ ಕಂಡುಬರುತ್ತಿಲ್ಲ. ಪೋಲಿಸ ಖಾತೆಯಂತಹ ವಿಷಯಗಳನ್ನು ಭಾರತೀಯರ ವಶಕ್ಕೊಪ್ಪಿಸಲು ಮೂಲವಿರೋಧಿಯಾದಂಥಾ ದ್ವಿಮುಖ ಸರಕಾರವೆ (ಡೈಯಾರ್ಕಿಯೆ) ಈ ಮುಂಚೆ ಇದ್ದ ಸರಕಾರಕ್ಕಿಂತಲೂ ಹೆಚ್ಚು ಅನುಗ್ರಹ ಮತ್ತು ಪೈತೃಕಭಾವ ಸೂಚಕವೂ, ಮತ್ತೂ ಕಾಲ ಕ್ರಮದಿಂದ ಅದೆ ವಿಶೇಷವಾಗಿ "ಮಾತಾಮಹೀ ಪ್ರೇಮಭಾವ ಸೂಚಕವೂ" ಆಗಬಹುದೆಂದು ನನಗೆ ತೋರುತ್ತದೆ!!! ಇದು ಯಾವ ರೀತಿಯಲ್ಲಿಯೂ ಮುಂದರಿಯದ, ಅರ್ಧ ಹಿಂದೆ ಅರ್ಧ ಮುಂದೆ ಹೆಜ್ಜೆಗಳನ್ನಿಡುವ ನಡೆಗೆಯನ್ನು ಹೋಲುವುದು. ನನ್ನ ಅಭಿಪ್ರಾಯವು ತಪ್ಪಾಗಿರಬಹುದು. ಆದರೆ ನನಗೆ ಪ್ರಕೃತ ತೋರುವ ಮಟ್ಟಿಗೆ, ಈ "ಡೈಯಾರ್ಕಿ"ಯಿಂದ ಹಿಂದುಸ್ಥಾನದವರು ತಂತಮ್ಮ ಕೆಲಸಗಳನ್ನು ತಮಗೆ ತೋರಿದ ರೀತಿಯಲ್ಲಿ ಮಾಡಿಕೊಳ್ಳಲು ಯಾವ ಹಕ್ಕೂ ದೊರೆಯಲಾರದೆಂದು ಗೊತ್ತಾಗುತ್ತಿದೆ. ಈ ವಿಚಾರದಲ್ಲಿ "ಏನೂ ಇಲ್ಲದೆ ಉಪವಾಸದಲ್ಲಿರುವುದಕ್ಕಿಂತ ಅರ್ಧ ರೊಟ್ಟಿಯನ್ನಾದರೂ ಸ್ವೀಕರಿಸುವುದು ಮೇಲು" ಎಂಬೀ ವಾಕ್ಯವು ಯಥಾರ್ಥವಾಗಿಲ್ಲವೆಂದು ನಾನು ಹೇಳುವುದನ್ನು ನೀವು ನಂಬಿರಿ! ಏಕೆಂದರೆ ಇಲ್ಲಿ ಅರ್ಧ "ರೊಟ್ಟಿ" ಎಂಬುದರ ಅರ್ಥವು "ಇನ್ನೂ ಅವಿಶ್ವಾಸ" ವೆಂತಾಗುವುದು. ಇದು ರಾಜನೀತಿಗೆ ಬಹು ಅಪಾಯಕರವಾದ್ದು!

ಇಂಗ್ಲೀಷ ಜನರ ಅಸಹಕಾರ.

ಮೇಲೆ ಹೇಳಿದ ನನ್ನ ಅಭಿಪ್ರಾಯಗಳಿಗೆ ಆಧಾರಭೂತವಾದ ಎರಡು ಉಧಾಹರಣೆಗಳನ್ನು ಕೊಡುವೆನು. ಈಗ್ಗೆ ಸ್ವಲ್ಪ ಸಮಯಕ್ಕೆ ಹಿಂದೆ,

ಯುರೋಪಿಯನರಿಗೆ ವಿಶೇಷ ಸಂಬಂಧವಿಲ್ಲದಂಥಾ ಮುಖ್ಯವಾಗಿ ಭಾರತೀಯರಿಗೆ ಸಂಬಂಧಿಸಲ್ಪಟ್ಟ ಒಂದು ಮುಖ್ಯ ವಿಷಯುವನ್ನು ಚರ್ಚಿಸುವುದಕ್ಕಾಗಿ ಉತ್ತರದೇಶದಲ್ಲಿ ಒಂದು ಸಭೆಯು ಸೇರಿದ್ದಿತು. ಅದರಲ್ಲಿ ನಾನೂ ಇದ್ದೆನು. ಮತ್ತೆ ಕೆಲವು ಇಂಗ್ಲೀಷ ಜನರೂ ಹಾಜರಿದ್ದರು. ಉಳಿದವರೆಲ್ಲರೂ ಹಿಂದೀಯರಾಗಿದ್ದರು. ಆ ಸಭೆಯ ಅಧ್ಯಕ್ಷರೂ, ಅಲ್ಲಿದ್ದ ಇಂಗ್ಲೀಷ ಜನರೂ ಆ ಸಭೆಯ ಕಾರ್ಯಕ್ರಮುಗಳನ್ನೆಲ್ಲ ಇಂಗ್ಲೀಷಿನಲ್ಲಿ ನಡೆಯಿಸಲಾರಂಭಿಸಿದರಿಂದ ಸಭಿಕರಲ್ಲನೇಕರು ಮಾತನಾಡಲು ಶಕ್ತರಾಗಿರಲಿಲ್ಲ. ಅಲ್ಲಿ ಆ ದಿನ ಆಲೋಚಿಸಬೇಕಾಗಿದ್ದ ವಿಷಯುವಾಗಿ ಅಲ್ಲಿದ್ದವರೆಲ್ಲರಿಗಿಂತಲೂ ಹೆಚ್ಚು ಮಾಹೀತಿಯುಳ್ಳವನಾಗಿದ್ದ ಒಬ್ಬ ಹಿಂದೀಯ ಗೃಹಸ್ಥನೂ ಇದ್ದನು. ಆತನು ಇಂಗ್ಲೀಷಿನಲ್ಲಿ ಚೆನ್ನಾಗಿ ಮಾತನಾಡುತ್ತಿದ್ದನು. ಆದರೆ ಆತನ ಭಾವನೆಗಳೆಲ್ಲ "ದೇಶೀಯ"ವಾಗಿದ್ದವು, ಎಂದರೆ ಆತನು ಆಲೋಚಿಸುವಾಗ ತನ್ನ ಸ್ವಂತ ದೇಶೀಯ ಮನಸ್ಸಿನಿಂದ ಆಲೋಚಿಸುತ್ತಿದ್ದನು; ವಿದ್ಯಾಭ್ಯಾಸದಿಂಟ ಲಭಿಸಿದ "ಇಂಗ್ಲೀಷ್ ಮನಸ್ಸಿ"ನಿಂದಲ್ಲ. ಆತನ ಕಲ್ಪನಾರೀತಿಯೂ ವಿಶೇಷವಾಗಿ ಸ್ವಯಂಕಲ್ಪಿತವಾಗಿದ್ದಿತು. ಇದರಲ್ಲಿಯೂ ಶಾಲೆಯಲ್ಲಿ ಕಲಿತ ಇಂಗ್ಲೀಷ್ ಕ್ರಮವಿರಲಿಲ್ಲ! ಆ ಸಭೆಯ ಕಾರ್ಯನಿರ್ವಾಹಕ ಮಂಡಳಿಯಲ್ಲಿ ಈತನ ವಿನಾ ಇನ್ನಿಬ್ಬರು—ಮೂವರು ದೇಶೀಯರಿದ್ದರು. ಅವರು "ಇಂಗ್ಲೀಷ್ ಮನಸ್ಸಿನವರಾಗಿದ್ದರು;" ಹಾಗೆಂದರೆ, ಅವರ ಜೀವನಕ್ರಮ, ಉಡಿಗೆತೊಡಿಗೆ ಆಚಾರ, ವ್ಯವಹಾರಾದಿಗಳಲ್ಲಿ ಅವರು ಪೂರ್ಣ ಇಂಗ್ಲೀಷರಂತಾಗಿ, ತಮ್ಮ ದೇಶೀಯರ ಭಾವನೆಗಳಿಂದ ದೂರರಾಗಿದ್ದರು. ಆದ್ದರಿಂದ ಆ ದಿನ ಆಲೋಚನೆಗಾಗಿಡಲ್ಪಟ್ಟ ಭಾರತೀಯರ ಸಂಬಂಧವಾದ ವಿಷಯುವನ್ನು ಅವರು ಇಂಗ್ಲೀಷರ ರೀತಿಯಲ್ಲಿ ಆಲೋಚಿಸಲಾರಂಭಿಸಿದರು. ಆ ದಿನದ ಸಭೆಯಲ್ಲಿ ಹೆಚ್ಚಾಗಿ ನೆರೆದಿದ್ದ ಹಿಂದೀಯರನ್ನು ಇಂಗ್ಲೀಷ ಸಭಿಕರು ಸಂಪೂರ್ಣವಾಗಿ ಮರೆತುಬಿಟ್ಟರು. ಅವರು (ಹಿಂದೀಯರು) ಇಂಗ್ಲೀಷನ್ನರಿಯದಿದ್ದುದೆ ಇದಕ್ಕೆ ಕಾರಣವಾಗಿದ್ದಿತು. ಕೆಲವು ಸಂಗತಿಗಳು ಮಾತ್ರ ಆಗಿಂದಾಗ್ಗೆ ಅವರಿಗಾಗಿಯೆ ಭಾಷಾಂತರಿಸಲ್ಪಡುತ್ತಿದ್ದವು. ಆ ಸಭೆಯಲ್ಲಿ "ಇಂಗ್ಲೀಷು ಮನಸ್ಸಿನ" ದೇಶೀಯರೊಂದಿಗೆ ಇಂಗ್ಲೀಷಿನವರು ಸಹಕರಿಸುವುದು ಸಾಧ್ಯ

ವೆಂದು ಚೆನ್ನಾಗಿ ಕಂಡುಬರುತ್ತಿದ್ದಿತು. ಆದರೆ "ದೇಶೀಯ ಮನಸ್ಸಿನ" ಗೃಹಸ್ಥನು ಇಂಗ್ಲೀಷಿನಲ್ಲಿ ಮಾತನಾಡಿದರೂ ಅವರು (ಇಂಗ್ಲೀಷರು) ಆತನೊಂದಿಗೆ ಸಹಕರಿಸುವುದಸಾಧ್ಯವಾಗಿದ್ದಿತು. ಏಕೆಂದರೆ ಆತನ ಭಾವನಾಕ್ರಮವನ್ನು ತಿಳಿಯುವುದು ಅವರಿಗೆ ಅಸಾಧ್ಯವಾಗಿದ್ದಿತು — ಇಷ್ಟುಮಾತ್ರವೇ ಅಲ್ಲ!—ಇನ್ನೊಂದು ಸಂಗತಿಯೂ ನಡೆಯಿತು!!— ನಾವಾಗಿಯೆ ಈ ಕ್ರಮವನ್ನು ನಿಲ್ಲಿಸಲೆತ್ನಿಸುತ್ತಿರುವೆವೊ ಎಂಬಂತೆ ಚರ್ಚೆಯ ವಿಷಯವು ಮತ್ತೆ ಅಲ್ಪಸಂಖ್ಯಾಕರಾದ ಇಂಗ್ಲೀಷರ ಕಡೆಗೇ ಬರುತ್ತಿದ್ದಿತು. ಕೊನೆಗೆ ನಾವೇ ಎಲ್ಲವನ್ನೂ ನಿರ್ಧರಿಸಿದೆವು.

ಹೀಗೇಕಾಯಿತು?—ಏಕೆಂದರೆ ಆ ಸಭೆಯ ಕಾರ್ಯಕ್ರಮವೆಲ್ಲ ಇಂಗ್ಲೀಷ ಭಾಷೆಯ ಮುಖಾಂತರವಾಗಬೇಕಾಗಿತ್ತು. ಆ ದಿನ ಇಂಗ್ಲೀಷರಾದ ನಾವು, ಇಂಗ್ಲೀಷರಾಗದಿದ್ದ ಭಾರತೀಯ ಸಹೋದ್ಯೋಗಿಗಳೊಂದಿಗೆ ಉದ್ದೇಶಪೂರ್ವಕವಾಗಿಯೆ "ಅಸಹಕಾರ ಭಾವ"ದಿಂದಿದ್ದೆವು. ಅವರು ನಮ್ಮ ಕಡೆ ಬರಬೇಕೆಂದು ಬಲಾತ್ಕರಿಸುತ್ತಿದ್ದೆವು. ನಾವು ಅವರ ಕಡೆಗೆ ಹೋಗಲು ಸಿದ್ಧರಾಗಿರಲಿಲ್ಲ. ಆ ದಿನ ಚರ್ಚೆಗಳನ್ನೆಲ್ಲ ದೇಶೀಯ ಭಾಷೆಯಲ್ಲಿ ಮಾಡಬಹುದೆಂದು ನಾವು ಒಪ್ಪಿಕೊಂಡಿದ್ದರೆ ಆಗ ಇಂಗ್ಲೀಷರಾದ ನಮಗೆ ನಿಜವಾಗಿಯೂ ಯೋಗ್ಯವಾದ ಸ್ಥಳವು ದೊರೆತಂತಾಗುತ್ತಿತ್ತು. ಆಗ ನಾವು ಹಿಂದುಸ್ಥಾನದಲ್ಲಿ ಯಜಮಾನರಾಗಿರದೆ ಅತಿಥಿಗಳಾಗಿಯೂ, ಕ್ರೂರಶಾಸಕರಾಗಿರದೆ ಸಹಾಯಕರಾಗಿಯೂ, ಹಿಂದುಸ್ಥಾನದ ಮೇಲೆ ಅಧಿಕಾರಭಾವವನ್ನು ತೋರಿಸದವರಾಗಿರದೆ ಕೇವಲ ಅದರ ಸೇವಕರಾಗಿಯೂ ಇರುವಂತೆ ತೋರಿಸಬಹುದಾಗಿತ್ತು.

ದ್ವಿಮುಖಾಡಳಿತವು (ಡೈಯಾರ್ಕಿಯು) ದುಸ್ಸಾಧ್ಯ.

ಇನ್ನೊಂದು ಮಾದರಿಯಂತಿರುವ ಸಂಗತಿಯು ನಾನು ಈ ಮೊದಲೆ ತಿಳಿಸಿರುವ ಚಾಂದಪುರದ "ಕಾಲರಾ" ಕ್ಯಾಂಪಿನಲ್ಲಿ "ಕಾಲರಾ ರೋಗಿಗಳ ಸಹಾಯಾರ್ಥವಾಗಿ ಸರಕಾರದ ವೈದ್ಯ (ಮೆಡಿಕಲ್) ಅಧಿಕಾರಿಗಳೊಂದಿಗೆ ಸಹಕಾರದಿಂದ ಕೆಲಸಮಾಡಲು ಹಲವು ರಾಷ್ಟ್ರೀಯ

ಸ್ವಯಂಸೇವಕರನ್ನು ನಾವು ಬಹು ಕಷ್ಟಪಟ್ಟು ಸಂಪಾದಿಸಿದ್ದೆವು. ಆದರೆ ಘಂಟೆಗೊಂದಾವರ್ತಿಯಾದರೂ ಸ್ವಯಂಸೇವಕರು ಬಂದು ಸರಕಾರದ ಅಧಿಕಾರಿಗಳ ಮೇಲೆ ದೂರು ಹೇಳುತ್ತಿದ್ದರು; ಘಂಟೆಗೊಂದು ಬಾರಿಯಾದರೂ ಅಧಿಕಾರಿಗಳು ಬಂದು ಸ್ವಯಂಸೇವಕರನ್ನು ದೂಷಿಸುತ್ತಿದ್ದರು. ಈ ಎರಡು ಪಂಗಡದವರನ್ನು ಒಟ್ಟುಗೂಡಿಸುವದು ಬಲಾತ್ಕಾರದಿಂದ "ಹಳೆಯ ಶೀಸೆಗಳಲ್ಲಿ ಹೊಸ ಮದ್ಯವನ್ನು ಹಾಕು"ವಷ್ಟು ಕಷ್ಟವಾಗಿದ್ದಿತು! ಆ ಶೀಸೆಗಳು ಒಡೆದುಹೋಗುವಂತಾದವು.

ಕೂಡಲೆ ಮಿತ್ರಭೇದವಾಯಿತು. ನಾನು ನೋಡಿದ ಮಟ್ಟಿಗೆ ವಿಶೇಷವಾಗಿ ಸರಕಾರದ ಅಧಿಕಾರಿಗಳೆ ದೂಷಣೆಗೆ ಪಾತ್ರರಾಗಿದ್ದರು! ಅವರ ಮನಸ್ಸು ಮರದಂತೆ ಗಟ್ಟಿಯಾಗಿತ್ತು. ಅವರಾದರೊ ಮಹಾ ದುರಾಗ್ರಹಿಗಳಾಗಿದ್ದರು. ಅವರು ತಮ್ಮ ಅಧಿಕಾರವನ್ನು ಪ್ರಕಾಶಪಡಿಸಲು ಹಟಮಾಡುತ್ತಿದ್ದರೆ ವಿನಾ, ಸೇವೆಯನ್ನು ಮಾಡಲಿಕ್ಕೆ ಸಿದ್ಧರಾಗಿರಲಿಲ್ಲ. ಇನ್ನು ಸ್ವಯಂಸೇವಕರಾದರೊ ಅಸಹನಶೀಲರೂ ಯುವಕರೂ ಉತ್ಸಾಹಿಗಳೂ ಆಗಿದ್ದರು. ಆದರೆ ದೊಡ್ಡ ಪದವಿಯಲ್ಲಿದ್ದ ಮತ್ತೊಬ್ಬ ಗೃಹಸ್ಥರು—ಅಸ್ವಾಮಿನ ಬಿಶಪರು—ಸ್ವಯಂಸೇವಕರ ಮೇಲೆ ಅಧಿಕಾರಭಾವವನ್ನು ತೋರಿಸದೆ, ಸೇವಕ ಭಾವನೆಯಿಂದ ಅವರೊಂದಿಗೆ ಕೆಲಸಮಾಡಲು ಬಂದಾಗ, ಸ್ವಯಂಸೇವಕರು ಬಿಶಪ್‌ರೊಂದಿಗೆ ಕೊನೆಯ ವರೆಗೆ ಬಹು ಸಂತೋಷದಿಂದ ಕೆಲಸಮಾಡಿದರು! ಏಕೆಂದರೆ ಬಿಶಪ್‌ರು ಸೇವಕಭಾವನೆಯಿಂದ ವರ್ತಿಸಿದರಲ್ಲದೆ, ಅಧಿಕಾರಯುಕ್ತನಾದ ಯಜಮಾನನಂತೆ ವರ್ತಿಸಲಿಲ್ಲ. ಏಸುಕ್ರಿಸ್ತನು ಹೇಳಿರುವ "ಜಂತಿಲಾಯರ ರಾಜನು ಅವರ ಮೇಲೆ ಅಧಿಕಾರವನ್ನು ಪ್ರಯೋಗಿಸುತ್ತಿದ್ದನು. ಅಧಿಕಾರ ಬಲವನ್ನುಪಯೋಗಿಸುವವರನ್ನು ಪರೋಪಕಾರಿಗಳೆಂದು ಹೇಳುವರು! ಆದರೆ ನೀವು ಹಾಗೆ ಮಾಡಬೇಡಿರಿ; ನಿಮ್ಮಲ್ಲಿ ಮಹಾಪುರುಷನಿದ್ದರೆ ಆತನು ತಾನು ಎಲ್ಲರಿಂದಲೂ ಚಿಕ್ಕವನೆಂದು ತಿಳಿಯಲಿ; ಮತ್ತು ನಿಮ್ಮಲ್ಲಿ ಧುರೀಣನಾದವನು ತಾನು ಸೇವಕನೆಂದು ಭಾವಿಸಿಕೊಳ್ಳಲಿ" ಎಂಬೀ ವಾಕ್ಯಗಳ ನಿದರ್ಶನವನ್ನು ನಾನು ಅಲ್ಲಿ ಕಂಡೆನು.

ಇದರ ಪರಿಣಾಮವೇನಾಯಿತು ? ಸರಕಾರದ ಅಧಿಕಾರಿಗಳು ಹಿಂದಿರುಗಿ ಹೋದನಂತರ ರಾಷ್ಟ್ರೀಯ ಸ್ವಯಂ ಸೇವಕರೆಲ್ಲರೂ ಚದರಿಬಿಟ್ಟರೊ? ಇಲ್ಲ? ಎಂದಿಗೂ ಇಲ್ಲ? ಆಗ ಮಿತ್ರ ಭಾವವು ಹೆಚ್ಚುತ್ತ ಬಂದಿತು! ಕೆಲಸವೂ ಚೆನ್ನಾಗಿ ನಡೆಯಲಾರಂಭವಾಯಿತು. ಏಕೆಂದರೆ ಆಗ ಮಿತ್ರ ಭೇದಕ್ಕೆ ಎಡೆಯಿರಲಿಲ್ಲ. ಒಬ್ಬ ಸರಕಾರದ ಅಧಿಕಾರಿಯಿಂದಲೆ, ಆತನು ಅಜಾಗರೂಕನಾಗಿದ್ದ ಸಮಯದಲ್ಲಿ, "ಈ ದ್ವಿಮುಖಾಡಳಿತವು ದುಸಾಧ್ಯವಾಗಿದೆ!" ಎಂಬ ಸತ್ಯವನ್ನು ಹೊರಬೀಳಿಸಿದೆನು. ಚಾಂದಪುರದ "ಕಾಲರಾ" ಕ್ಯಾಂಪಿನ ವಿಚಾರದಲ್ಲಿ ಹೊರಬಿದ್ದ ಈ ಸತ್ಯವು, ಇಡೀ ಹಿಂದುಸ್ಥಾನದ ವಿಚಾರದಲ್ಲಿಯೂ ಸತ್ಯವಾಗಿರುವುದು.

ಒಂದು ಉಪಮಾನ.

ಈ ಪತ್ರವನ್ನು ಮುಗಿಯಿಸುವಾಗ ನಿಮಗೊಂದು ಸುಲಭಗ್ರಾಹ್ಯವಾದ ಉಪಮಾನವನ್ನು ಕೊಡುವೆನು. ಒಬ್ಬ ಯುವಕನು ಈಜುವುದಕ್ಕೆ ಕಲಿಯಲಪೇಕ್ಷಿಸುತ್ತಾನೆಂದು ತಿಳಿದುಕೊಳ್ಳಿರಿ. ಪೋಲೀಸಿನಂಥ, ಅಧಿಕಾರವನ್ನು ಪ್ರಕಾಶಪಡಿಸಲಿಚ್ಛಿಸುವ, ಬಾಲಶಿಕ್ಷಕನು ಅವನ ಸೊಂಟವನ್ನು ಗಟ್ಟಿಯಾಗಿ ಹಿಡಿದುಕೊಂಡು, ಅವನನ್ನು ಮುಂದಕ್ಕೆ ಹೋಗಲು ಬಿಡುವುದಿಲ್ಲ. ಯುವಕನಾದರೊ ಕೈಕಾಲುಗಳನ್ನು ಬಡಿಯುತ್ತಲಿರುವನು. ಹೀಗೆ ಸ್ವಲ್ಪ ಸಮಯವು ಕಳೆಯುವುದು. ಕೊನೆಗೆ ಈಜಲು ಉತ್ಸಾಹಿತನಾದ ಯುವಕನು ನಿರುಪಾಯನಾಗಿ "ಅಸಹಕಾರ"ವನ್ನಾಚರಿಸುವನು. ತನ್ನನ್ನು ತಡೆಗಟ್ಟುತ್ತಿದ್ದ ಶಿಕ್ಷಕನಿಂದ ಬಿಡುಗಡೆ ಹೊಂದಿ, ಆಳವಾದ ನೀರಿನೊಳಗೆ ಹಾರುವನು. ನೀರಿನ ಮೇಲೆ ತೇಲುವುದಕ್ಕೆ ತನ್ನ ಕೈಲಾದ ಮಟ್ಟಿಗೆ ಪ್ರಯತ್ನಮಾಡಿ, ಕೈಕಾಲುಗಳನ್ನಾಡಿಸಿ ಈಜಲು ಪ್ರಯತ್ನಿಸುವನು. ಕೊನೆಗೆ ಜಯಶಾಲಿಯಾಗಿ, ಈಜಲಾರಂಭಿಸುತ್ತಾನೆ.

ಸರಕಾರದವರೊಂದಿಗೆ ಈಗ ಭಾರತೀಯರ ಅಸಹಕಾರದ ಸಂಬಂಧವಾಗಿ ನಾನು ನಿಮಗೆ ತೋರಿಸಲಿಚ್ಛಿಸಿದ ಚಿತ್ರವು ಇದರಲ್ಲಿರುವುದು.

ನಾವು ಇಂಗ್ಲೆಂಡಿನಲ್ಲಿ ಇಂಥಾ ಧೈರ್ಯ ಪ್ರಕಾಶಕ ಗುಣವನ್ನು ಹೊಗಳುತ್ತೇವೆ. ಸ್ವಾತಂತ್ರ್ಯವು ನಮ್ಮ ರಕ್ತದಲ್ಲೆಲ್ಲ ಸಂಚರಿಸುತ್ತಿದೆ. ನಮ್ಮ ಮಕ್ಕಳು ಚಿಕ್ಕಂದಿನಿಂದಲೂ ಸ್ವಾವಲಂಬಿಗಳಾಗುವಂತೆಯೂ; ಧೈರ್ಯಶಾಲಿಗಳೂ, ಮನುಷ್ಯತ್ವವುಳ್ಳವರೂ, ಕಷ್ಟಸಹಿಷ್ಣುಗಳೂ ಆಗುವಂತೆಯೂ; ಅವರ ಕೆಲಸವನ್ನು ಅವರೇ ಸ್ವತಂತ್ರವಾಗಿ ಮಾಡಿಕೊಳ್ಳುವಂತೆಯೂ, ನಾವೇ ಪ್ರೋತ್ಸಾಹಿಸುತ್ತೇವೆ. ಆದರೆ ಇಂಗ್ಲಿಷರಾದ ನಾವು, ಹಿಂದುಸ್ಥಾನದಲ್ಲಿರುವಾಗ ಹಿಂದೀಯರಲ್ಲಿ ಅಂಥಾ ಗುಣಗಳನ್ನು ಕಂಡು, ಭಯಪಡುವೆವು! ನಾನು ಹೇಳಿದ ಹಾಗೆ ಒಂದು ಅಪಾಯಕರವಾದ ಮನೋಭಾವನೆಯಿಂದ, ನಾವು ಯಾವಾಗಲೂ 'ರಕ್ಷಕರೆನ್ನಿಸಿಕೊಳ್ಳುವ ಅಪೇಕ್ಷೆ'ಯಿಂದ ಪ್ರತಿಭಾಶಾಲಿಗಳಾದ ಪೋಲೀಸಿನವರಂತೆ ವರ್ತಿಸಲಾರಂಭಿಸಿರುವೆವು. ನಾವು ಕೈಬಿಟ್ಟರೆ ಭಾರತೀಯರು ತಮ್ಮ ಆಡಳಿತಗಳನ್ನು ತಾವು ಸರಿಯಾಗಿ ನೋಡಿಕೊಳ್ಳಲಾರರೆಂದೂ, ಅವರಿಗೋಸ್ಕರ ಅವರ ಎಲ್ಲ ಆಡಳಿತವನ್ನೂ ನಾವೇ ನೋಡಿಕೊಳ್ಳಬೇಕಾಗಿದೆಯೆಂದೂ ನಾವು ದೃಢವಾಗಿ ನಂಬಿದ್ದೇವೆ. ಆದುದರಿಂದಲೇ ಒಂದೆಡೆಯಲ್ಲಿ ಅನುಗ್ರಹದರ್ಪದ ಭಾವವೂ, ಮತ್ತೊಂದೆಡೆಯಲ್ಲಿ ದಾಸಾನುವೃತ್ತಿ ಭಾವವೂ ಬಹುಕಾಲದಿಂದಲೂ ನೆಲೆಗೊಂಡಿವೆ. ದ್ವಿಮುಖಾಡಳಿತದ ಯಾವ ಅಂಗವೂ ಇವುಗಳನ್ನು ಹೋಗಲಾಡಿಸಲಾರದು!

ಆತ್ಮಶುದ್ಧಿ.

ಇನ್ನೊಂದು ಮಾತನ್ನು ಬರೆಯಬೇಕಾಗಿದೆ. ಇಂಗ್ಲೆಂಡಿನಲ್ಲಿರುವ ನೀವು ಇದನ್ನು ನೋಡಿ ಕೋಪಗೊಳ್ಳಬಹುದು. ಏಕೆಂದರೆ ಹಿಂದುಸ್ಥಾನದಲ್ಲಿ ಇಂಗ್ಲೆಂಡಿನ ಪಾರುಪತ್ಯಗಾರಿಕೆಯು ಚೆನ್ನಾಗಿ ನೆರವೇರಿಸಲ್ಪಟ್ಟಿದೆಯೆಂದು ನಿಮ್ಮ ದೃಢವಾದ ನಂಬಿಕೆಯಾಗಿದೆ. ಈ ನಂಬಿಕೆಯನ್ನು ನಾನು ಹೋಗಲಾಡಿಸುವುದಿಲ್ಲ. ಮುಖ್ಯವಾಗಿ ನಿಮ್ಮಾ ತರವಾದ ನಂಬಿಕೆಯೂ ಸ್ವಲ್ಪಮಟ್ಟಿಗೆ ಸರಿಯಾಗಿರಬಹುದೆಂದು ನಾನು ನಂಬಿದ್ದೇನೆ. ಕೆಲವು ವಿಧಾನಗಳಲ್ಲಿ ಬ್ರಿಟಿಷರ ಶಾಸನವು ಜಯಶಾಲಿಯಾಗಿರುವುದು!! ಇಲ್ಲದಿದ್ದರೆ ಅದು ೧೫೦ ವರ್ಷಗಳ ವರೆಗೆ ಬಾಳುತ್ತಿರಲಿಲ್ಲ!

ಆದರೆ ನಾನು ಹೇಳಿದಂತೆ, ಆಂಗ್ಲೋಸ್ಯಾಕ್ಸನರಲ್ಲಿ ಒಂದು ದುಸ್ವಭಾವವಿರುವುದು. ನಾವು ಯಾವ ಫಲಾಪೇಕ್ಷೆಯೂ ಇಲ್ಲದೆ, ಏಕಾಗ್ರ, ಚಿತ್ತರಾಗಿ ಶಾಸನವಮಾಡುತ್ತಿದ್ದಿದ್ದರೆ ನಾವಾಗಿಯೆ ಮಹಾತ್ಮರ ಈ ಚಳವಳಕ್ಕೆ ಬಹು ಸಂತೋಷದಿಂದ ಸ್ವಾಗತವನ್ನೀಯುತ್ತಿದ್ದೆವು. ಅಥವಾ ಈ ಚಳವಳದ ಸ್ವರೂಪವೇ ಬದಲಾಗುತ್ತಿತ್ತು. ಆದರೆ ಇಂಗ್ಲೀಷರ ಸ್ವಭಾವದಲ್ಲಿರುವ ದುಷ್ಟಗುಣವು–ಪ್ರಾಪಂಚಿಕ, ವ್ಯಾಪಾರಿಕ ಮತ್ತು ಲಾಭದಾಯಕ ವಿಷಯಗಳಲ್ಲಿ ಮಗ್ನವಾಗುವ ದುಷ್ಟಸ್ವಭಾವವು—ಮಧ್ಯೆ ಅಡ್ಡ ಬಂದು ನಮಗೆ ಹಣದಾಶೆಯನ್ನು ಹೆಚ್ಚಿಸಿತು! ಆದ್ದರಿಂದ ಈ ಚಳವಳವು ಪ್ರಚಾರಕ್ಕೆ ಬಂದಿತು! ನಮ್ಮ ಆತ್ಮಶುದ್ಧಿಯಿಂದಲೆ ನಾವು ಈ ಚಳವಳವನ್ನು ಸರಿಯಾಗಿ ಧೈರ್ಯದಿಂದ ಎದುರಿಸಬಲ್ಲೆವು! ನಾವು ಹಿಂದೆ ಅನ್ಯಾಯದಿಂದ ಸಂಪಾದಿಸಿದ ಐಶ್ವರ್ಯವನ್ನು ಈಗ ತ್ಯಜಿಸಲು ಸಿದ್ಧರಾಗಿರಬೇಕು! “ದೇವರನ್ನೂ ಧನವನ್ನೂ ಏಕಕಾಲದಲ್ಲಿ ನಾವು ಪೂಜಿಸುವುದನ್ನು ನಿಲ್ಲಿಸಬೇಕು!!”

ಬಡವರನ್ನು ಹೀರಿ ಹಿಂಡುವುದು!

ನಾಲ್ಕನೆಯ ಪತ್ರವು.

ರಾಜನೀತಿಜ್ಞ ವಿರೋಧಿ.

"ಪ್ರಿಯ ಬಂಧು—

ನನ್ನ ಜೀವಮಾನದ ಹೆಚ್ಚಿನ ಭಾಗವು ವಿದ್ಯಾವಿಷಯಕ ಮತ್ತು ಕಾಯಕಷ್ಟ ಜೀವಿಗಳಾದ ಕೂಲಿಗಾರರ ಹಿತವಿಷಯಕ ಸಂಗತಿಗಳಿಗಾಗಿ ಸವೆಯಿಸಲ್ಪಟ್ಟಿದೆ ಎಂದು ತಮಗೆ ಚೆನ್ನಾಗಿ ಗೊತ್ತಿದೆ. ನಾನೆಂದಿಗೂ, ಜನರು ಹೇಳುವ ಆ "ರಾಜನೀತಿಜ್ಞ"ನಾಗಿಲ್ಲ; ಮತ್ತು ನಾನು ಯಾವಾಗಲೂ "ರಾಜನೀತಿ ಶಾಸ್ತ್ರ"ದಲ್ಲಿ ವಿಶೇಷ ವಿಶ್ವಾಸವನ್ನಿಟ್ಟಿಲ್ಲ. ಏಕೆಂದರೆ ಅದು ಯಾವಾಗಲೂ ಸಮಯಾನುಕೂಲವನ್ನನುಸರಿಸಿ ನರಜೀವಿಗಳನ್ನು ತನ್ನ ಠಕ್ಕಿಗೆ ಒಳಗುಮಾಡಿಕೊಳ್ಳುವುದು. ಆದರೆ ನಾವು ಯಾವಾಗಲೂ—ಅದರಲ್ಲಿಯೂ ಮೂರು ಪಾಲು ಯಾಂತ್ರಿಕವೂ ಒಂದು ಪಾಲು ಮಾನುಷವೂ ಆದ ಈಗಿನ ಕಾಲದ ನಾಗರಿಕತೆಯಲ್ಲಿ— ಕೇವಲ ನಮಗೆ ಅಭಿರುಚಿಕರವಾದ ವಿಷಯಗಳಲ್ಲಿ ನಾವು ಮಗ್ನರಾಗಿ "ರಾಜನೀತಿ ಶಾಸ್ತ್ರ"ವನ್ನು ದೂರಮಾಡಿ ಬಿಡಲಾರೆವೆಂಬ ವಿಚಾರವೂ ನನಗೆ ಚೆನ್ನಾಗಿ ಗೊತ್ತಿದೆ! ನಾನು ತಿರಸ್ಕರಿಸುವುದಾವುದೆಂದರೆ,—ರಾಜನೀತಿಜ್ಞರು ಕೇವಲ ತಮ್ಮ ಲಾಭಕ್ಕಾಗಿಯೆ ಬಡವರನ್ನೂ, ನಿರ್ಬಲರನ್ನೂ ನಿರಾಶ್ರಿತರನ್ನೂ ಸುಲಿಗೆಮಾಡುವುದು! ಈಗ ಮಾನವ ಜಾತಿಯನ್ನು ಪ್ರೀತಿಸುವವರೆಲ್ಲರೂ ಒಟ್ಟಾಗಿ ದೃಢ ಸಂಕಲ್ಪದಿಂದ ಈ ಸುಲಿಗೆಗೆ ವಿರೋಧಿಗಳಾಗಿ ನಿಲ್ಲುವ ಸುಸಮಯವು ಬಂದಿದೆಯೆಂದು ನಾನು ತಿಳಿದಿರುವೆನು.

ಗಾಂಧಿಯವರು ರಾಜನೀತಿಜ್ಞರು ಮಾತ್ರವಲ್ಲ.

ಮುಖ್ಯವಾಗಿ ಮಹಾತ್ಮಾಗಾಂಧಿಯವರು ಈ ಪ್ರಪಂಚದವರ ಗಣನೆಗೆ ಬರುವಂಥಾ ರಾಜನೀತಿಜ್ಞರಲ್ಲ. ಆದ್ದರಿಂದಲೆ ಅವರು ಹೂಡಿರುವ ಈ ಚಳವಳದಲ್ಲಿ ನನ್ನ ಶ್ರದ್ಧಾಭಕ್ತಿಯು ವಿಶೇಷವಾಗಿರುವುದು. ರಾಜನೀತಿಜ್ಞರೊಂದಿಗೆ ಒಡನಾಡುವಾಗ ರಾಜಕೀಯ ಲಾಭಕ್ಕಾಗಿ ಮಹಾತ್ಮಾ ಗಾಂಧಿಯವರು ಬಡಜೀವಿಗಳ ಜೀವವನ್ನೆಂದಿಗೂ, ಒಂದು ಕ್ಷಣ ಮಟ್ಟಿಗಾದರೂ ಅಡವಾಗಿಡಲಾರರು. ಅಂತಹ ಸೂಚನೆಯನ್ನೂ ಕೇಳುವುದೂ ಅವರ ಆತ್ಮಕ್ಕೆ ಅಸಹ್ಯಕರವಾಗಿರುವುದು. ಬೇಕಾದರೆ ಅವರು ಬಡವರಿಗೆ ಮತ್ತು ನಿರಾಶ್ರಿತರಿಗೆ ಸಹಾಯಮಾಡುವುದರಲ್ಲಿಯೆ ತಮ್ಮ ಇಡೀ ಜೀವನವನ್ನು ಸವೆಯಿಸಲು ಸಿದ್ಧರಾಗಿರುವರು. ಇವರು ಈ ವಿಚಾರದ ಕಡೆಗೆ ಮನಸ್ಸುಕೊಟ್ಟಷ್ಟು ಇತರ ವಿಚಾರಗಳಿಗೆ ಕೊಡಲಾರರು. ಏಕೆಂದರೆ ಬಡವರೂ ನಿರಾಶ್ರಿತರೂ, ಒಂದು ರೀತಿಯಲ್ಲಿ **ದೇವರ** ಸ್ನೇಹಿತರೂ, **ದೇವರ** ಪ್ರೇಮಕ್ಕೆ ಪಾತ್ರರಾದವರೂ, **ದೇವ**ರಿಂದ ಪ್ರೀತಿಸಲ್ಪಟ್ಟವರೂ ಆಗಿರುವರೆಂದು ಅವರು ಭಾವಿಸಿರುವರು. ದಕ್ಷಿಣಆಫ್ರಿಕದ ಜೋಹಾನೆಸ್ ಬರ್ಗಿನಲ್ಲಿ ಬ್ಯಾರಿಷ್ಟರಾಗಿ ವಿಶೇಷ ಹಣವನ್ನು ಸಂಪಾದಿಸುತ್ತ ಬಡವರಿಗೂ ನಿರಾಶ್ರಿತರಿಗೂ ಯಾವಾಗಲೂ ಸಹಾಯಮಾಡುತ್ತಿರುವಾಗ ಅವರ ಜೀವನಕ್ರಮದಲ್ಲಿ ಒಂದು ವಿಧವಾದ ಬದಲಾವಣೆಯುಂಟಾದಂದಿನಿಂದಲೂ—ಫ್ರಾನ್ಸಿಸ್ಕನ * ರೀತಿಯಲ್ಲಿ ನಿಜ

---

*ಮಹಾತ್ಮಾ ಫ್ರಾನ್ಸಿಸ್ಕನು ಇಟಲಿಯ ದೇಶದಲ್ಲಿ ೧೨ನೆಯ ಶತಮಾನದಲ್ಲಿ ಇದ್ದನು. ಈತನ ಜೀವನಚರಿತ್ರೆಗೂ ನಮ್ಮಲ್ಲಿ ಸುಪ್ರಸಿದ್ಧನಾದ ಮಹಾತ್ಮಾ 'ತುಕಾರಾಮ'ನ ಜೀವನ ಚರಿತ್ರೆಗೂ ವಿಶೇಷ ಹೋಲಿಕೆಯಿರುವುದು. ಕನ್ನಡಿಗರ ಪ್ರೋತ್ಸಾಹ ಬಲದೊರೆತರೆ ಈತನ ಜೀವನ ಚರಿತ್ರೆಯನ್ನು ಶೀಘ್ರದಲ್ಲಿಯೆ ಕನ್ನಡಿಗರಿಗೆ ಸಮರ್ಪಿಸಬೇಕೆಂದಿರುವೆನು. ಈತನು ತನ್ನ ಶಿಷ್ಯಸಂಸ್ಥೆಯೊಂದನ್ನು ಸ್ಥಾಪಿಸಿರುವನು. ಇವರು ಸುಲಭ ಜೀವನಕ್ರಮವನ್ನನುಸರಿಸಿ ಬಡತನವನ್ನು ಕೈಕೊಂಡು, ಮಾನವಸೇವೆ ಮಾಡುವುದೇ ತಮ್ಮ ಕರ್ತವ್ಯವೆಂದು ತಿಳಿದಿರುವರು. — ದ. ಕ. ಭಾರದ್ವಾಜ.

ವಾಗಿ ತಮ್ಮ ಮಹದೈಶ್ವರ್ಯವನ್ನು ತ್ಯಜಿಸಿ ಬಡತನವನ್ನೆ ತನ್ನ ಆತ್ಮ ಬಂಧುವಾಗಿ ಸ್ವೀಕರಿಸಿದಂದಿನಿಂದಲೂ—ಅವರು (ಮಹಾತ್ಮರು) ಬಡವರ ಪಕ್ಷವನ್ನು ವಹಿಸಿ, ಅವರೊಟ್ಟಿಗೆ ಬಡವರಂತೆಯೆ ವಾದಿಸುತ್ತ, ಅವರ ಕಷ್ಟದಲ್ಲಿ ಸಹಭಾಗಿಗಳಾಗಿಯೂ, ಅವರಿಗೆ ಸಾಹಾಯ್ಯಮಾಡುವುದರಲ್ಲಿ ಎಷ್ಟು ಸಂಕಷ್ಟಗಳು ಬಂದರೂ ಗಣಿಸದೆಯೂ ಇರುವರು. ಈ ರೀತಿ ಯಾದ ಜೀವನಕ್ರಮದಿಂದ ಅವರು ಬಡತನದ ಎಲ್ಲ ವಿಧವಾದ ಸ್ವರೂಪ ವನ್ನೂ ತಿಳಿದಿರುವುದೇ ಬಡವರ ಉದ್ಧಾರ ವಿಚಾರದಲ್ಲಿ ಅವರು ವಿಶೇಷ ಉತ್ಸಾಹಿತರಾಗುವುದಕ್ಕೆ ಕಾರಣವಾಗಿರುವುದು. ಬಡವರ ಸಂಬಂಧ ವಾದ ಎಲ್ಲ ವಿಧವಾದ ಕುತರ್ಕ ಮತ್ತು ಆಚಾರಗಳ ವಿಷಯದಲ್ಲಿ ಅವರಿಗೆ ಸ್ವಂತ ಅನುಭವವಿರುವುದರಿಂದ, ಅವರೊಬ್ಬ ಅಪೂರ್ವ ಪುರುಷ ರಾಗಿರುವರು. ಇಂಗ್ಲಿಷ್ ಸಾಹಿತ್ಯದಲ್ಲಿ ಇತರ ಪುಸ್ತಕಗಳಿಗಿಂತಲೂ ಥೋರೂ, ಟಾಲ್ಸ್ಟಾಯ್, ರಸ್ಕಿನ್, ಎಡ್ವರ್ಡ್ ಕಾರ್ಪೆಂಟರ್ ಮೊದಲಾದಂಥವರ † ಗ್ರಂಥಗಳಿಂದ ಅವರ ಮನಸ್ಸಿನ ಮೇಲೆ ಅಗಾಧ ವಾದ ಪರಿಣಾಮವುಂಟಾಗಿದೆ. ಆದರೆ ಕ್ರಿಸ್ತನ "ಸಿನಾಯ್ ಗುಡ್ಡೆಯ ಮೇಲಣ ಬೋಧನೆ" (Sermon on the mount) ಯಿಂದ ಅವರ ಮನಸ್ಸಿನ ಮೇಲೆ ಬಹು ಮಹತ್ವದ ಪರಿಣಾಮವಾಗಿರುವುದೆಂದು ಹೇಳಬಹುದು. ಈ ಬೋಧನೆಗಳನ್ನೆ ತಮ್ಮ ಜೀವನ ಕ್ರಮದಲ್ಲಿ ಅವರು ಸಾಧಿಸುತ್ತಿರುವರೆಂದರೆ ಅತ್ಯುಕ್ತಿಯಾಗಲಾರದು. ಅವರು ಚಿಕ್ಕಂದಿನಲ್ಲಿ ಕಲಿತಿರುವ ಮತ್ತು ಚೆನ್ನಾಗಿ ಪರಿಶೋಧಿಸಿರುವ ಪೂರ್ವ ದೇಶದ ಪವಿತ್ರ ಗ್ರಂಥಗಳಾದ ಜೈನ, ಬೌದ್ಧ ಮತ್ತು ವೈಷ್ಣವ ಹಿಂದೂ ಧರ್ಮಗಳ ಅತ್ಯಂತ ಉದಾತ್ತ ಧ್ಯೇಯಗಳಿಗೂ "ಸೀನಾಯ್ ಗುಡ್ಡದ

---

†ಮಹಾತ್ಮರು ಇತರರಿಗೂ ಓದುವಂತೆ ಬೋಧಿಸಿರುವ ಇಂಗ್ಲೀಷ ಪುಸ್ತಕಗಳ ಪಟ್ಟಿಯನ್ನು ನನ್ನಿಂದ ಭಾಷಾಂತರಿಸಲ್ಪಟ್ಟಿರುವ ಮಹಾತ್ಮರ "ಹಿಂದೀಸ್ವರಾಜ್ಯ"ವೆಂಬ ಗ್ರಂಥದ ೧೦೫ನೆಯ ಪುಟದಲ್ಲಿ ಕೊಟ್ಟಿರುವೆನು. ಬೇಕಾದವರು ಅದನ್ನು ನೋಡ ಬಹುದು—ದ. ಕ. ಭಾರದ್ವಾಜ.

ಬೋಧನೆಗೂ ವಿಶೇಷ ಹೋಲಿಕೆಯಿರುವುದನ್ನು ಅವರು ಕಂಡುಹಿಡಿದಿರುವರು. ಫ್ರಾನ್ಸ್ ದೇಶದ ವಿಪ್ಲವವಾಗುವುದಕ್ಕೆ ಮೊದಲು ಬಾಳಿದ "ರೂಸೊ" § ವಿನಲ್ಲಿಯೂ ಅಷ್ಟು ಅಧಿಕಾಂಶದಲ್ಲಿ ತೋರಿ ಬರದಿರುವಷ್ಟು ವಿಶೇಷಾಂಶದ ನೈತಿಕ ಬಲದಿಂದ ಅವರ ಈಗಿನ ನಾಗರಿಕತೆಯ ಕ್ರೂರ ಜೀವನದಿಂದ ಸರಳವಾದ ನೈಸರ್ಗಿಕ ಜೀವನದ ಕಡೆಗೆ ತಿರುಗಿರುವರು. ಹಿಂದುಸ್ಥಾನದಲ್ಲಿ ಪೂರ್ವಕಾಲದಲ್ಲಿ ಪರಿಶುದ್ಧಾತ್ಮ ಭಾವದಿಂದ ದೇವರನ್ನು ಕಂಡ ಪ್ರಾಚೀನ ಭಾರತೀಯರ ಚರಿತ್ರೆಯ ಕಾಲವೇ ಮಾನವ ಚರಿತ್ರೆಯಲ್ಲಿ ಮುಖ್ಯವಾದ ಕಾಲವೆಂದು ಅವರು ತಿಳಿದಿರುವರು. ಆಗ ಭಾರತೀಯರು ಕಾಡಿನಲ್ಲಿ ತಂತಮ್ಮ ಆಶ್ರಮಗಳಲ್ಲಿ ಸುಲಭ ಜೀವನ ಕ್ರಮವನ್ನನುಸರಿಸಿ, ಪ್ರಶಾಂತಭಾವದಿಂದ ವಾಸಿಸುತ್ತಿದ್ದರು. ಆದ್ದರಿಂದ ಅವರು ನಿರ್ಮಲವಾಗಿಯೂ, ನಿರೋಗಿಗಳಾಗಿಯೂ, ದಯಾಮಯರಾಗಿಯೂ ಇದ್ದರು. "ಈಗಿನ ನಾಗರಿಕತೆಯು ಸುಲಭ ಜೀವನಕ್ಕನುಸರಿಸಿಯಾಗಲಿ, ಪ್ರಶಾಂತ ಭಾವಕ್ಕನುಕೂಲವಾಗಿಯಾಗಲಿ ಇಲ್ಲ. ಅವರ ಹೃದಯವು ಪರಿಶುದ್ಧವಾಗಿಯೂ ಇಲ್ಲ. ಆದ್ದರಿಂದಲೆ ಮನುಷ್ಯನು ಈಗಿನ ಕಾಲದಲ್ಲಿ ದೇವರನ್ನು ಕಾಣಲಾರನು. ಆದುದರಿಂದ ನಾವು ದೇವರನ್ನು ಕಾಣಬೇಕಾಗಿದ್ದರೆ, ಸಾಧ್ಯವಿದ್ದ ಮಟ್ಟಿಗೆ ಈಗಿನ ನಾಗರಿಕತೆಯಿಂದ ದೂರರಾಗಿ, ಸುಲಭವಾದ ನೈಸರ್ಗಿಕ ಜೀವನದ ಕಡೆಗೆ ತಿರುಗಬೇಕು. ಮತ್ತೆ ನಮ್ಮ ಜೀವನ ಕ್ರಮದಲ್ಲಿ ಸರಳತೆಯನ್ನೂ ಪ್ರಶಾಂತಭಾವವನ್ನೂ ಪ್ರೇರಿಸಲೆತ್ನಿಸಬೇಕು. ನಮ್ಮ ಹೃದಯವನ್ನು ನಿರ್ಮಲವಾಗಿಡಬೇಕು.

---

§ಈತನು ಫ್ರಾನ್ಸ್‌ದೇಶದಲ್ಲಿ (೧೭೧೨—೧೭೭೮) ಬಾಳಿದನು. ಇತನ ಜನ್ಮಸ್ಥಳವು ಜನೀವಾ ಪಟ್ಟಣವು. ಈತನು ಬಾಲ್ಯದೆಶೆಯಲ್ಲಿಯೂ ಯೌವನಾವಸ್ಥೆಯಲ್ಲಿಯೂ ಬಹು ಸಂಕಷ್ಟಗಳಿಗೊಳಗಾಗಿದ್ದನು. ಸನ್ ೧೭೪೫ರಲ್ಲಿ ಪ್ಯಾರಿಸ್‌ನಗರಕ್ಕೆ ಬಂದು ಬಹು ಶ್ರದ್ಧೆಯಿಂದ ಸಾಮಾಜಿಕ ಪ್ರಶ್ನೆಗಳ ವಿಚಾರವಾಗಿ ಅಧ್ಯಯನ ಮಾಡುತ್ತ, ಸನ್ ೧೭೬೧ರಲ್ಲಿ *Joulie on la Nouvelle Heloise* ಎಂಬ ತನ್ನ ಕಾದಂಬರಿಯೊಂದನ್ನು ಪ್ರಕಟಿಸಿದನು. ಸನ್ ೧೭೬೨ರಲ್ಲಿ "*Emile*" ಎಂಬ ಗ್ರಂಥವನ್ನು ಹೊರಗೆಡಹಿದನು. ಈ ಎರಡು ಗ್ರಂಥಗಳಲ್ಲಿ ಆಗಿನ ಕಾಲದ ಫ್ರಾನ್ಸಿನಲ್ಲಿದ್ದ ಆಚಾರವ್ಯವಹಾರಗಳು ಚೆನ್ನಾಗಿ ಖಂಡಿಸಲ್ಪಟ್ಟದ್ದರಿಂದ ಜನರ ಭಾವನಾಪ್ರಪಂಚದಲ್ಲಿ ಒಂದು ವಿಧವಾದ ಕ್ರಾಂತಿಯುಂಟಾಯಿತು. ಮುಂದೆ ಅದು ಫ್ರಾಂಸಿನ ರಾಜ್ಯವಿಪ್ಲವದಲ್ಲಿ ಕೊನೆಗೊಂಡಿತು.

ಇನ್ನು ಮುಂದೆ ದೇವರನ್ನೂ ಧನವನ್ನೂ ಏಕಕಾಲದಲ್ಲಿ ಪೂಜಿಸಲೆತ್ನಿಸ ಬಾರದು,'' ಎಂದು ಮಹಾತ್ಮಾ ಗಾಂಧಿಯವರು ಹೇಳುವರು.

ಪೂರ್ವದೇಶದ ಸಾಕ್ರೆತಿಸನು.

ನಾನು ಅವರ (ಮಹಾತ್ಮರ) ಅಭಿಪ್ರಾಯಗಳಲ್ಲಿ ಕೆಲವನ್ನು ನನಗೆ ತಿಳಿದ ಮಟ್ಟಿಗೆ ಸುಲಭವಾದ ರೀತಿಯಲ್ಲಿ ಇಲ್ಲಿ ಬರೆಯಲೆತ್ನಿಸಿರುವೆನು. ನನ್ನ ಜೀವನ ಕ್ರಮದ ಮಾರ್ಪಾಟಿಗೆ ಮೂಲಕಾರಣವಾದ, ಅವರ ಸಾನಿಧ್ಯ ಪ್ರಭಾವದಿಂದೊಡಗೂಡಿದ, ಅವರ ಬೋಧನಾಶಕ್ತಿಯನ್ನು ನಾನು ಶಬ್ದಗಳಿಂದ ಬಣ್ಣಿಸಲಾರೆನು. ಅವರ ಬೋಧನೆಗಳಿಂದ ನನ್ನ ಮನಸ್ಸಿಗೆ ಯಾವಾಗಲೂ ಆಶ್ಚರ್ಯವುಂಟಾಗುವುದು; ಕೆಲವು ವೇಳೆ ನನ್ನ ಮನಸ್ಸು ಅವುಗಳನ್ನು ವಿರೋಧಿಸುವುದು. ಪ್ರತಿಯೊಂದು ಬಾರಿಗೂ ಅವರ ಬೋಧನೆಗಳು ಅದಕ್ಕೆ (ಮನಸ್ಸಿಗೆ) ಬಲವಾದ ಪೆಟ್ಟನ್ನು ಕೊಡುವವು. ಅವುಗಳೆದುರಿನಲ್ಲಿ ನನ್ನ ಆಚಾರ, ಪದ್ಧತಿ ವಿಚಾರವಾದ ಭಾವನೆಗಳು ಪುಡಿಪುಡಿಯಾಗುವವು. ಆದರೆ ಹಾಗಾಗುವಾಗ ಒಂದು ವಿಧವಾದ ನಿಷ್ಕಳಂಕವಾದ ಸಂತೋಷವುಂಟಾಗುವುದು. ಮೊದಲು — ಆತ್ಮ ಮತ್ತು ಮನಸ್ಸಿನ ಹೋರಾಟದಿಂದಾಗುವ ಸಂತೋಷ! ಆ ಮೇಲೆ ಮನಸ್ಸು ಆತ್ಮನ ವಶವಾಗಿ, ತನ್ನ ತಪ್ಪನ್ನು ತಿಳಿದುಕೊಳ್ಳುವಾಗ ಆಗುವ ಸಂತೋಷ! ಇವುಗಳನ್ನು ವರ್ಣಿಸಲಾರೆನು. ಸಾಕ್ರೆತಿಸ್‌ನ* ಬಳಿಗೆ ಆಗಿಂದಾಗ್ಗೆ

---

*ಈತನು ಕ್ರಿಸ್ತ ಪೂರ್ವ ೪೬೯ರಿಂದ ೩೯೯ರ ವರೆಗೆ ಗ್ರೀಸಿನಲ್ಲಿ ಬಾಳಿದ ಸುಪ್ರಸಿದ್ಧ ತತ್ವಜ್ಞನು. ಈತನು ಒಬ್ಬ ಶಿಲ್ಪಿಕಾರನ ಮಗನಾಗಿದ್ದುದರಿಂದ ತಂದೆಯ ವೃತ್ತಿಯನ್ನೆ ಕೆಲವು ಕಾಲ ಅನುಸರಿಸಿದನು. ಆದರೆ ಯಶಸ್ಸಿನ ಅತ್ಯುತ್ತರದ ಬಲದಿಂದ ಸೈನಿಕನಾಗಿ ಪೊಲಿಡಲಿಯುವ್ ಮುಂತಾದ ಗ್ರೀಕಯುದ್ಧಗಳಲ್ಲಿ ಚೆನ್ನಾಗಿ ಹೋರಾಡಿ, ತನ್ನ ಸಾಮರ್ಥ್ಯವನ್ನು ಪ್ರಕಾಶಪಡಿಸಿದನು. ಆನಂತರ ಅಥೆನ್ಸ್ ಪಟ್ಟಣದಲ್ಲಿ ವಾಸಮಾಡುತ್ತ, ಸುಲಭವಾದ ನೈತಿಕ ಜೀವನ ಕ್ರಮಗಳನ್ನೂ, ಆಧ್ಯಾತ್ಮಿಕ ವಿಚಾರಗಳನ್ನೂ ಕುರಿತು ಜನರಿಗೆ ಬೋಧಿಸಲಾರಂಭಿಸಿದನು. ಮುಂದೆ ಸ್ವಲ್ಪ ಕಾಲದಲ್ಲಿಯೆ ಈ ಬೋಧನೆಗಳು ಅಕ್ರಮವಾದವುಗಳೆಂದು ಅನಿಟಸ್‌ನು ಆತನಿಗೆ ಮರಣ ದಂಡನೆಯನ್ನು ವಿಧಿಸಿದನು. ಈತನು ಸಂತೋಷದಿಂದ ಅಧಿಕಾರಿಗಳಿಂದ ಕೊಡಲ್ಪಟ್ಟ ವಿಷವನ್ನು ಕುಡಿದು ಪರಲೋಕಕ್ಕೆ ತೆರಳಿದನು! — ದ. ಕ. ಭಾ.

ಹೋಗುತಿದ್ದ ಯುವಕ ಕುತರ್ಕವಾದಿಗಳ ವಿಷಯವೂ, ಸಾಕ್ರೆತಿಸನು ಹೇಗೆ ದಯಾಭಾವದಿಂದ ಕೇವಲ ತೀಕ್ಷ್ಣ ಪ್ರಶ್ನೆಗಳಿಂದಲೆ ವಾದದಲ್ಲಿ ಅವರನ್ನು ಕೆಳಕ್ಕೆ ಉರುಳಿಸಿ ಬಿಡುತ್ತಿದ್ದನೆಂಬ ಸಂಗತಿಯೂ, ಮತ್ತೆ ಹೇಗೆ ಆತನು ಅವರನ್ನು ಮೇಲಕ್ಕೆಬ್ಬಿಸಿ ಅವರ ತಪ್ಪುಗಳನ್ನು ತೋರಿಸಿ ತಿದ್ದುತ್ತಿದ್ದನೆಂಬ ವಿಷಯವೂ ನಿಮ್ಮ ಜ್ಞಾಪಕದಲ್ಲಿರುವವೊ? ಅನೇಕ ವೇಳೆ ನಾನೂ ಅವರಲ್ಲೊಬ್ಬನಂತಾಗುವೆನು! ಆಗ ಫಕ್ಕನೆ ಪೂರ್ವ ದೇಶದ **ನಮ್ಮೊ ಸಾಕ್ರೆತಿಸರಿಂದ** ಒಂದು ಪ್ರಶ್ನೆಯು ಬರುವುದು!— ಆಗ ನಿರ್ಬಲವಾದ ನನ್ನ ಶುಷ್ಕವಾದಗಳ ಭಾವನೆಯು ಚದರಿ ಹೋಗುವುದು! ಮತ್ತೆ, ಇವರೀ ಅದ್ಭುತಪ್ರಭಾವದ ವಿಚಾರವಾಗಿ ಆಲೋಚನೆ ಮಾಡುವಾಗ,—ನಾನು ಈಗ ಪೂರ್ಣ ಪೂಜ್ಯಭಾವದಿಂದ ಹೇಳುವೆನು, ಕೇಳಿರಿ!—ನನ್ನ ಮನಸ್ಸು ಸಾಕ್ರೆತಿಸನನ್ನೂ ದಾಟಿಹೋಗುವುದು; ಅದು **ಏಸುಕ್ರಿಸ್ತ**ನ ಭಾವನೆಗಳನ್ನು ನನ್ನ ಮುಂದಿಡುವುದು!!

ಈಗ ನಿನ್ನೆ ತಾನೆ ನಡದಂತಿರುವ ಒಂದು ಸಂಗತಿಯನ್ನು ಉದಾಹರಣೆಗಾಗಿ ಹೇಳುವೆನು. ದಕ್ಷಿಣ ಆಫ್ರಿಕದ ಪ್ರಿಟೋರಿಯಾದಿಂದ ಒಂದು ದೂರವಾದ ಸ್ಥಳಕ್ಕೆ ಮಹಾತ್ಮರೂ ನಾನೂ ನಡೆದುಕೊಂಡು ಹೋಗಿದ್ದೆವು. ಅಲ್ಲಿನ ಮುನಿಸಿಪಾಲಿಟಿಯವರು ಭಾರತೀಯರ ವಾಸಕ್ಕಾಗಿ "ಕಾಫಿರ್ ನಿವಾಸಸ್ಥಾನ" ವೊಂದನ್ನು ಸ್ಥಾಪಿಸಿದ್ದರು. ಅಲ್ಲಿಂದ ನಾವು ಹಿಂದಿರುಗಿ ಬರುವಾಗ, ದಾರಿಯಲ್ಲಿ ಒಂದು ನೀರಿನ ಝರಿಯ ಪಕ್ಕದಲ್ಲಿದ್ದ ಮರದ ನೆರಳಿನಲ್ಲಿ ನಾವಿಬ್ಬರೂ ಕುಳಿತುಕೊಂಡೆವು. ಆಗ ನಾವು ಅನೇಕ ವಿಷಯಗಳನ್ನು ಚರ್ಚಿಸಿದೆವು. ಆಗ್ಗೆ ಸ್ವಲ್ಪ ಮುಂಚಿನಿಂದ ನಾನು **"ಸಸ್ಯಾಹಾರ"** ಕ್ರಮವನ್ನೆ ಸ್ವೀಕರಿಸಿದ್ದೆನು. ನಾನು ಹಾಗೆ ಮಾಡಿದ್ದು ಇತರರ ಮನಸ್ಸನ್ನು ನೋಯಿಸಬಾರದೆಂಬ ಭಾವನೆಯಿಂದಲೆ ವಿನಾ, ಮನಸ್ಸಿಗೆ ಅದು ಸಮಾಧಾನಕರವಾಗಿತ್ತೆಂದಲ್ಲ. ಒಂದೊಂದೇ ವಿಷಯವನ್ನು ಚರ್ಚಿಸುತ್ತ, ಕೊನೆಗೆ **"ಮಾಂಸಾಹಾರದ"** ವಿಷಯವೂ ಬಂದಿತು. ಆಗ ನಾನು, "ಕೀಳುತರವಾದ ಜೀವನವು ತನಗಿಂತಲೂ ಶ್ರೇಷ್ಠತರವಾದ

ಜೀವಕ್ಕೆ ಬಲಿಬೀಳುವುದು ಪ್ರಕೃತಿಯ ನಿಯಮವಾಗಿದೆ; ಹೀಗಿರುವಾಗ ಕೀಳುತರಗತಿಯ ಪ್ರಾಣಿಗಳನ್ನು ಮನುಷ್ಯರು ತಮ್ಮ ಆಹಾರಕ್ಕಾಗಿ ಉಪಯೋಗಿಸುವುದು ನ್ಯಾಯವಾಗಿದೆ," ಎಂದು ಒಂದು ಮೂರ್ಖ ವಾದವನ್ನು ಮಾಡಿದೆನು. ಆಃ! ಆಗ ಮಹಾತ್ಮರ ಮುಖಮಂಡಲ ವನ್ನು ನೋಡಬೇಕಾಗಿತ್ತು!! ತಕ್ಷಣದಲ್ಲಿಯೆ ಅವರ ಕಣ್ಣುಗಳು ಕೆಂಪಾಗಿ ಕಿಡಿಯನ್ನು ಕಾರುವಂತಾದವು! ಆದರೂ ಆಗ ಅವರು ಎಂದಿನಂತೆ ಶಾಂತವಾದ, ತಮ್ಮ ಹತೋಟಿಯನ್ನು ಮೀರದ ಧ್ವನಿಯಿಂದ ಹೇಳಿದರು, — "ನೀವು ಕ್ರೈಸ್ತಧರ್ಮಾವಲಂಬಿಗಳಾಗಿರುವಿರಿ; ಆದರೂ ಇಂಥಾ ಕುತರ್ಕವನ್ನು ಮಾಡುತ್ತೀರಲ್ಲ! ಏಸುಕ್ರಿಸ್ತನು ದೇವಾಂಶ ಪುರುಷನೆಂದೂ, ಮತ್ತು ಆತನು ದೇವಾಂಶ ಪುರುಷನಾದ್ದರಿಂದಲೆ ಮನುಷ್ಯನಂಥಾ ಪಾಪಿಯಾದ ಪ್ರಾಣಿಗೋಸ್ಕರ ತನ್ನ ಪ್ರಾಣವನ್ನರ್ಪಿಸಿದ ನೆಂದೂ, ಪವಿತ್ರವಾದ ನಿಮ್ಮ ಬೈಬಲು ನಿಮಗೆ ಬೋಧಿಸಿರುವುದೆಂದು ನಾನು ಭಾವಿಸಿದ್ದೇನೆ. ಆ ಬೋಧನೆಯ ಅರ್ಥವು ನನಗೆ ಚೆನ್ನಾಗಿ ಗೊತ್ತಾ ಗಿದೆ; ಆದರೆ ಈಗ ನೀವು ಹೇಳಿದ ಮಾತಿನ ಅರ್ಥವೆ ನನಗೆ ಗೊತ್ತಾಗು ವುದಿಲ್ಲ. ಒಂದು ಸಣ್ಣ ಹುಳುವಿನ ಜೀವವನ್ನುಳಿಸುವುದಕ್ಕೋಸ್ಕರ ಇಡೀ ಜಗತ್ತೆ ಸಮರ್ಪಿತವಾಗಲು ಸಿದ್ಧವಾಗಿರುವುದೆಂಬ ಕಲ್ಪನೆಯೆ ನನಗೆ ವಿಶೇಷ ಸಂತೋಷವನ್ನುಂಟುಮಾಡುವುದು. ಹಾಗಾಗುವುದು ಎಂಥಾ ಮನೋಹರವಾದ ವಿಷಯ! ಆದರೆ ನಿಮ್ಮ ವಾದವು ಲೇಶಮಾತ್ರವಾದರೂ ಮನೋರಂಜಕವಾಗಿಲ್ಲ. ಹಿಂದೂವಾದವನಾರೂ ಇಂಥಾ ತರ್ಕವನ್ನು ಉಪಯೋಗಿಸಲಾರನು. ಇಡೀ ಜೈನ ಧರ್ಮವು ಈ ವಾದಕ್ಕೆ ವಿರುದ್ಧ ವಾಗಿರುವುದು. ಬೌದ್ಧಮತವು ಅದನ್ನು ಸಂಪೂರ್ಣವಾಗಿ ನಿರಾಕರಿಸು ವುದು. ಮತ್ತೆ ಈ ವಾದವು ಕ್ರೈಸ್ತ ಧರ್ಮೀಯವಾಗಿಯೂ ಇಲ್ಲವಲ್ಲ!"

ವಿರೋಧ ಭಾವನೆ.

ವಾದಸಮಯದಲ್ಲಿ ಕೇವಲ ಅವರ ತೀವ್ರ ಮತ್ತು ಆಕಸ್ಮಾತ್ತಾಗಿ ಆಶ್ಚರ್ಯವನ್ನು ತಾಳುವ ಭಾವನೆಗಳನ್ನು ನಿದರ್ಶಿಸುವುದಕ್ಕಾಗಿ ಮಾತ್ರ

ಮೇಲಿನ ಉದಾಹರಣೆಯನ್ನು ಕೊಟ್ಟಿಲ್ಲ. ಈ ಉದಾಹರಣೆಯಲ್ಲಿ ಬಡಜೀವಿಗಳ ವಿಚಾರವಾಗಿ ಹೇಳುವ ಅವರ ಮೂಲ ಬೋಧನೆಗಳೂ ಅಡಗಿವೆ. ಇದಕ್ಕೆ ವಿರೋಧವಾಗಿ, ಕಲಕತ್ತೆಯಲ್ಲಿ ಇತ್ತೀಚೆಗೆ ನೆರೆದಿದ್ದೊಂದು ಮಹಾಸಭೆಯಲ್ಲಿ ಕೆಲವು ಉತ್ಸಾಹಿಗಳಾದ ನೇಶನಲಿಸ್ಟರು, ನನ್ನ ಎರಡನೆ ಪತ್ರದಲ್ಲಿ ಹೇಳಿರುವ "ಚಾಂದಪುರದ 'ಕಾಲರಾ' ಕ್ಯಾಂಪಿನಲ್ಲಿದ್ದ ಕೆಲವು ಸಾವಿರ ನಿರಾಶ್ರಿತರು ಕಷ್ಟದಲ್ಲಿ ನರಳುವಾಗ, ಅಧಿಕಾರಿಗಳಿಗೆ ಪಾಠವನ್ನು ಕಲಿಸಲು, "ರೈಲ್ವೆ ಮತ್ತು ಸ್ಟೀಮ್‌ಶಿಪ್" ಕಂಪೆನಿಗಳ ಎಲ್ಲ ನೌಕರರು ಏಕಕಾಲದಲ್ಲಿ ಮುಷ್ಕರ ಹಿಡಿಯುವಂತೆ (ಸ್ಟ್ರೈಕ್ ಮಾಡುವಂತೆ) ಮಾಡುವುದು ಸಾಧ್ಯವಾಗಿದ್ದರೆ, ಆ ಬಡ ಜನರ ಉದ್ಧಾರಕ್ಕಾಗಿ ಆ ಸ್ಟ್ರೈಕನ್ನು ನಿಲ್ಲಿಸುವಂತೆ ಬೋಧಿಸುವುದು ಅನ್ಯಾಯ"ವೆಂದು ವಾದಿಸಿದರು. ಕೆಲವು ಸಾವಿರ ಕೂಲಿ ಜನರ ಜೀವದಾನದಿಂದ ಹಿಂದುಸ್ಥಾನದ ೩೨ ಕೋಟಿ ಜನರಿಗೆ ಸ್ವರಾಜ್ಯವು ಲಭಿಸುವಂತಿದ್ದರೆ, ಹಾಗೆ ಮಾಡಬಹುದೆಂದು ಅವರ ಅಭಿಪ್ರಾಯವಿದ್ದಂತೆ ತೋರಿತು! ಪ್ರಿಟೋರಿಯಾದ ಹೊರಗೆ ಮಹಾತ್ಮಾ ಗಾಂಧಿಯವರ ವಾದವು ಆಗ ಜ್ಞಾಪಕಕ್ಕೆ ಬಂದಿತು. ಆಗ ನಾನು ಆ ಕಥೆಯನ್ನು ಹೇಳಿ, "ಎಂದಿನ ವರೆಗೆ ಕೆಲವು ಸಾವಿರ ಬಡಜನರನ್ನುದ್ಧರಿಸುವುದರಲ್ಲಿ ಇಡೀ ಹಿಂದುಸ್ಥಾನವು ತನ್ನ ಆತ್ಮವನ್ನು ಸಮರ್ಪಿಸಲು ಸಿದ್ಧವಾಗಿರುವುದೊ ಅಂದಿನ ವರೆಗೆ ಹಿಂದುಸ್ಥಾನದಾ ಕಾರ್ಯಕ್ಕೆ ಯಶಸ್ಸು ಬರುವುದು. ಆದರೆ ಈ ಉಪದೇಶಕ್ಕೆ ವಿರೋಧವಾಗಿ ನಾವು ವರ್ತಿಸಿದರೆ ಆಗ ಮಹಾತ್ಮಾ ಗಾಂಧಿಯವರ ಆತ್ಮಬಲದ ಧರ್ಮಧ್ವಜವು ಹಿಂದೆಯೆ ಉಳಿದು ನಮ್ಮ ಕಾರ್ಯಕ್ಕೆ ಯಶಸ್ಸುಂಟಾಗಲು ಎಡೆಯಿಲ್ಲದಂತಾಗುವುದು," ಎಂದೆನು. ಸಭಿಕರು ಕೂಡಲೆ ಈ ಧ್ಯೇಯವನ್ನು ಸ್ವೀಕರಿಸಿದರು! ಇದರ ಶಕ್ತಿಯನ್ನು ಅವರು ಎದುರಿಸಲಾಗಲಿಲ್ಲ!!

ಭಯಂಕರವಾದ ಆಪಾದನೆ.

ಇದು ನನ್ನ ದೀರ್ಘಪತ್ರಗಳ ಕೊನೆಯ ವಿಷಯವಾಗಿದೆ. ಈಗ ಹಿಂದುಸ್ಥಾನದಲ್ಲಿ ಅಹಕಾರ ಚಳವಳವು ಈಗಿನ ಸರಕಾರ ಆಡಳಿತದ

ಮೇಲೆ ಹೊರಿಸುವ ಮುಖ್ಯವಾದ ಆಪಾದನೆ (ತಪ್ಪು) ಯೇನಂದರೆ,—ಈ ಆಡಳಿತವು ಬಡವರನ್ನು ವಿಶೇಷ ಕ್ರೂರತನದಿಂದ ಹೀರಿ ಹಿಂಡುತ್ತಿದೆ. ಅದು ಬಡವರನ್ನು ಬಡಿದು ತಿನ್ನುತ್ತಿದೆ! ಅದು ಬಡವರನ್ನು ವಿಶೇಷವಾಗಿ ಪೀಡಿಸುತ್ತಿದೆ! ಅದರ ಕ್ರೂರಶಾಸನದ ಭಾರವು ದಿನದಿನಕ್ಕೂ ಹೆಚ್ಚುತ್ತಿದೆ! ಈಗಿನ ಸ್ಥಿತಿಯಲ್ಲಿ ಅದು ಅದರ ಸ್ವರೂಪದಲ್ಲಿ ಯಾವ ಮಾರ್ಪಾಟನ್ನೂ ತರಲಾಗದಷ್ಟು ಕಠಿಣಾತ್ಮಕವಾಗಿಯೂ, ಗಟ್ಟಿಯಾಗಿಯೂ, ದುರ್ಭೇದ್ಯವಾಗಿಯೂ ಇರುವುದು!

ಹಿಂದುಸ್ಥಾನದ ಸರಕಾರವನ್ನು "ದೀನರಕ್ಷಕ"ವೆಂದು ಕರೆಯುತ್ತಿದ್ದ ಒಂದು ಕಾಲವಿತ್ತು! ಕೈಸರ್-ಇ-ಹಿಂದ್, ಅಥವಾ ಮತ್ತಾವುದಾದರೂ ಅಂಥ ಆಡಂಬರ ಪ್ರಕಾಶವಾದ ಬಿರುದಿಗಿಂತಲೂ ಈ ಬಿರುದು ಅದಕ್ಕೆ ಘನವಾಗಿ ಒಪ್ಪುತಿತ್ತು. ಆದರೆ ಎಲ್ಲಕ್ಕಿಂತಲೂ ಘನವಾದ ಈ ಬಿರುದನ್ನು ಅದು ಕಳೆದುಕೊಂಡಿದೆ! ಇದರ ಕ್ರೂರಶಾಸನಕ್ಕೆ ಬಲಿ ಬಿದ್ದಿರುವ ಬಡವರು ಎಲ್ಲೆಲ್ಲಿಯೂ ಗೋಳಾಡುತ್ತಿರುವರು!!

ಒಂದು ಉದಾಹರಣೆ.

ಮೇಲೆ ಹೇಳಿರುವದು ಭಯಂಕರವಾದ ಆಪಾದನೆಯು. ಕಳೆದ ಅನೇಕ ವರ್ಷಗಳಿಂದಲೂ ನಾನು ಈ ಆಪಾದನೆಯಲ್ಲಿ ನಂಬಿಕೆಯನ್ನಿಡಬಾರದೆಂದು ಪ್ರಯತ್ನಿಸುತ್ತಿರುವೆನು. ಆದರೆ ದಿನ ಕ್ರಮೇಣ ಈ ಆಪಾದನೆಯು ಸುಳ್ಳಲ್ಲವೆಂದು ನನಗೆ ಬೋಧೆಯಾಗುತ್ತಿದೆ. 'ಕೋಟಘುರ'ದ ಮಿ| ಎಸ್. ಇ. ಸ್ಟೋಕ್ಸರು ವೈಸರಾಯರಿಗೆ ಬರೆದ ಜಾಹೀರ ಪತ್ರದಿಂದ ಒಂದು ಉದಾಹರಣೆಯನ್ನು ಹೇಳುವೆನು. ಅದು ಹಿಂದುಸ್ಥಾನದಿಂದ ಟಿಬೇಟಿಗೆ ಹೋಗುವ, ವೈಸರಾಯರ ವಾಸಸ್ಥಾನವಾದ ಸಿಮ್ಲಾ ನಗರದಿಂದ ೧೪ ಮೈಲುಗಳ ದೂರದಲ್ಲಿರುವ, ಟಿಬೆಟ್ ಮಾರ್ಗಕ್ಕೆ ಸಂಬಂಧಿಸಿರುವುದು. ಸರಕಾರದವರ ವಿಶೇಷ ಪೀಡಾಕರವಾದ ಹಲವು ಕ್ರೂರ ಕಾರ್ಯಗಳಲ್ಲಿ ಒಂದನ್ನು ಅದು ಹೇಳುವುದು. ಇದರಿಂದ ಪ್ರತಿ

ವರುಷವೂ ಬಡವರಿಗೆ ಯಾವ ವಿಧವಾದ ಉಪದ್ರವಾಗುತ್ತದೆಂಬುದು ಹಿಂದುಸ್ಥಾನ ಸರಕಾರದವರಿಗೆ ಚೆನ್ನಾಗಿ ಗೊತ್ತಿದ್ದರೂ, ಅದನ್ನು ಕಂಡೂ ಕಾಣದವರಂತೆ ಅವರು (ಸರಕಾರದವರು) ಉಪೇಕ್ಷಿಸುತ್ತಿರುವರು. ಮಿ। ಸ್ಟೋಕ್ಸರು ಬರೆದಿರುವುದೇನಂದರೆ:—"ನಾನು 'ವೈಸ್‌ರೀಗಲ್ ಲಾಜಿ' ನಿಂದ ತೆರಳುವಾಗ ತಮ್ಮ ವಾಸಸ್ಥಾನವಾದ ಸಿವ್ಲಾಕ್ಕೆ ಇಷ್ಟು ಹತ್ತಿರವಾಗಿ ರುವ ವಿಚಾರಕ್ಕೆ ತಾವು ಶೀಘ್ರದಲ್ಲಿಯೆ ಗಮನಕೊಡುವಿರೆಂದು ನಂಬಿ, ವೈದ್ಯರ ಅಪ್ಪಣೆಯಂತೆ ಕೆಲವು ವಾರಗಳ ವರೆಗೆ ಹಾಸಿಗೆಯ ಮೇಲೆ ವಿಶ್ರಾಂತಿಯನ್ನು ಪಡೆಯಬೇಕೆಂದು ಕೋಟಫುರ್‌ನಲ್ಲಿರುವ ನನ್ನ ಮನೆಗೆ ಹಿಂದಿರುಗಿ ಬಂದು ಮಲಗಿದೆನು. ಆದರೆ ಕೂಡಲೆ ನಾನು ವಿಶ್ರಾಂತಿ ಭಾವನೆಯನ್ನು ತ್ಯಜಿಸಿ, ಹಾಸಿಗೆಯಿಂದೆದ್ದು ಹೋಗಿ, ಸಿವ್ಲಾದಿಂದ ಹೋಗುವ ರಸ್ತೆಯ ಬಳಿ ನನ್ನೊಂದಿಗೆ ಕೆಲಸ ಮಾಡುತ್ತಿದ್ದ ನನ್ನ ಸ್ನೇಹಿತರು ಸರಕಾರದವರ ಕ್ರೂರಶಾಸನಕ್ಕೊಳಗಾಗಿದ್ದನ್ನು ನೋಡಬೇಕಾಯಿತು. ಜನರನ್ನು ಗುಲಾಮರನ್ನಾಗಿ ಮಾಡಿದ್ದ ಕ್ರೂರವಾದ ಶಾಸನಗಳ ಅನ್ಯಾಯಗಳ ವಿಚಾರವಾಗಿ ಬೋಧಿಸುತ್ತಿದ್ದ ಕೆಲವರು ಕೈದುಮಾಡಲ್ಪಟ್ಟಿದ್ದರು! ಕೆಲವರಿಗೆ ಬಲವಾದ ಜುಲುಮಾನೆ (fines) ಯಾಗಿತ್ತು! ಇತರರು ಅಧಿಕಾರಿಗಳ ಕೋಪದಿಂದ ಭಯಪೀಡಿತರಾಗಿದ್ದರು!! ನಾನು ಕಾಹಿಲೆಯಿಂದ ನರಳುತ್ತಿದ್ದರೂ, ಅಲ್ಲಿಂದ 'ಫಾಗು' ಎಂಬ ಸ್ಥಳಕ್ಕೆ ಬಂದೆನು. ಆ ಸ್ಥಳದಲ್ಲಿ ಸಿವ್ಲಾ ಪೋಲಿಸಿನವರು ಅಸಂಖ್ಯಾತರಾಗಿದ್ದರು! ಜನರು ಭಯಭ್ರಾಂತರಾಗಿದ್ದರು!! ಅವರ ಮುಂದಾಳುಗಳ ಕೈಗೆ ಕೋಳ (handcuff) ವನ್ನು ಹಾಕಿದ್ದರು!!! ಶ್ರೀಯುತ ಮುನಷಿ ಕಾಪುರ ಸಿಂಹನೆಂಬ ಗೃಹಸ್ಥನನ್ನು ಕೈದಿನಲ್ಲಿಟ್ಟರು. ಜನರ ದುಃಖದ ವಿಚಾರವನ್ನು ಸರಕಾರದವರೆದುರಿನಲ್ಲಿಡಲು ಆತನು ಒಂದು ಪ್ರಾತಿನಿಧ್ಯಪತ್ರವನ್ನು ಬರೆದು ಅದಕ್ಕೆ ಕೆಲವರಿಂದ ಸಹಿ (ದಸ್ಕತು) ಯನ್ನು ಪಡೆಯುವ ಕೆಲಸದಲ್ಲಿ ನಿರತನಾಗಿದ್ದುದೆ ಇದಕ್ಕೆ ಕಾರಣವಾಗಿತ್ತು. ಆ ಪತ್ರದಲ್ಲಿ ಸರಕಾರದವರು ಬಲತ್ಕಾರ ಪೂರ್ವಕವಾಗಿ ಮಾಡಿಸುತ್ತಿದ್ದ ಕೆಲವು ಕಷ್ಟತರದ ನ್ಯಾಯವಿರೋಧವಾದ ಕೂಲಿಗೆಲಸ

ಗಳನ್ನು ಇನ್ನು ಮುಂದೆ ಮಾಡಲಾರೆವೆಂಬ ವಿಚಾರವಾಗಿ ಬಿನ್ನವಿಸಿಕೊಂಡಿದ್ದರು. ಆ ಬಲತ್ಕಾರವಾಗಿ ಕೂಲಿ ಮಾಡಿಸುವ ಅನ್ಯಾಯದ ವಿಧಾನಗಳನ್ನು ವರ್ಣಿಸಿದರೆ, ಅದರಿಂದ ಪ್ರತಿಯೊಬ್ಬ ನಿಜವಾದ ಇಂಗ್ಲಿಷ ವ್ಯಕ್ತಿಯೂ ಕೋಪಗೊಂಡು, ಧಿಕ್ಕಾರವನ್ನು ಸೂಚಿಸುವನು!! ಇಂಥಾ ಅನ್ಯಾಯವನ್ನು ನಿವಾರಿಸಬೇಕೆಂಬ ಬಿನ್ನಹವು ಆ ಪತ್ರದಲ್ಲಿತ್ತು......
......ಈಗ ನಮಗೆ ಗೌರವವನ್ನು ಕಾಪಾಡಿಕೊಳ್ಳಲು ಒಂದೇ ಒಂದು ಮಾರ್ಗವು ಕಾಣಿಸುವುದು. **ನ್ಯಾಯವು ದೊರೆಯುವ ವರೆಗೆ ಸಹಕಾರವನ್ನು ಮಾಡಲು ನಾವು ತಿರಸ್ಕರಿಸಲೇ ಬೇಕು!** (ದಪ್ಪ ಅಕ್ಷರವು ನನ್ನದು).''

ಮಿ| ಸ್ಟೋಕ್ಸ್‌ರು ಅಮೇರಿಕದವರು. ಇವರು ಕಳೆದ ಯುದ್ಧದ ಸಮಯದಲ್ಲಿ ಸಂಕಷ್ಟಕ್ಕೊಳಗಾಗಿದ್ದ ಗ್ರೆಟ್‌ಬ್ರಿಟನಿಗೆ ಸಹಾಯಮಾಡಲು ಬ್ರಿಟಿಷ ಪ್ರಜೆಯಾಗಿ ಅವರೊಂದಿಗೆ ಸೇರಿ ಕೆಲಸ ಮಾಡಲಾರಂಭಿಸಿದರು. ಇವರು ವಾಸಮಾಡುವ ಗುಡ್ಡ ಪ್ರಾಂತದಿಂದ ಯುದ್ಧಕ್ಕಾಗಿ ಅನೇಕ ಸಿಪಾಯಿಗಳನ್ನು ಸಂಗ್ರಹಿಸಿದರು. ಮೊದಲಿನಿಂದಲೂ ಸರಕಾರದ ಕಡೆಗೇ ಅವರ ಮನಸ್ಸು ಆಕರ್ಷಿತವಾಗಿತ್ತು. ಸಹಕಾರದಿಂದ ಕೆಲಸ ಮಾಡುವುದಕ್ಕಾಗಿ ಅವರು ವಿಶೇಷ ಪ್ರಯತ್ನ ಪಟ್ಟರು. ಆದರೆ ಅವರು ತಮ್ಮ ಸ್ವಂತ ಕಣ್ಣಿನಿಂದ ನೋಡಿದ ಬಡಪೀಡನೆಯು ಅವರ ಬಾಯಿಯಿಂದಲೆ **"ನ್ಯಾಯವು ದೊರೆಯುವ ವರೆಗೆ ಸಹಕಾರವನ್ನು ಮಾಡಲು ನಾವು ತಿರಸ್ಕರಿಸಲೇ ಬೇಕು,"** ಎಂಬ ವಾಕ್ಯವನ್ನು ಕೊನೆಗೆ ಅವರೇ ಉಚ್ಚರಿಸುವಂತೆ ಮಾಡಿಬಿಟ್ಟಿತು.

ಕ್ರೂರಾತ್ಮಕ ಸರಕಾರ ಪದ್ಧತಿ.

ಮೇಲೆ ಹೇಳಿದ ವಿಚಾರದಲ್ಲಿ ಹಿಂದುಸ್ಥಾನದ ವೈಸರಾಯರಿಗೆ ಸಮೀಪಸ್ಥರಾಗಿರುವ ಮಿ| ಸ್ಟೋಕ್ಸ್‌ರವರ ಸ್ಥಿರಪ್ರಯತ್ನದಿಂದ ನಿಧಾನವಾಗಿ ನ್ಯಾಯವು ದೊರೆಯುವಂತಾಗಬಹುದು.—ಆದಾಗ್ಯೂ ೩೨ ಕೋಟಿ

ಪ್ರಜೆಗಳುಳ್ಳ ಈ ಹಿಂದುಸ್ಥಾನದಲ್ಲಿ ಅಂಥ ಅನ್ಯಾಯಗಳು ಸಾವಿರಗಟ್ಲೆಯಾಗಿ ನಡೆಯುತ್ತಿರುವುದು. ಆ ಅನ್ಯಾಯಕಾರಿಗಳಾದ ಅಧಿಕಾರಿಗಳಿಗೆ ಸರಕಾರದವರು ಚಿತಾವಣೆಯ ಮೂಲಕ ಮತ್ತಿಷ್ಟು ಆಶ್ರಯ ಕೊಡುವರೇ ವಿನಾ, ಅಂಥಾ ಅಧಿಕಾರಿಗಳನ್ನು ಶಿಕ್ಷಿಸುವುದಿಲ್ಲ!! ಅತಿ ಮಹತ್ವವುಳ್ಳ ಒಂದು ಸೂಚನೆಯನ್ನು ಮಹಾತ್ಮಾ ಗಾಂಧಿಯವರು ಈಚೀಚೆಗೆ ಪ್ರಸಿದ್ಧಪಡಿಸಿರುವರು. ಮದ್ಯಪಾನದ ದುಷ್ಪರಿಣಾಮಗಳಿಗೆ ಬಲಿಯಾಗಿ ಬಿದ್ದಿರುವ ಬಡವರನ್ನು ಉದ್ಧರಿಸುವುದಕ್ಕೋಸ್ಕರ, ಮದ್ಯದ ವ್ಯಾಪಾರವನ್ನೆ ನಿಲ್ಲಿಸಲು ಮಹಾತ್ಮರು ವಿಶೇಷ ಪ್ರಯತ್ನಮಾಡುತ್ತಿರುವರು. ಇದಲ್ಲದೆ ಬಡವರಿಗೆ ಸಹಾಯಕವಾದಂಥಾ ಇನ್ನೂ ಅನೇಕ ಕರ್ತವ್ಯಗಳ ವಿಚಾರವಾಗಿ ಅವರು ಬರೆದಿರುವುದೇನಂದರೆ.—

"ಈಗ ನಾವು ಹೂಡಿರತಕ್ಕ ಚಳವಳಗಳಲ್ಲಿ, 'ಮೂಡರೇಟ'ರೂ ಸರಕಾರದವರೂ ಸಹಾಯಮಾಡಬೇಕೆಂದು ನಾನು ವಿನಂತಿ ಮಾಡಿಕೊಂಡಿರುವುದರಲ್ಲಿ ದೋಷವೇನೂ ಕಾಣಿಸುವುದಿಲ್ಲ. ನಾನು ಮೂಡರೇಟರಿಗೂ, ಅಧಿಕಾರಿಗಳ ಮುಖಾಂತರ ಸರಕಾರದವರಿಗೂ, 'ನೀವು ಖಿಲಾಪತ್ತು ಮತ್ತು ಪಂಜಾಬಿನ ವಿಚಾರವಾಗಿ ಸಹಾಯಮಾಡಬೇಕು; ಅಥವಾ ಮಾದಕದ್ರವ್ಯಗಳ ಅಂಗಡಿಗಳನ್ನೆಲ್ಲ ಮುಚ್ಚಿಸಬೇಕು; ಅಥವಾ ಸರಕಾರದ ಮತ್ತು ಅದರ ಅಧೀನದಲ್ಲಿರತಕ್ಕ ಶಾಲೆಗಳಲ್ಲಿ ನೂಲಿನ ಚರಕಗಳನ್ನು ಪ್ರಚಾರಕ್ಕೆ ತರಬೇಕು; ಮತ್ತು ವಿದೇಶೀ ವಸ್ತ್ರಗಳು ಈ ದೇಶಕ್ಕೆ ಬಾರದಂತೆ ಕಾಯಿದೆಯನ್ನು ಮಾಡಬೇಕು. ಇಷ್ಟು ವಿಚಾರಗಳಲ್ಲೊಂದರಲ್ಲಾದರೂ ನೀವು ಸಹಾಯಮಾಡಬೇಕು' ಎಂದು ವಿನಂತಿ ಮಾಡಿಕೊಂಡಿರುವೆನು. ಏಕೆಂದರೆ, ಅವರು ಈ ವಿಚಾರಗಳನ್ನು ಆಚರಣೆಗೆ ತಂದರೆ, ಆಗ ಅವರು ಪೂಜ್ಯವೆಂದು ತಿಳಿದಿರುವ ಸರಕಾರದ ಪದ್ಧತಿಯು ಪಾಪಮಯವಾಗಿದೆಯೆಂದು ನಾನು ಹೇಳಲಾ

ರೆನು. ಅವರು ತಾವು ಪಾಪಮಯರಾಗಿಲ್ಲವೆಂದು ಜನರಿಗೆ ತೋರಿಸಿಕೊಳ್ಳಲು ಅವರಿಗೆ ಅವಕಾಶವನ್ನು ಕಲ್ಪಿಸಿಕೊಡ ಬೇಕೆಂಬ ಉದ್ದೇಶದಿಂದ ಈ ವಿನಂತಿಯನ್ನು ಮಾಡಿಕೊಂಡಿ ರುವೆನು. ಈ ನನ್ನ ವಿನಂತಿಯು ಫಲಕಾರಿಯಾಗದೇ ಹೋದರೆ ಆಗ ಅದರಿಂದ ಸರಕಾರದ ಕ್ರೂರಾತ್ಮಕ ಪಾಪ ಭಾವನೆಯು ಚೆನ್ನಾಗಿ ವ್ಯಕ್ತವಾಗುವುದು.''

ಈ ವಾಕ್ಯಗಳ ವಿಚಾರವಾಗಿ ಚೆನ್ನಾಗಿ ಯೋಚನೆಮಾಡಿರಿ! ಇಂಥಾ ಮಾತುಗಳು ಸ್ವಮತಭ್ರಾಂತರ ಬಾಯಿಯಿಂದ ಹೊರಡುವವೊ? ಇಂಥಾ ವಾಕ್ಯಗಳು ಕೇವಲ ಶೂನ್ಯವಾದಿಯೂ ಲಯಕಾರಿಯೂ ಆದಂಥವನ ಬಾಯಿಂದ ಹೊರಬೀಳುವವೊ? ಕೇವಲ ರಾಜನೀತಿಜ್ಞ ರಾದಂಥವರ ಬಾಯಿಯಿಂದಲಾದರೂ ಇಂಥಾ ಮಾತುಗಳು ಹೊರಡು ವುದು ಸಾಧ್ಯವೊ? ಯಾವ ರಾಜನೀತಿಜ್ಞನೂ ತನ್ನ ವಿರೋಧಪಕ್ಷ ದವನಿಗೆ ಇಂಥಾ ಅವಕಾಶಗಳನ್ನು ಎಂದಿಗೂ ಕಲ್ಪಿಸಿಕೊಡಲಿಕ್ಕಿಲ್ಲ.

ಅದರೆ ಈ ಅವಕಾಶವನ್ನು ಸರಕಾರದವರು ಉಪಯೋಗಪಡಿಸಿ ಕೊಂಡು ತನ್ನೊಂದಿಗೆ ಸಹಕರಿಸಲು ಸರಿಯಾದ ಮಾರ್ಗಗಳನ್ನು ತೋರಿ ಸುವವರೊಂದಿಗೆ ಸಹಕರಿಸಲೇಬೇಕೆಂದು ನಾನು ಬಹಳವಾಗಿ ಅಪೇಕ್ಷಿಸು ತ್ತೇನೆ—ಆದರೆ, ನನ್ನ ಸ್ವಂತ ಅನುಭವದಿಂದ ತೋರಿಬರುವುದೇನಂದರೆ,— ಹಿಂದುಸ್ಥಾನದ ಕೋಟ್ಯಾನುಕೋಟಿ ಬಡಜನರ ಜೀವನಕ್ಕೆ ಮೂಲಾ ಧಾರವಾದ ಈ ವಿಷಯಗಳಲ್ಲಿ, ಸರಕಾರದವರು ಎಂದಿನಂತೆ ತಮ್ಮ ಕ್ರೂರಾತ್ಮಕ ಶಾಸನ ಮಾರ್ಗವನ್ನೆ ಅನುಸರಿಸಬೇಕೆಂದೂ, ಜನರ ಅಭಿ ಪ್ರಾಯವನ್ನು ಲಕ್ಷಿಸಕೂಡದೆಂದೂ ಹಟತೊಟ್ಟಿರುವಂತೆ ಕಾಣುವುದು! ಈ ವಿಚಾರವನ್ನು **ಮಹಾತ್ಮಾ ಗಾಂಧಿಯವರು** ಎಲ್ಲರಿಗೂ ತಿಳಿ ಯುವಂತೆ ಸರಿಯಾಗಿ ವರ್ಣಿಸಿರುವರು.

ಒಬ್ಬ ಸಹಕಾರಿಗಳ ಆರೋಪಣೆ.

ವಿಶೇಷ ಸೂಚನೆ:—ನಾನು ಈಗತಾನೆ, ಸಹುಸಮರ್ಥರೂ, ವಿಶೇಷ ಜಾಗರೂಕರೂ, "ದಿ ಇಂಡಿಯನ್ ಸೋಶಿಯಲ್ ರಿಫಾರ್ಮರ್''

ಎಂಬ ಪತ್ರಿಕೆಯ ಸಂಪಾದಕರೂ ಆದ ಭಾರತೀಯ ರಾಜಕೀಯ ಶಾಸ್ತ್ರ ಪಂಡಿತರೊಬ್ಬರ ಅಭಿಪ್ರಾಯಗಳನ್ನು ಓದಿದೆನು. ಅವರು ಅಸಹಕಾರ ವ್ರತವನ್ನು ಸ್ವೀಕರಿಸಿದವರಲ್ಲ. ಆದ್ದರಿಂದ ಅವರು ನಿಸ್ವಾರ್ಥಭಾವ ದಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುವಾಗ ನಾವು ಅವರ ಮಾತುಗಳಿಗೆ ಹೆಚ್ಚು ಬೆಲೆಯನ್ನು ಕೊಡಬೇಕು.

ಅವರು ಬರೆಯುವುದೇನಂದರೆ,—"ಹಿಂದೆ ಒಂದಾನೊಂದು ಕಾಲ ದಲ್ಲಿ ಬ್ರಿಟಿಷರ ಸಂಬಂಧವಾಗಿ ಭಾರತೀಯರ ದೀರ್ಘವಾದ ಇತಿಹಾಸದಲ್ಲೆ ಲ್ಲಿಯೂ ಕಂಡುಬರದಂತಹ ಒಂದು ನವೀನ ರೂಪವು ಪ್ರಕಾಶಗೊಳ್ಳಲು ಮೂಲಕಾರಣವಾಗುವ ಸಂಭವವಿದ್ದಿತು. ಮನ್ರೊ ಸಾಹೇಬನಂಥಾ ಇಂಗ್ಲೀಷ ಆಡಳಿತದಾರರು, ಹಿಂದುಸ್ಥಾನವು ಉನ್ನತಿಯನ್ನೈದಲು ಸಹಾಯಮಾಡಬೇಕೆಂಬ ಉದ್ದೇಶದಿಂದ ರಾಜ್ಯವನ್ನಾಳುತ್ತಿದ್ದಾಗ ಅಂಥಾ ಕಾಲವು ಒದಗಿತ್ತು. ಅವರ ನಂತರ ಅಂಥಾ ಉದ್ದೇಶದ ಯಾವ ಅಧಿ ಕಾರಿಯೂ ಹಿಂದುಸ್ಥಾನಕ್ಕೆ ಬರಲಿಲ್ಲ; ಆದುದರಿಂದ ಕಳೆದ ಇಪ್ಪತ್ತೈದು ವರುಷಗಳಿಂದ ಹಿಂದುಸ್ಥಾನವನ್ನು ತನ್ನ ಸುಲಿಗೆಗೀಡುಮಾಡಿಕೊಂಡು, ಕೇವಲ ತನ್ನ ಲಾಭಕ್ಕಾಗಿಯೆ ಹಿಂದುಸ್ಥಾನವನ್ನು ನಿರ್ಬಲವಾಗಿ ಮಾಡುವ ಉದ್ದೇಶದಿಂದಲೆ ರಾಜ್ಯವನ್ನಾಳುವ ಸಾಮ್ರಾಜ್ಯ ಪ್ರಭುತ್ವವು ಹಿಂದುಸ್ಥಾನದಲ್ಲಿ ಪ್ರಬಲಗೊಳ್ಳುತ್ತಿರುವುದು ಕಂಡುಬರುತ್ತಿದೆ. ಈ ವಿಧವಾದ ಪ್ರಭುತ್ವದ ಸುಲಿಗೆಯಿಂದ ಜನರಿಗೆ ಅದರ ನೈತಿಕ ಅಧಿಕಾರ ದಲ್ಲಿದ್ದ ವಿಶ್ವಾಸವು ಕುಂದಿಹೋಯಿತು. ಆದ್ದರಿಂದ ಈ ಪ್ರಭುತ್ವದವರು ತಮ್ಮ ಅಧಿಕಾರವನ್ನು ಪ್ರಕಾಶಪಡಿಸುವುದಕ್ಕೋಸ್ಕರ ಅನೇಕ ಕ್ರೂರ ಶಾಸನಗಳನ್ನೂ, ಜಾತೀಯಾನುಕೂಲತೆಯ ನಿಯಮಗಳನ್ನೂ ರಚಿಸ ಬೇಕಾಯಿತು! ಆದರೆ ಈ ವಿಧವಾದ ಮೋಸದ ಆಯುಧಗಳನ್ನೂ ಅವರು ಸರಿಯಾಗಿ ಉಪಯೋಗಿಸಿಕೊಳ್ಳಲಾಗಲಿಲ್ಲ. ಸುಶಿಕ್ಷಿತ ಭಾರ ತೀಯರ ಆಶೋತ್ತರಗಳನ್ನು ಕುಗ್ಗಿಸುವುದಕ್ಕೂ, ನೌಕರಶಾಹಿಯವರನ್ನು ರಕ್ಷಿಸಿಕೊಳ್ಳುವುದಕ್ಕೂ, ಹಿಂದೂದೇಶದ ಮಹಮ್ಮದೀಯರನ್ನು ಪೋಲೀಸಿ

ನವರಂತೆ ರಕ್ಷಕರಾಗಿ ಉಪಯೋಗಿಸಿಕೊಳ್ಳುವಂತೆ ಇದುವರೆಗೆ ಈ ಸರಕಾರದವರು ಮಾಡಿದ ತಂತ್ರವು, ಈಗ ವಿಶೇಷ ಬಲದಿಂದ ಅದರ ಸೃಷ್ಟಿಕರ್ತರ ಮೇಲೆ ತಿರುಗಿ ಬಿದ್ದಿರುವುದು. ಇದರ ಪೆಟ್ಟನ್ನು ಸರಕಾರದವರು ಜಾಗ್ರತೆಯಾಗಿ ಮರೆಯುವಂತಿಲ್ಲ. ಈಗ ಕ್ರೂರ ಶಾಸನಗಳಿಂದ ಜನಗಳ ಅತೃಪ್ತಿಭಾವವು ಕಾಳ್ಗಿಚ್ಚಿನಂತೆ ಹರಡುತ್ತಿರುವುದಲ್ಲದೆ, ಆ ಶಾಸನಗಳು ಜನರನ್ನು ಬಹು ಕ್ರೂರವಾಗಿ ಪೀಡಿಸುತ್ತಿರುವುದರಿಂದ ಅವುಗಳು ಈಗ ರದ್ದಾಗಲೇಬೇಕು. ಹಿಂದೀಯ ಮಂತ್ರಿಗಳಿಗೆ ಕೆಲವು ಅಧಿಕಾರಗಳು ಕೊಡಲ್ಪಟ್ಟಿವೆಯೆಂಬರ್ಥವನ್ನು ಸೂಚಿಸುವ ಆ ಬೆರಕೆಯ ಸುಧಾರಣೆಯ ಮಸೂದೆಯಿಂದ ಸಾಧಿಸಬಹುದಾಗಿದ್ದ ಅನೇಕ ಸುಸಂದರ್ಭಗಳನ್ನು, ಸರಕಾರದವರ ಸುಲಿಗೆಯನ್ನು ಚೆನ್ನಾಗಿ ಪ್ರಕಾಶಪಡಿಸುವಂಥ ರಾಜಭಂಡಾರ ವಿನಿಯೋಗಕ್ರಮವು, ಪಾತಾಳಕ್ಕೆ ತುಳಿದುಬಿಟ್ಟಿದೆ. **ಹಿಂದುಸ್ಥಾನದಲ್ಲಿರುವ ಬ್ರಿಟಿಷ ಸರಕಾರವು ತನ್ನ ಈ ಸುಲಿಗೆಯ ಸ್ವಭಾವವನ್ನು ಬಿಟ್ಟು, ಅವರ ಹಿಂದಿನ ಕಾಲದ ರಾಜ್ಯಸ್ಥಾಪಕರ ಪವಿತ್ರವಾದ ಪರಾರ್ಥ ಪ್ರವರ್ತನೆಯನ್ನು ಕೈಕೊಳ್ಳುವುದು ಸಾಧ್ಯವೋ?**” (ದಪ್ಪ ಅಕ್ಷರವು ಭಾಷಾಂತರಕಾರನದು)

ಬಹು ಜಾಗರೂಕತೆಯಿಂದ ಬರೆಯಲ್ಪಟ್ಟಿರುವ ಪ್ರಬಲ ಸಹಕಾರಿಯಾದೊಬ್ಬ ಗೃಹಸ್ಥರ ಈ ಮೇಲಣ ವಾಕ್ಯಗಳನ್ನು, ನಾನು ಮೇಲೆ ಹೇಳಿರುವ ಮಹಾತ್ಮಾ ಗಾಂಧಿಯವರ ವಾಕ್ಯಗಳೊಂದಿಗೆ ಹೋಲಿಸಿ ನೋಡುವಿರಾ? “ಹಿಂದುಸ್ಥಾನದಲ್ಲಿ ಅತೃಪ್ತಿಭಾವನೆಯೆ ಇಲ್ಲ”ವೆಂಬಂತೆ ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಬಣ್ಣಿಸಲ್ಪಟ್ಟಿರುವ, “ಹಿಂದುಸ್ಥಾನದಲ್ಲಿ ಎಲ್ಲೆಲ್ಲಿಯೂ ಕಂಡುಬರುವ ನಿಜವಾದ ಅತೃಪ್ತಿಭಾವನೆಯು” ಗುಟ್ಟು ಮೇಲಿನ ವಾಕ್ಯಗಳಿಂದ ನಿಮಗೆ ಚೆನ್ನಾಗಿ ಗೊತ್ತಾಗುವುದು!”

ಸಂಪೂರ್ಣಂ

ಹೆಚ್ಚೋಲೆ.

(ಅ)

ಹಿಂದುಸ್ಥಾನದವರ ತೆರಿಗೆಹಣವು ಹೇಗೆ ಖರ್ಚಾಗುವುದು?

ಅಧಿಕಾರಿಗಳು.	ಅವರು ಒಂದು ವರ್ಷಕ್ಕೆ ಪಡೆಯುವ ಸಂಬಳ. ರೂಪಾಯಿ
ಗವರ್ನರ್ ಜನರಲ್ (ವಾಯ್ಸರಾಯ)	೨,೫೬,೦೦೦
ಬಂಗಾಳ, ಮದರಾಸು, ಮುಂಬೈ ಮತ್ತು ಸಂಯುಕ್ತ ಪ್ರಾಂತ್ಯಗಳ ಗವರ್ನರುಗಳು ಪ್ರತಿಯೊಬ್ಬರಿಗೆ	೧,೨೮,೦೦೦
ಕಮಾಂಡರ್ ಇನ್ ಚೀಫ್ (ಸೇನೆಗಳ ಅಧಿಪತಿ) ...	೧,೦೦,೦೦೦
ಪಂಜಾಬ, ಬಿಹಾರ ಮತ್ತು ಒರಿಸ್ಸಾಗಳ ಗವರ್ನರುಗಳು ಪ್ರತಿಯೊಬ್ಬರಿಗೆ	೧,೦೦,೦೦೦
ಮಧ್ಯಪ್ರಾಂತ್ಯದ ಗವರ್ನರರಿಗೆ	೭೨,೦೦೦
ಅಸ್ಸಾಮಿನ ಗವರ್ನರರಿಗೆ	೬೬,೦೦೦
ಲೆಫ್ಟಿನೆಂಟ್ ಗವರ್ನರ್	೧,೦೦,೦೦೦
ಗವರ್ನರ ಜನರಲರ ಕಾರ್ಯನಿರ್ವಾಹಕ ಸಭೆಯ ಮೆಂಬರರೊಬ್ಬೊಬ್ಬರಿಗೆ	೮೦,೦೦೦
ಮದ್ರಾಸು, ಮುಂಬೈ, ಬಂಗಾಳ ಮತ್ತು ಸಂಯುಕ್ತ ಪ್ರಾಂತ್ಯಗಳ ಗವರ್ನರರ ಕಾರ್ಯನಿರ್ವಾಹಕ ಸಭೆಯ ಮೆಂಬರರೊಬ್ಬೊಬ್ಬರಿಗೆ	೬೪,೦೦೦
ಪಂಜಾಬ, ಬಿಹಾರ ಮತ್ತು ಒರಿಸ್ಸಾ ಪ್ರಾಂತ್ಯಗಳ ಗವರ್ನರರ ಕಾರ್ಯನಿರ್ವಾಹಕ ಸಭೆಯ ಮೆಂಬರರೊಬ್ಬೊಬ್ಬರಿಗೆ	೬೦,೦೦೦
ಮಧ್ಯಪ್ರಾಂತ್ಯದ ಗವರ್ನರರ ಕಾರ್ಯನಿರ್ವಾಹಕ ಸಭೆಯ ಮೆಂಬರರೊಬ್ಬೊಬ್ಬರಿಗೆ	೪೮,೦೦೦
ಅಸ್ಸಾಮಿನ ಗವರ್ನರರ ಕಾರ್ಯನಿರ್ವಾಹಕ ಸಭೆಯ ಮೆಂಬರರಿಗೆ	೪೨,೦೦೦

ಇಷ್ಟಲ್ಲದೆ ಸುಧಾರಣೆ ಮಸೂದೆಯ ಫಲಸ್ವರೂಪವಾಗಿ ಪ್ರಾಂತಿಕ ಮತ್ತು 'ಇಂಪೀರಿಯಲ್' ಸರ್ಕಾರಗಳ ಖರ್ಚಿನ ಬಾಬು (ಐಟಮ್) ಹುಟ್ಟುವಳಿಗಿಂತಲೂ ಹೆಚ್ಚಾಗಿ, ಇನ್ನು ಮುಂದೆ ಆಡಳಿತವನ್ನು ಸುಸೂತ್ರವಾಗಿ ನಡೆಸಲು ಜನಗಳ ಮೇಲೆ ಹೊಸ ತೆರಿಗೆಯ ಹೊರೆಯನ್ನು ಹೆಚ್ಚಿಸಬೇಕಾಗುವುದೆಂದು ಮದ್ರಾಸು ಮತ್ತು ಮುಂಬಾಯಿ ಸರ್ಕಾರಗಳ ಪಬ್ಲಿಸಿಟಿ ಬ್ಯೂರೋ'ಗಳಿಂದ ಹೊರಬೀಳುವ ಪುಸ್ತಕ ರತ್ನವೊಂದರಿಂದ (!) ಸೂಚಿತವಾಗಿದೆ. ಸರಕಾರದ ಆಯವ್ಯಯದ ಕೆಳಗಣ ಪಟ್ಟಿಯಿಂದ ಈ ವಿಷಯವು ಸ್ಪಷ್ಟವಾಗುವುದು.

ಆದಾಯದ ಪಟ್ಟಿ.

ಆದಾಯದ ದಾರಿ	ಸನ್ ೧೯೨೧ನೆಯ ಜೂನ್ ವರೆಗಣ ೬ ತಿಂಗಳ ಆದಾಯ	ಇಡೀ ವರ್ಷದ ಆದಾಯದ ಅಂದಾಜು.	ಬಡ್ಜೆಟಿನಂತೆ ಇಡೀ ವರ್ಷಕ್ಕೆ ಆಗಬೇಕಾದ ಆದಾಯ	ಆದಾಯವು ಹೆಚ್ಚೋ ಕಡಿಮೆಯೊ?
ಕಸ್ಟಮ್ಸ್	೭೩೯ ಲಕ್ಷ	೩,೨೦೦ ಲಕ್ಷ	೩,೭೭೩ ಲಕ್ಷ	−೫೭೩ ಲಕ್ಷ
ಇನ್‌ಕಮ್‌ಟ್ಯಾಕ್ಸ	೨೫೮ ,,	೧,೯೩೫ ,,	೧,೮೦೬ ,,	+ ೧೨೯ ,,
ಉಪ್ಪಿನಿಂದ	೧೬೬ ,,	೮೭೦ ,,	೭೦೧ ,,	+ ೧೬೯ ,,
ಅಫೀಮಿನಿಂದ	೩೮ ,,	೧೬೨ ,,	೩೭೩ ,,	− ೨೧೧ ,,
ರೈಲಿನಿಂದ	೨೦೯ ,,	೧೩,೦೦ ,,	೨,೪೬೮ ,,	−೧,೧೬೮ ,,
ಪೋಸ್ಟಿನಿಂದ	೨೦೨ ,,	...	೨೦೩ ,,	− ೨೦೩ ,,
ಇತರ ಆದಾಯ	೭೯ ,,	೧,೫೦೦ ,,	೨,೦೭೬ ,,	− ೫೦೬ ,,
ಒಟ್ಟು	೧,೭೮೨ ,,	೮೯,೬೭ ,,	೧೧೪,೦೦ ,,	−೨,೪೩೩ ,,

ಖರ್ಚಿನ ಪಟ್ಟಿ.

ಖರ್ಚಿನ ಬಾಬು	ಸನ್ ೧೯೨೧-೨೨ ನೆಯ ಸಾಲಿನ ಜೂನ್ ವರೆಗಣ ೩ ತಿಂಗಳ ವರೆಗೆ ಖರ್ಚು	ಇಡೀ ವರ್ಷದ ಅಂದಾಜು	'ಬಜೆಟ್ಟ'ನಂತೆ ಇಡೀ ವರ್ಷಕ್ಕೆ ಆಗುವ ಖರ್ಚು	ಖರ್ಚು ಹೆಚ್ಚೋ? ಕಡಿಮೆಯೋ?
ಮಿಲಿಟೆರಿ(ಸೈನ್ಯ)	೧,೮೯೫ ಲಕ್ಷ	೭,೧೫೨ ಲಕ್ಷ	೬,೧೫೨ ಲಕ್ಷ	+೧,೦೦೦ಲಕ್ಷ
ಸಾಲದ ಖಾತೆ	೫೫೧ ,,	೨,೫೦೧ ,,	೨,೦೦೧ ,,	+ ೫೦೦ ,,
ಅಫೀಮು	೬೨ ,,	೧೫೨ ,,	೧೫೨ ,,	...
ಇತರ ಖರ್ಚು	೩೦೪ ,,	೧,೨೪೮ ,,	೧,೯೪೮ ,,	− ೭೦೦ ,,
ಒಟ್ಟು	೨,೮೧೨ ,,	೧೧,೦೯೨ ,,	೧೦,೨೯೩ ,,	+ ೮೦೦ ,,

ಮೇಲಣ ಪಟ್ಟಿಯಲ್ಲಿ ಕಡಿಮೆಯಾದುದಕ್ಕೆ— ಎಂಬ ಗುರುತನ್ನೂ ಹೆಚ್ಚಾದುದಕ್ಕೆ + ಎಂಬ ಗುರುತನ್ನೂ ಹಾಕಿದೆ. ಈ ಮೇಲಣ ಪಟ್ಟಿಯನ್ನು "ಮರಾಠಾ" ಪತ್ರಿಕೆಯಲ್ಲಿ ಸರಕಾರದವರ ಕಳೆದ ೧೯೨೧-೨೨ ನೆಯ ಸಾಲಿನ ಎಪ್ರಿಲ್, ಮೇ, ಜೂನ್ ತಿಂಗಳ ಆಯವ್ಯಯದ ವರದಿಯ ಆಧಾರವನ್ನನುಸರಿಸಿ ತಯಾರಿಸಲಾಗಿದೆ. ಇದರಲ್ಲಿ ಆದಾಯದ ಪಟ್ಟಿಯಲ್ಲಿ ಮೂರು ತಿಂಗಳಲ್ಲಿ ಬಂದ ಆದಾಯದಿಂದ ಇಡೀ ವರ್ಷಕ್ಕೆ ಸುಮಾರು ೯೦ ಕೋಟಿ ರೂಪಾಯಿಯಾಗುವುದು. ಆದರೆ ಸರಕಾರದವರ ಅಂದಾಜು ೧೧೪ ಕೋಟಿ! ಇಷ್ಟಾಗಬೇಕಾದರೆ ಸರಕಾರವು ಸುಮಾರು ೨೪ ಕೋಟಿ ರೂಪಾಯಿಗಳನ್ನು ಸಾಲಮಾಡಬೇಕು ಇಲ್ಲವಾದರೆ ಅಷ್ಟು ತೆರಿಗೆಯನ್ನು ಹೆಚ್ಚಿಸಬೇಕು. ಆದರೆ ಖರ್ಚಿನ ಪಟ್ಟಿಯಲ್ಲಿ ಮೇಲಿನಂತೆಯೆ ಲೆಕ್ಕಮಾಡಿದರೆ ಸುಮಾರು ೮ ಕೋಟಿ ರೂಪಾಯಿ ಹೆಚ್ಚಾಗುವುದು. ಆದ್ದರಿಂದ ಮೊದಲಿನ ೨೪ ಕೋಟಿಯೂ ಮತ್ತು ಈ ೮ ಕೋಟಿಯೂ ಸೇರಿ ಸುಮಾರು ೩೨ ಕೋಟಿ ರೂಪಾಯಿಗಳು ಆದಾಯಕ್ಕಿಂತಲೂ

ಹೆಚ್ಚಾಗಿ ಬೇಕಾಗುವುದೆಂದು ತಿಳಿದು ಬರುವುದು. ಇದರಲ್ಲಿ ಹಿಂದೂ ದೇಶದ ರಕ್ಷಣೆಯ ನೆವದಿಂದಿರುವ ಸೈನ್ಯದ ಇಲಾಖೆಗೆ ಎಷ್ಟು ಖರ್ಚಾಗುವುದೆಂಬುದನ್ನು ವಾಚಕರು ಚೆನ್ನಾಗಿ ಲಕ್ಷ್ಯದಲ್ಲಿಟ್ಟರೆ ಸುಧಾರಣಾ ಸರಕಾರದ ಬೆಳಕು ಚೆನ್ನಾಗಿ ಕಾಣುವುದು.

ಈಗ ವಿದೇಶೀ ವಸ್ತ್ರಬಹಿಷ್ಕಾರವು ಹೆಚ್ಚುತ್ತಿರುವುದರಿಂದ ವಿದೇಶೀ ವಸ್ತ್ರಗಳ ಮೇಲಣ ಸುಂಕ (ಕಸ್ಟಮ್ಸ್)ದಿಂದ ಆಗುತ್ತಿದ್ದ ಉತ್ಪತ್ತಿಯಲ್ಲಿಯೂ ಇನ್ನೂ ಸುಮಾರು ೩-೪ ಕೋಟಿ ಉತ್ಪನ್ನವು ಕಡಿಮೆಯಾಗಬೇಕಾಗುವುದು. ಪರದೇಶದ ಆಮದು ಕಡಿಮೆಯಾಗುವುದರಿಂದ ರೈಲಿನಿಂದ ಸರಕಾರಕ್ಕೆ ಆಗುವ ಉತ್ಪತ್ತಿಯೂ ಕಡಿಮೆಯಾಗಬಹುದು. ಎಂತೂ ಮಹಾತ್ಮಾಜಿಯವರ ಕೋರಿಕೆಯಂತೆ ವಿದೇಶೀ ವಸ್ತ್ರ ಬಹಿಷ್ಕಾರಕ್ಕೆ ಸಂಪೂರ್ಣ ಜಯವಾದರೆ, ಆಗ ಸರಕಾರದ ಆಯವು ಇನ್ನಷ್ಟು ಕಡಿಮೆಯಾಗಿ ಕೈಕಟ್ಟಿದಂತಾಗುವುದು.

ಆದರೆ ಇಂಥಾ ಇಕ್ಕಟ್ಟನ್ನು ತಂದುಕೊಳ್ಳದಿರುವುದಕ್ಕೆ ಉಪಾಯವಾವುದು? ಖರ್ಚಿನಲ್ಲಿ ಬಹು ಮಿತವಾಗಿರುವುದು, ಇಲ್ಲವೆ ಹೊಸದಾಗಿ ತೆರಿಗೆಯನ್ನು ಹಾಕುವುದು; ಇಲ್ಲವೆ ಸ್ವರಾಜ್ಯವನ್ನು ಕೊಟ್ಟು ಬಿಡುವುದು. ಮಿತವ್ಯಯದ ವಿಚಾರದಲ್ಲಿ ಸರಕಾರದವರು ಮನಸ್ಸು ಮಾಡಿದರೆ ಅನೇಕ ಉಪಾಯಗಳಿವೆ. ಆದರೆ ಈಗಿನ ಸಂದರ್ಭದಲ್ಲಿ ಸರಕಾರದವರು ಅದನ್ನು ಅನುಸರಿಸುವಂತಿಲ್ಲ. ಇನ್ನು ಹೊಸ ತೆರಿಗೆಗೆ ಪ್ರಜೆಗಳ ಒಪ್ಪಿಗೆಯಾಗಬೇಕು; ಆದರೆ ಅಸಹಕಾರ ಚಳವಳದ ಮೂಲ ಕಾರಣವು ನಿವಾರಣೆಯಾಗಿ, ಸ್ವರಾಜ್ಯವು ಸಿಗುವ ವರೆಗೆ ಅಸಹಕಾರದ ಪ್ರಜೆಗಳು ಅನುಮತಿಯನ್ನು ಕೊಡುವಂತಿಲ್ಲ! ಈ ರೀತಿಯಾಗಿ ಸರಕಾರವು ಖರ್ಚನ್ನು ಇನ್ನೂ ಮಿತವಾಗಿಳಿಸಲು ಸಾಧ್ಯವಿಲ್ಲ! ತೆರಿಗೆಯನ್ನು ಹೆಚ್ಚಿಸಲೂ ಉಪಾಯವಿಲ್ಲ! ಅಸಹಕಾರ ಚಳವಳದ ಈಗಿನ ಸಂದರ್ಭದಲ್ಲಿ ಸರಕಾರವು ಯಾವ ಮಾರ್ಗವನ್ನನುಸರಿಸುವು

ದೆಂಬುದನ್ನು ತಿಳಿಯುವುದಸಾಧ್ಯ. ಆದರೆ ಈ ದೇಶವನ್ನಾಳುವ ಬ್ರಿಟಿಷರು ತಮ್ಮ ಸ್ವಭಾವಗುಣಕ್ಕನುಸಾರವಾಗಿ, ತಮ್ಮಿಂದ ಸಾಧ್ಯವಾದ ಮಟ್ಟಿಗೆ ಕೊನೆಯ ವರೆಗೆ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡದಿರಲು ಎಷ್ಟು ಪ್ರಯತ್ನ ಮಾಡಬೇಕೋ ಅಷ್ಟನ್ನೂ ಮಾಡುವರು. ಅವರ ಪ್ರಯತ್ನ ಗಳೆಲ್ಲವೂ ನಿಷ್ಫಲವಾಗುವಂತೆಯೂ ಹಿಂದುಸ್ಥಾನಕ್ಕೆ ಕೂಡಲೆ ಸ್ವರಾಜ್ಯವು ಸಿಕ್ಕುವಂತೆಯೂ ಮಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ ವಾಗಿದೆ. ಈ ಕರ್ತವ್ಯವನ್ನು ನೆರವೇರಿಸಲು, ಈಗಿನ ಸರಕಾರದ ಕೀಲನ್ನು ಸಡಿಲಿಸುವಂಥಾ ವಿದೇಶೀ ವಸ್ತ್ರ ಬಹಿಷ್ಕಾರವನ್ನು ಚೆನ್ನಾಗಿ ಆಚರಿಸಿ, 'ಲಂಕಾ ಷೈರಿನ' ಅಥವಾ ಮತ್ತಾವ 'ಷೈರಿನ' ಬಟ್ಟೆಯೂ ಹಿಂದು ಸ್ಥಾನಕ್ಕೆ ಆಮದಾಗಿ ಬರದಂತೆ ಮಾಡಬೇಕು. ಈ ವಿಚಾರದಲ್ಲಿ ಸರ ಕಾರದವರಿಂದ ಎಷ್ಟು ತೊಂದರೆಗಳುಂಟಾದರೂ ಸಹಿಸಿಕೊಂಡು, ಅವ ರೊಂದಿಗೆ ಪೂರಾ ಅಸಹಕಾರವನ್ನು ಹೂಡಿ, ದೇವರಲ್ಲಿ ವಿಶ್ವಾಸವನ್ನಿಟ್ಟು, ಸ್ವದೇಶಿ ಮತ್ತು ಬಹಿಷ್ಕಾರವನ್ನು ಆಚರಿಸಿ, ಸ್ವರಾಜ್ಯವನ್ನು ಪಡೆಯಲು ಪ್ರತಿಯೊಬ್ಬ ದೇಶಾಭಿಮಾನಿಯಾದ ಭಾರತೀಯನೂ ತನ್ನ ಸರ್ವಶಕ್ತಿ ಯನ್ನೂ ಉಪಯೋಗಿಸಬೇಕು.

(ಬ)

ಹಿಂದೂಸ್ಥಾನದ ಗತವೈಭವವನ್ನೂ ಹಿಂದುಸ್ಥಾನದ ಈಗಣ ಸ್ಥಿತಿ ಯನ್ನೂ ಮಹಾತ್ಮಾಜಿಯವರ ಜೀವನ ಚರಿತ್ರೆಯನ್ನೂ ಚೆನ್ನಾಗಿ ತಿಳಿದು ಕೊಳ್ಳಲಪೇಕ್ಷಿಸುವ ಪ್ರತಿಯೊಬ್ಬ ಭಾರತೀಯನೂ ಓದಬೇಕಾದ ಪುಸ್ತಕ ಗಳು:—

INDIA AND HER PEOPLE—*Swami Abhedanand*
HINDU SUPERIORITY—*Hara Bilas Sharada*
POVERTY AND UN-BRITISH RULE IN INDIA—*Dadabhai Naoroji*

PUBLIC ADMINISTRATION IN ANCIENT INDIA—*Banerji*
ANNALS AND ANTIQUITIES OF RAJASTHAN—*Todd*
LOCAL GOVERNMENT IN ANCIENT INDIA—*R. K. Mookerji*
ಝಾಂಸಿ ಮಹಾರಾಣಿ ಲಕ್ಷ್ಮೀಬಾಯಿ ಸಾಹೇಬಳ ಚರಿತ್ರೆ—
(ಕೆರೋಡಿ ರಾಮರಾವ್)
INDIA A NATION—*Mrs. Annie Beasant*
ANCIENT HINDU POLITY—*N. N. Law*
HISTORY OF INDIA—*Havell*
ಕರ್ಣಾಟಕ ಗತವೈಭವ—ವೆಂಕಟೇಶ ಭೀಮರಾವ್ ಆಲೂರು
TOWARDS HOME RULE 3 VOLS—*Ramanand Chatterji*
ECONOMIC HISTORY OF INDIA—*R. C. Dutt*
REPORT OF THE CONGRESS SUB-COMMITTEE ON THE PUNJAB TRAGEDY 2 VOLS.
PUNJAB UNREST, BEFORE AND AFTER—*N. N. Mitter*
BATTLE OF FREEDOM—*Mahatma Gandhi*
ಹಿಂದೀ ಸ್ವರಾಜ್ಯ—ಮಹಾತ್ಮಾ ಗಾಂಧಿ
INDIAN NATIONAL CONGRESS—
G. A. Natesan & Co.
RISE OF THE MARATHAS—*M. G. Ranade*
HISTORY OF THE SIKHS—*Cunningham*
SWARAJ IN ONE YEAR—*Ganesh & Co., Madras.*
GOKHALE'S SPEECHES—*G. A. Natesan & Co., Madras*
TILAK'S SPEECHES—*Ganesh & Co., Madras.*
GANDHI IN SOUTH AFRICA—*Rev. C. Doke. G. A. Natesan & Co*
CIVIL DISOBEDIENCE—*Thoreau.*
ETHICS OF PASSIVE RESISTANCE—*Morris.*



ಕರ್ಮವೀರ ಮಹಾತ್ಮಾಗಾಂಧಿ ... ... ೧—೮—೦.

ಹೊಸ ಗ್ರಂಥಗಳು !　　　ನೋಡಿದರೆ ಬಿಡದಿರುವಂಥ ಗ್ರಂಥಗಳು !!

ಶ್ರೀಯುತ

ಡಿ. ಕೆ. ಭಾರದ್ವಾಜರಿಂದ ರಚಿತವಾದ ಇತರ ಗ್ರಂಥಗಳು.

ಹಿಂದೀ ಸ್ವರಾಜ್ಯ.

ಇದು ಮಹಾತ್ಮಾಜಿಯವರ ಪುಸ್ತಕದ ಭಾಷಾಂತರವು. ಇದರಲ್ಲಿ ಅತ್ಯುತ್ತಮ ರಾಜಕೀಯ ವಿಷಯಗಳು ಬಹು ಸುಲಭ ಭಾಷೆಯಲ್ಲಿ ಟ್ಟಿವೆ. ಮಹಾತ್ಮಾ ಗಾಂಧಿಯವರ ಈಗಿನ ಚಳವಳದ ವಿಚಾರವನ್ನು ತಿಳಿದುಕೊಳ್ಳಲಪೇಕ್ಷಿಸುವ ಪ್ರತಿಯೊಬ್ಬ ಸ್ತ್ರೀಪುರುಷರೂ ಓದತಕ್ಕ ಗ್ರಂಥ. ಇದರಲ್ಲಿ ಮಹಾತ್ಮಾ ಗಾಂಧಿ ಮತ್ತು ಅವರ ಪತ್ನಿಯ ಭಾವಚಿತ್ರವೂ ಇದೆ. ಇದರ ವಿಚಾರದಲ್ಲಿ ಕಂಠೀರವ, ಕರ್ಣಾಟಕ ಮಿತ್ರ, ನವೀನ ಭಾರತ, ಇತ್ಯಾದಿ ಪತ್ರಕರ್ತರೂ, ವಿದ್ವಾಂಸರೂ ಬಹಳವಾಗಿ ಪ್ರಶಂಸಿಸಿರುವುದಲ್ಲದೆ, ಹಿಂದುಸ್ಥಾನದಲ್ಲಿ ಸುಪ್ರಸಿದ್ಧವಾದ 'Modern Review' ಎಂಬ ಪತ್ರಿಕೆಯು ಬರೆಯುವುದೇನೆಂದರೆ:—

"It deserves commendation.........There are very few books dealing with politics. Every addition of such works as the one above is welcome. The style is clear, simple and natural. Every Kanarese knowing person will find in this sufficient material to weigh and consider."

ಇಂಥಾ ಉತ್ತಮ ಪುಸ್ತಕವು ಎಲ್ಲರಿಗೂ ದೊರೆಯಬೇಕೆಂಬ ಉದ್ದೇಶದಿಂದ ಬೆಲೆಯನ್ನು 8 ಆಣೆ ಮಾತ್ರ ಇಟ್ಟದೆ.

ತಿಲಕ ಮಹಾರಾಜರು.

ಇದು ಲೋಕಮಾನ್ಯ ತಿಲಕರ ಸಮಗ್ರ ಚರಿತ್ರವು. ಬಹು ಸುಲಭ ಭಾಷೆಯಲ್ಲಿ ಬರೆಯಲ್ಪಟ್ಟು ಅನೇಕ ಪತ್ರಕರ್ತರ ಮತ್ತು ಪಂಡಿತರ ಮೆಚ್ಚಿಗೆಗೆ ಪಾತ್ರವಾಗಿದೆ. ಇದರಲ್ಲಿ ಸುಂದರವಾದ ೭ ಭಾವಚಿತ್ರ (ಫೋಟೊ)ಗಳೂ ಸೇರಿವೆ. ಪ್ರತಿಯೊಬ್ಬ ದೇಶಾಭಿಮಾನಿಯೂ ಈ ಮಹ

ನೀಯರ ಚರಿತ್ರೆ
ಸಾಮಾನ್ಯರಿಗ
ತಗ್ಗಿಸಿದೆ. ಈ

ಈ ಚಿಕ್ಕ
ವಿಚಾರಗಳೂ
ದೃಷ್ಟಿಯಿಂದ
ಹೊಗಳಿರುವ
೬ ಪೈ ಮಾತ್ರ

ತಿಲಕ ಪ್ರ
೦—೪—೦; ತಿ
ಜನ್ಮಾಷ್ಟಮಿ ೦—
ಶ್ರೀಮನ್ ಮಧ್ವಾ
ಇಂಗ್ಲೀಷ್ ಕವಿ
೦—೬—೦;
೦—೪—೦;

ನಮ್ಮಲ್ಲಿ
ಕನ್ನಡ ಗ್ರಂಥ